# ಅಧ್ಯಾಯ ೮

# ಆರ್ಥಿಕ ಪ್ರವೃತ್ತಿಗಳು

ಒಂದು ಪ್ರದೇಶದ ಆರ್ಥಿಕ ಪ್ರಗತಿಯನ್ನಾಗಲೀ, ಆರ್ಥಿಕ ಪ್ರವೃತ್ತಿಯನ್ನಾಗಲೀ ಅಭ್ಯಸಿಸಬೇಕಾದಲ್ಲಿ ಅಲ್ಲಿನ ನೈಸರ್ಗಿಕ ಮತ್ತು ಆರ್ಥಿಕ ಸಂಪನ್ಮೂಲಗಳು, ಮಾನವ ಶಕ್ತಿಯ ಬಳಕೆ, ಕೈಗಾರಿಕೀಕರಣದ ಸಾಧ್ಯತೆಗಳು, ವ್ಯಾಪಾರ, ವಾಣಿಜ್ಯದ ಪ್ರಗತಿ, ಮಾರುಕಟ್ಟೆಗಳ ಸೌಲಭ್ಯ, ಆಮದು-ರಫ್ತುಗಳು, ಉದ್ಯೋಗಾವಕಾಶಗಳು ಮೊದಲಾದವುಗಳ ಜೊತೆಗೆ ಸಂಘಟಿತ ಮತ್ತು ಅಸಂಘಟಿತ ಹಣಕಾಸು ಸಂಸ್ಥೆಗಳು, ಸಾರಿಗೆ ಸೌಲಭ್ಯ, ಸಂಪರ್ಕ ಸಾಧನಗಳು ಮುಂತಾದವುಗಳ ಸೌಲಭ್ಯವನ್ನು ಅವಲೋಕಿಸಬೇಕಾಗುತ್ತದೆ. ಗುಲಬರ್ಗಾ ಜಿಲ್ಲೆಯು ರಾಜ್ಯದಲ್ಲಿ ಬಿಜಾಪುರದ ನಂತರ ಎರಡನೆಯ ದೊಡ್ಡ ಜಿಲ್ಲೆಯಾಗಿದೆ. ೧೯೯೫ರಲ್ಲಿ ಜಿಲ್ಲೆಯಲ್ಲಿ ೧೩೮೬ ಹಳ್ಳಿಗಳಿದ್ದು, ಆ ಪೈಕಿ ೧೩೦೫ ಜನ ವಸತಿ ಇರುವ ಮತ್ತು ೮೧ ಜನ ವಸತಿ ಇಲ್ಲದಿರುವ ಹಳ್ಳಿಗಳಿದ್ದವು. ೧೯೯೧ರ ಜನಗಣತಿಯ ಪ್ರಕಾರ ಇಲ್ಲಿನ ಜನಸಂಖ್ಯೆ ೨೫.೮೨ ಲಕ್ಷ ಇದ್ದು, ರಾಜ್ಯದ ಶೇ. ೫.೭೪ ರಷ್ಟಿತ್ತು. ಇಲ್ಲಿನ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ ೧೫೯ ಇದ್ದು, ಇದು ರಾಜ್ಯದ ಜನಸಾಂದ್ರತೆಗಿಂತ (೨೫೪) ಕಡಿಮೆ ಇರುವುದನ್ನು ಕಾಣಬಹುದು. ಈ ಜಿಲ್ಲೆಯಲ್ಲಿ ೧೯೦೧-೧೯೭೦ರ ವಾಡಿಕೆ ಮಳೆಯು ವಾರ್ಷಿಕ ಸರಾಸರಿ ೭೭೭.೫ ಮಿ.ಮೀ. ಇದ್ದು, ೧೯೯೩ರಲ್ಲಿ ೭೦೮.೭ ಮಿ.ಮೀ. ಇದ್ದಿತು. ಜಿಲ್ಲೆಯಲ್ಲಿ ೧೯೯೩-೯೪ರಲ್ಲಿ ೬೮,೭೧೯ ಹೆಕ್ಟೇರ್ ಅರಣ್ಯ ಪ್ರದೇಶ ೧,೧೮,೫೪೧ ಹೆಕ್ಟೇರ್ ಸಾಗುವಳಿಗೆ ಲಭ್ಯವಿಲ್ಲದ ಭೂಮಿ ಇದ್ದಿತು. ಒಟ್ಟು ಬಿತ್ತನೆಯಾದ ಪ್ರದೇಶ, ೧,೩೫,೮೬೨ ಹೆಕ್ಟೇರ್ ಇದ್ದು, ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾದ ಪ್ರದೇಶ ೧,೫೬,೩೫೭ ಹೆಕ್ಟೇರ್ ಇದ್ದಿತು.

## ಸರ್ವೇಕ್ಷಣೆ

ಗುಲಬರ್ಗಾ ಜಿಲ್ಲೆಯಲ್ಲಿನ ಆರ್ಥಿಕ ಪ್ರವೃತ್ತಿಯನ್ನು ತಿಳಿಯಲು, ಪ್ರಯೋಗಾತ್ಮಕವಾಗಿ ೧೯೬೧ರಲ್ಲಿ ಜನಗಣತಿ ಇಲಾಖೆಯ ವತಿಯಿಂದ ನಡೆಸಿದ ಜಿಲ್ಲೆಯ ಮೂರು ವಿವಿಧ ಭಾಗಗಳಲ್ಲಿನ ಗ್ರಾಮಗಳ, ಸವಿವರವಾದ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸಲು ನಡೆಸಿದ ಸರ್ವೇಕ್ಷಣೆಯಲ್ಲಿ ಹದನೂರು ಗ್ರಾಮವೂ ಒಂದು. ಹದನೂರು (ಸುರಪುರ ತಾಲೂಕು) ಗ್ರಾಮದ ಸರ್ವೇಕ್ಷಣೆಯ ಬಗ್ಗೆಯ ವಿವರಗಳಲ್ಲಿ ಆರ್ಥಿಕವಾಗಿ ಸಂಬಂಧಪಟ್ಟ ಕೆಲವು ಅಂಶಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಹದನೂರು, ಸುರಪುರ ತಾಲೂಕಿನ ರಸ್ತೆ ಬದಿಗಿರುವ ಒಂದು ಗ್ರಾಮ. ಇದು ಉತ್ತರ ಮೈದಾನ ಪ್ರದೇಶದಲ್ಲಿದೆ. ಇದರ ಒಟ್ಟು ವಿಸ್ತೀರ್ಣ ೩,೦೧೨ ಎಕರೆ. ೧೯೬೧ರಲ್ಲಿ ಸುಮಾರು ೮ ಎಕರೆ ಪ್ರದೇಶ ಗೋಮಾಳವಾಗಿದ್ದು, ೪೫ ಎಕರೆ

ಹದನೂರು ನಾಲೆ ಆಕ್ರಮಿಸಿದ್ದಿತು. ಸುಮಾರು ೩೨ ಎಕರೆ ಪ್ರದೇಶವು ಗಾಡಿ ರಸ್ತೆ ಮತ್ತು ೨೫ ಎಕರೆ ಪ್ರದೇಶ ಫೋಟಖರಾಬ್ ಭೂಮಿಯಾಗಿದ್ದಿತು. ಇಲ್ಲಿನ ಜನಸಂಖ್ಯೆ ೧೯೫೧ರಲ್ಲಿ ೮೦೩ ಇದ್ದು ೧೯೬೧ರಲ್ಲಿ ೧೧೪೦ ಇದ್ದಿತು. ಗ್ರಾಮದಲ್ಲಿ ಅಂಚೆ ಕಛೇರಿ ಇರಲಿಲ್ಲ. ೧೯೫೧ರಲ್ಲಿ ಒಂದು ಪ್ರೈಮರಿ ಶಾಲೆ ಪ್ರಾರಂಭವಾಗಿದ್ದಿತು. ಗ್ರಾಮದಲ್ಲಿ ೧೮೦ ಮನೆಗಳಿದ್ದು ಅವುಗಳ ವಿವರ ಹೀಗಿದೆ.

ಒಟ್ಟು ಮನೆಗಳು ೧೮೦, ಒಟ್ಟು ಕೋಣೆಗಳು ೩೭೪, ಕುಟುಂಬದ ಒಟ್ಟು ಸದಸ್ಯರು ೯೫೦, ಒಂದು ಕೋಣೆ ಇರುವ ಮನೆ ೭೨ (೩೦೧ ಸದಸ್ಯರು), ಶೇ. ೩೯.೯೯, ಎರಡು ಕೋಣೆ ಇರುವ ಮನೆ ೫೮ (೩೧೮ ಸದಸ್ಯರು) ಶೇ. ೩೨.೩೩, ಮೂರು ಕೋಣೆ ಇರುವ ಮನೆ ೩೦ (೨೦೦ ಸದಸ್ಯರು) ಶೇ. ೧೬.೬೭, ನಾಲ್ಕು ಕೋಣೆ ಇರುವ ಮನೆ ೧೬ (೯೮ ಸದಸ್ಯರು) ಶೇ. ೮.೮೯, ಐದು ಕೋಣೆ ಇರುವ ಮನೆ ೧ (೭ ಸದಸ್ಯರು) ಶೇ. ೦.೫೫, ಐದು ಕೋಣೆಗಿಂತಲೂ ಹೆಚ್ಚು ಇರುವ ಮನೆ ೩ (೨೬ ಸದಸ್ಯರು) ಶೇ. ೧.೬೭.

ಈ ಮನೆಗಳಲ್ಲಿ ಶೇ. ೯೬.೬೭ರಷ್ಟು ಮನೆಗಳಿಗೆ ಮಣ್ಣಿನ ಛಾವಣಿ ಇದ್ದು ಶೇ. ೧.೧೧ ಮನೆಗಳಿಗೆ ಸಿಮೆಂಟಿನ ಛಾವಣಿ ಇದ್ದಿತು. ಶೇ. ೯೮.೮೯ ಮನೆಗಳಿಗೆ ಕಲ್ಲಿನ ಗೋಡೆಗಳಿದ್ದು, ಎರಡು ಲಂಬಾಣಿಗಳ ಮನೆಗಳಿಗೆ ಮಾತ್ರ ಮಣ್ಣಿನ ಗೋಡೆಗಳಿದ್ದವು. ಮನೆ ಕಟ್ಟಲು ಉಪ್ಪಾರರನ್ನು (ಗಾರೆ ಕೆಲಸದವರನ್ನು) ಪಕ್ಕದ ಗ್ರಾಮದಿಂದ ಕರೆತರುತ್ತಿದ್ದರು. ಒಬ್ಬ ನುರಿತ ಕೆಲಸಗಾರನಿಗೆ ದಿನಗೂಲಿ ರೂ. ೩.೫೦ ಮತ್ತು ಆತನ ಸಹಾಯಕನಿಗೆ ರೂ. ೧.೫೦ ಇದ್ದಿತು. ಸರಾಸರಿ ೩ ಅಡಿ ಉದ್ದ, ೩ ಅಡಿ ಎತ್ತರದ ಗೋಡೆಯನ್ನು ಒಬ್ಬ ಕೂಲಿಯವನು ಕಟ್ಟುತ್ತಿದ್ದನು. ಗ್ರಾಮದ ಜನರಲ್ಲಿ ಇದ್ದ ಗ್ರಾಹಕ ವಸ್ತುಗಳಲ್ಲಿ, ೭ ಪೆಟ್ರೋಮ್ಯಾಕ್ಸ್ ದೀಪಗಳು, ೧೯ ಟಾರ್ಚ್‌ಗಳು, ೭ ಸ್ಟವ್‌ಗಳು, ೬ ಸೈಕಲ್‌ಗಳು, ೫ ರೇಡಿಯೋ, ೧೫ ಕೈಗಡಿಯಾರ, ಒಂದು ಗೋಡೆ ಗಡಿಯಾರ ಮತ್ತು ೧ ಕ್ಯಾಮೆರಾ ಇದ್ದವು.

ಗ್ರಾಮದಲ್ಲಿ ಆರ್ಥಿಕವಾಗಿ ಯಾವ ಸಂಪನ್ಮೂಲಗಳೂ ಇರಲಿಲ್ಲ. ಮಾದಿಗ ಮತ್ತು ಹೊಲೆಯರ ಪಂಗಡಕ್ಕೆ ಸೇರಿದ ಮೂರು ಮಂದಿ ಕಲ್ಲಿನ ಕೆಲಸವನ್ನು ಮಾಡುತ್ತಿದ್ದರು. ಇಲ್ಲಿ ಯಾವ ಕೈಗಾರಿಕೆಗಳೂ ಇರಲಿಲ್ಲ. ಕೇವಲ ಬಡಗಿ ಹಾಗೂ ಮೋಚಿಗಳಿಬ್ಬರದೇ ಅಲ್ಲಿನ ಕೈ ಕೆಲಸವಾಗಿದ್ದಿತು. ಅವರಿಗೂ ಅವರ ಕಸುಬಿನಿಂದ ಜೀವನ ಸಾಗಿಸಲು ಸಾಧ್ಯವಾಗುತ್ತಿರಲಿಲ್ಲ. ಹಣದ ವ್ಯವಹಾರವೂ ಹೆಚ್ಚು ಇರಲಿಲ್ಲ. ೧೯೫೯ರಲ್ಲಿ ಒಂದು ಸೇವಾ ಸಹಕಾರ ಸಂಘವು ಪ್ರಾರಂಭವಾದಂದಿನಿಂದ ರೈತರಿಗೆ ಸಾಲ ಕೆಲಮಟ್ಟಿಗೆ ದೊರಕಲು ಪ್ರಾರಂಭವಾಯಿತು. ಸರ್ಕಾರವು ೧೫೦೦ ರೂ.ಗಳನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಕೊಟ್ಟಿದ್ದಿತು. ಮಲ್ಲಾಬುರ್ಖುರಗ್, ಶಹಾಪುರ ಮತ್ತು ಬಿಜಾಪುರದ ವರ್ತಕರು ಇಲ್ಲಿನ ರೈತರಿಗೆ ಸಾಲದ ಸೌಲಭ್ಯವನ್ನು ಆಗಾಗ್ಗೆ ಒದಗಿಸುತ್ತಿದ್ದರು. ಈ ಗ್ರಾಮದಲ್ಲಿ ಮಾರುಕಟ್ಟೆ ಇರಲಿಲ್ಲ. ಇಲ್ಲಿನ ಪ್ರಮುಖ ಸರಕು ಹತ್ತಿ ಆಗಿದ್ದಿತು. ಹತ್ತಿಯನ್ನು ಎತ್ತಿನ ಗಾಡಿ ಅಥವಾ ಲಾರಿಗಳಲ್ಲಿ ಬಿಜಾಪುರ, ಶಹಾಪುರಗಳಿಗೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದರು.

ಗ್ರಾಮದಲ್ಲಿ ಕೃಷಿ ಕೆಲಸಗಾರರಿಗೆ ಎಕರೆಗೆ ತಗಲುತ್ತಿದ್ದ ಖರ್ಚು ಈ ರೀತಿ ಇದ್ದಿತು. (ರೂ.ಗಳಲ್ಲಿ)

| | ಜೋಳ | ಹತ್ತಿ |
|---|---|---|
| ಭೂಮಿಯ ಸಿದ್ಧತೆ, ಉಳುವುದು ಇತ್ಯಾದಿ | ೬.೦೦ | ೬.೦೦ |
| ಬೀಜ ಹಾಗೂ ಬಿತ್ತನೆಯ ಖರ್ಚು | ೧೦.೦೦ | ೧೦.೦೦ |
| ಕಳೆ ಕೀಳುವುದು ಇತ್ಯಾದಿ | ೧೦.೦೦ | ೧೦.೦೦ |
| ಕುಯಿಲು | ೧೨.೦೦ | ೧೦.೦೦ |
| ಗೊಬ್ಬರ | ೧೬.೦೦ | ೧೬.೦೦ |
| ಇತರೆ ಖರ್ಚು | ೫.೦೦ | ೫.೦೦ |
| ಒಟ್ಟು | ೫೯.೦೦ | ೫೭.೦೦ |

ಒಂದು ಎಕರೆಗೆ ಸರಾಸರಿ ಇಳುವರಿ ೨ ಕ್ವಿಂಟಾಲ್ ಜೋಳ (ಬೆಲೆ ರೂ. ೧೦೦) ಮತ್ತು ೧.೫ ಕ್ವಿಂಟಾಲ್ ಹತ್ತಿ ಬೆಲೆ (ಬೆಲೆ ರೂ. ೧೬೫) ಇದ್ದಿತು.

ಗ್ರಾಮದಲ್ಲಿದ್ದ ಜಾನುವಾರುಗಳು ೫೩೬, ಅವುಗಳಲ್ಲಿ ೧೩೮ ಹಸುಗಳು, ೩೦೫ ಎತ್ತುಗಳು, ೮೩ ಕರು, ೨೨ ಕೋಣ, ೧೧೬ ಎಮ್ಮೆ ಹಾಗೂ ೯೦ ಎಮ್ಮೆ ಕರುಗಳು, ೩೦೭ ಕುರಿಗಳು ಮತ್ತು ೫ ಕುದುರೆಗಳು ಇದ್ದವು. ಜಾನುವಾರುಗಳ ಆರ್ಥಿಕ ಉಪಯೋಗವನ್ನು ತಿಳಿಯಲು ಒಂದು ಕುಟುಂಬದಲ್ಲಿನ ಜಾನುವಾರುಗಳ ಸಂಖ್ಯೆ, ಅವುಗಳಿಗೆ ತಗಲುವ ಖರ್ಚು ಮತ್ತು ವರಮಾನಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.

ಒಟ್ಟು ಸಂಖ್ಯೆ (೧೩) ಕೆಲಸ ಮಾಡುವ ಎತ್ತುಗಳು ೪, ಗೂಳಿ ೧, ಹಸು ೨, ಕರು ೨, ಎಮ್ಮೆ ೧, ಕರು ೩.

ವಾರ್ಷಿಕ ಖರ್ಚು : ಜೋಳದ ಕಡ್ಡಿ (೨೬ ಗಾಡಿ) - ರೂ. ३೯೦.೦೦

ಹೊಟ್ಟು (ಅಂಬಾರಿಗೆ) ೧೨೦ ರೂ. ಸೂರ್ಯಕಾಂತಿ ಹಿಂಡಿ ರೂ. ೨೨೦.೦೦

ಹತ್ತಿಬೀಜ ೩೬೦ ರೂ., ಹುರುಳಿ ೨ ಚೀಲ - ೮೦ ರೂ.

ಜೋಳ ೨ ಚೀಲ, ೯೦.೦೦, ಇತರೆ ಖರ್ಚು ೪೦ ರೂ.

ಒಟ್ಟು ೧೩೦೦ ರೂ.

ವರಮಾನ :- ಗೊಬ್ಬರ (೪೦ ಗಾಡಿ) ೨೦೦ ರೂ., ಹಾಲು ೨೫೦ ರೂ., ಹೊಲದಲ್ಲಿನ ಕೆಲಸದಲ್ಲಿನ ಮೌಲ್ಯ ೧೮೦೦ ರೂ. ಮೊತ್ತ ೨,೨೫೦ ರೂ. ಒಟ್ಟು ಉಳಿತಾಯ ೯೫೦ ರೂ. (೧೩ ಜಾನುವಾರುಗಳಿಗೆ).

ಗ್ರಾಮದಲ್ಲಿದ್ದ ಕೈಗಾರಿಕೆಗಳು ಹಾಗೂ ಇತರ ಕಸುಬುಗಳು : ಹದನೂರು ಗ್ರಾಮದಲ್ಲಿ ಚರ್ಮದ ಕೈಗಾರಿಕೆ, ಬಟ್ಟೆ ಹೊಲೆಯುವಿಕೆ, ಮರಗೆಲಸ, ಹತ್ತಿ ಸಂಸ್ಕರಣೆ, ಎಣ್ಣೆಬೀಜ ಸಂಸ್ಕರಣೆ ಮೊದಲಾದವು ಇದ್ದವು. ಕಮ್ಮಾರರಾಗಲಿ, ಅಕ್ಕಸಾಲಿಗರಾಗಲಿ ಇರಲಿಲ್ಲ. ವ್ಯಾಪಾರೋದ್ಯಮವು ಹೆಚ್ಚು ಇರಲಿಲ್ಲ. ಕೇವಲ ಒಂದು ಬಳೆ ಅಂಗಡಿ ಮತ್ತು ಎರಡು ಕಿರಾಣಿ ಅಂಗಡಿಗಳಿದ್ದವು. ಕಿರಾಣಿ ಅಂಗಡಿಗಳ ವಾರ್ಷಿಕ ವಹಿವಾಟು ರೂ. ೫೦೦ ಇದ್ದಿತು. ಕೃಷಿ ಕೆಲಸಗಾರರಿಗೆ ವೇತನ ದಿನಕ್ಕೆ ೧ ರೂ.ನಿಂದ ೨ ರೂ. (ಹೆಚ್ಚು ಕೆಲಸವಿಲ್ಲದ ಕಾಲದಲ್ಲಿ), ಮತ್ತು ೩ ರೂ. (ಹೆಚ್ಚು ಕೆಲಸವಿರುವಾಗ) ಇದ್ದಿತು.

ಸಾಲಗಾರರ ಸಂಖ್ಯೆ ಗ್ರಾಮದಲ್ಲಿ ಹೆಚ್ಚು ಇದ್ದಿತು. ೧೮೦ ಮನೆಗಳಲ್ಲಿ ೧೫೮ (ಶೇ. ೮೭-೮೮) ಮನೆಗಳಲ್ಲಿನ ಜನರು ಸಾಲವನ್ನು ಪಡೆದಿದ್ದರು. ಒಟ್ಟು ಸಾಲದ ಹೊರೆ ರೂ. ೧,೯೨,೪೭೦ ಇದ್ದು ಸರಾಸರಿ ಪ್ರತಿ ಮನೆಗೆ ರೂ. ೧೨೧೮ ಇದ್ದಿತು. ಸಾಲ ಪಡೆಯುವುದಕ್ಕೆ ಕಾರಣಗಳೆಂದರೆ, ವಿವಾಹ, ಭೂ ಅಭಿವೃದ್ಧಿ ಅಥವಾ ಜಮೀನು ಖರೀದಿ.

ಗ್ರಾಮದಲ್ಲಿ ಒಟ್ಟು ಸಾಲದ ಪ್ರಮಾಣ ರೂ. ೧,೯೨,೪೭೦ ಇದ್ದು, ಅದರಲ್ಲಿ ರೂ. ೧೯,೨೩೦ (ಶೇ. ೧೦) ಸಹಕಾರಿ ಸಂಘಗಳಿಗೆ ಸೇರಿದ್ದು ಉಳಿದದ್ದು ಸರ್ಕಾರರಿಂದ ಪಡೆದ ಸಾಲವಾಗಿದ್ದಿತು. ೧೯೫೫ನೇ ಸಾಲಿನಲ್ಲಿ ಗ್ರಾಮದಲ್ಲಿ ಪತ್ತಿನ ಸಹಕಾರ ಸಂಘ ೫೪ ಸದಸ್ಯರೊಂದಿಗೆ ಪ್ರಾರಂಭವಾಯಿತು. ೧೯೬೦ರಲ್ಲಿ ಸಂಘವು ರೂ. ೧೧,೨೧೦ ರೂ.ಗಳನ್ನು ಸಾಲವಾಗಿ ಕೊಟ್ಟಿದ್ದಿತು. ಗ್ರಾಮದಲ್ಲಿ ನಿವಾಸಿತರ ವರಮಾನ ಈ ರೀತಿ ಇದ್ದಿತು. ಸ್ವಂತ ಜಮೀನು ಇದ್ದು ಉಳುತ್ತಿದ್ದವರ ವರಮಾನ ಮಾಸಿಕ ರೂ. ೨೫ ರಿಂದ ರೂ. ೧೦೦ ಇದ್ದಿತು. ಶೇ. ೭೮ರಷ್ಟು ಜಮೀನು ಉಳುತ್ತಿದ್ದು ಮಾಲೀಕರ ವರಮಾನ ೧೦೦ ರೂ.ಗಿಂತಲೂ ಹೆಚ್ಚಿದ್ದಿತು

**ಜೀವನ ಮಟ್ಟ**

ಅಂದಿನ ಹೈದರಾಬಾದ್ ಸರ್ಕಾರದ ೧೯೪೮ರ ಒಂದು ಪ್ರಕಟಣೆಯಲ್ಲಿ ಗುಲಬರ್ಗಾವೂ ಸೇರಿದಂತೆ ಇದ್ದ ಹೈದರಾಬಾದ್ ರಾಜ್ಯದ ಆರ್ಥಿಕ ನೈತಿಕತೆಗಳನ್ನು ಕುರಿತಂತೆ ಈ ರೀತಿ ಉಲ್ಲೇಖಿಸಲಾಗಿದೆ.

"ಹೈದರಾಬಾದಿನ ಆರ್ಥಿಕ ಪರಿಸ್ಥಿತಿ ಹೆಚ್ಚು ಕಡಿಮೆ ಊಳಿಗಮಾನ್ಯ ಪದ್ಧತಿಯಾಗಿದ್ದಿತು. ರಾಜ್ಯದ ಸುಮಾರು ಶೇಕಡ ೪೫ ಭಾಗ ಜಾಗೀರದಾರರು ಮತ್ತು ಜಮೀನುದಾರರ ಆಳ್ವಿಕೆಯಲ್ಲಿತ್ತು. ಜನಸಂಖ್ಯೆಯು ಬಡತನ ಮತ್ತು ಜಿಪುಣತನವನ್ನು

ಹೆಚ್ಚಿಸುವಷ್ಟು ವೇಗದಲ್ಲಿ ಬೆಳೆಯುತ್ತಿತ್ತು. ಅನಕ್ಷರತೆ ಮತ್ತು ಮೂಢತೆ ಹೆಚ್ಚಾಗಿತ್ತು. ಸರಾಸರಿ ತಲಾ ಆದಾಯ, ಸರಾಸರಿ ಜೀವನಮಟ್ಟ ಕೆಲಸದ ಸರಾಸರಿ ಮೌಲ್ಯಗಳು ಬಡಜನತೆ ಜೀವನ ಸಾಗಿಸಲು ಅಸಾಧ್ಯವಾಗುವಷ್ಟು ಕಡಿಮೆ ಪ್ರಮಾಣದಲ್ಲಿತ್ತು. ಶೇಕಡಾ ೯೦ಕ್ಕಿಂತಲೂ ಹೆಚ್ಚಿನ ಜನತೆ ಹಳೇ ಅಭ್ಯಾಸಗಳಿಗೂ, ನಡತೆಗಳಿಗೂ ಬದ್ಧರಾಗಿ ಬಲಿಪಶುಗಳಂತಾಗಿದ್ದರು."

ಬೆಳವಣಿಗೆ ಮತ್ತು ಅಭ್ಯುದಯಗಳು ಸ್ವರ್ಗದಿಂದ ಬರಬೇಕಾದ ಕೊಡುಗೆಯೆಂದೂ, ಮಾನವನ ಪ್ರಯತ್ನವಲ್ಲವೆಂದೂ ಜನ ನಂಬಿದ್ದರು. ಆರ್ಥಿಕವಾಗಿ ಹೈದರಾಬಾದ್ ರಾಜ್ಯವು ಕೆಲವು ಆಹಾರ ಧಾನ್ಯಗಳಲ್ಲಿ ಕೊರತೆಯನ್ನು ಅನುಭವಿಸುತ್ತಿತ್ತು. ಮತ್ತು ಗ್ರಾಹಕ ವಸ್ತುಗಳ ಆಮದಿನ ಬಗ್ಗೆ ಹೆಚ್ಚಿನ ಮಟ್ಟದಲ್ಲಿ ಅವಲಂಬಿತವಾಗಿತ್ತು. ಕೆಲವು ಅತಿ ಹೆಚ್ಚು ಅವಶ್ಯಕತೆಯುಳ್ಳ ಪದಾರ್ಥಗಳಾದ ಬಟ್ಟೆ, ಕಟ್ಟಡ ಸಾಮಗ್ರಿ, ಆಹಾರ ಪದಾರ್ಥಗಳಿಗಾಗಿ, ಹೆಚ್ಚಿನ ಮಟ್ಟಿಗೆ ಬಾಹ್ಯ ಮಾರುಕಟ್ಟೆಗೆ ಅವಲಂಬಿತರಾಗಿದ್ದರು. ಅಭ್ಯುದಯಕ್ಕೆ ಬೇಕಾದ ವಿದ್ಯುಚ್ಛಕ್ತಿ ಕಡಿಮ ದರದಲ್ಲಿ ದೊರಕುವುದಾಗಲೀ ಅಥವಾ ಉತ್ಪಾದನೆಯಾಗಲೀ ಇರಲ್ಲಿಲ. ಗುಲಬರ್ಗಾ ಜಿಲ್ಲೆಯೂ ಸೇರಿದಂತಿರುವ ಹೈದರಾಬಾದ್ ರಾಜ್ಯದಲ್ಲಿ ಕೃಷಿ ಪರಿಸ್ಥಿತಿಯ ಬಗ್ಗೆ ಹೇಳುವುದಾದರೆ "ಮಳೆ ಕಡಿಮೆ ಆದ್ದರಿಂದ ರೈತರು ತರೀ ಜಮೀನಿನಲ್ಲಿ ಬೆಳೆಯುವ ಬೆಳೆಗಳನ್ನು ಬೆಳೆಯಲು ಉತ್ಸುಕತೆ ತೋರುತ್ತಿರಲಿಲ್ಲ. (ಕೆಲವು ಪ್ರದೇಶಗಳಲ್ಲಿ ಮಾತ್ರ) ನದಿ, ಬಾವಿಗಳಿಂದ ದೊರೆಯುವ ನೀರಿನ ಉಪಯೋಗವನ್ನು ಪಡೆದುಕೊಂಡು, ಖುಷ್ಕಿ ಬೆಳೆಗಳಿಗಿಂತಲೂ ಲಾಭದಾಯಕವಾದ ತೋಟದ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದರು. ಆಹಾರಕ್ಕಾಗಿ ಜೋಳ ಅಥವಾ ಗೋಧಿಯನ್ನು ಜನರು ಉಪಯೋಗಿಸುತ್ತಿದ್ದರು." ರೈತರ ಮತ್ತು ದನಕರುಗಳ ಸ್ವಾಭಾವಿಕ ಲಕ್ಷಣಗಳು ಅವರು ಮತ್ತು ಅವರು ಉಪಯೋಗಿಸುವ ಆಹಾರ ಬೆಳೆಗಳನ್ನು ಪ್ರತಿಬಿಂಬಿಸುತ್ತವೆ. ಗುಲಬರ್ಗಾ ಜಿಲ್ಲೆಯ ಇಂದಿನ ಆರ್ಥಿಕ, ಸಾಮಾಜಿಕ ಜೀವನದಲ್ಲೂ ಸಾಕಷ್ಟು ಬದಲಾವಣೆಗಳು ಕಂಡು ಬರುವುವು. ಸ್ವಾತಂತ್ರ್ಯಾನಂತರ, ಅದರಲ್ಲಿಯೂ ವಿಶೇಷವಾಗಿ ರಾಜ್ಯ ಪುನರ್ ರಚನೆಯ ನಂತರ ಪ್ರಾರಂಭಿಸಲಾದ ಅಭಿವೃದ್ಧಿ ಯೋಜನೆಗಳ ಮೂಲಕ ಉಂಟಾದ ಆರ್ಥಿಕ ಮುನ್ನಡೆಯನ್ನೂ, ಸಮಾಜ ಅಭಿವೃದ್ಧಿಯನ್ನೂ ಕಾಣಬಹುದು.

೧೯೫೨ರಲ್ಲಿ ಜಹಗೀರುಗಳ ರದ್ದತಿಯಿಂದ ಮತ್ತು ಕೃಷಿ ಕ್ಷೇತ್ರದಲ್ಲಿ ಮಾಡಿದ ಸುಧಾರಣೆಗಳಿಂದ ಜಿಲ್ಲೆಯ ಗ್ರಾಮೀಣ ಜನತೆಯ ಜೀವನ ಮಟ್ಟವು ಸುಧಾರಿಸಲ್ಪಟ್ಟಿತು. ನಗರೀಕರಣವು ಹೆಚ್ಚಾಗಿದ್ದುದರಿಂದಲೂ ಆಧುನಿಕ ಕೃಷಿ ವಿಧಾನಗಳಿಂದಲೂ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಜಮೀನು ಕೃಷಿಗೆ ಒಳಪಡಿಸಲ್ಪಟ್ಟಿತು ಮತ್ತು ಕೈಗಾರಿಕೀಕರಣವೂ ಗಣನೀಯವಾಗಿ ಹೆಚ್ಚಿಲ್ಪಟ್ಟಿತು. ಸಾಂಸ್ಥಿಕ ಹಣಕಾಸು ಸಂಸ್ಥೆಗಳು, ಕೃಷಿ, ಕೈಗಾರಿಕೆ ಮತ್ತು ಇತರ ಉತ್ಪಾದಕ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚು ಪ್ರೋತ್ಸಾಹಿಸಲು ಸರ್ಕಾರ ಉತ್ತೇಜನಾತ್ಮಕ ಕ್ರಮ ಕೈಗೊಂಡಿತು. ಅನೇಕ ಭೂ ಸುಧಾರಣೆ ನಿಯಮಾವಳಿಗಳಿಂದ, ಕೃಷಿಕರಿಗೆ ಶಾಶ್ವತವಾಗಿ ಭೂಮಿಯು ದೊರಕಿ, ಕೃಷಿ ಉತ್ಪನ್ನ ಹೆಚ್ಚಳವಾಯಿತು. ಇದರ ಜೊತೆಗೆ ಇತರೇ ಉದ್ಯಮಗಳೂ ಹೆಚ್ಚಿದ ಕಾರಣ ಜೀವನಮಟ್ಟ ಸುಧಾರಿಸಿತು ಎಂದು ಮೇಲುನೋಟಕ್ಕೆ ಕಂಡುಬರುವುದು. ಆದರೆ ಜೀವನಮಟ್ಟವನ್ನು ತಿಳಿಯುವ ಸಲುವಾಗಿ ಗುಲಬರ್ಗಾ ಜಿಲ್ಲೆಯಲ್ಲಿ ಯಾವ ವ್ಯವಸ್ಥಿತ ಸಮೀಕ್ಷೆಯು ನಡೆದಿಲ್ಲವಾದ ಕಾರಣ ಇಲ್ಲಿನ ಜೀವನ ಮಟ್ಟದೊಂದಿಗೆ ಹೋಲಿಸುವುದು ಕಷ್ಟಸಾಧ್ಯ. ಗುಲಬರ್ಗಾ ಒಂದು ವಿಭಾಗೀಯ ಕಛೇರಿ ಇರುವ ಪಟ್ಟಣ. ಇದರಂತೆ ವಿಭಾಗೀಯ ಕಛೇರಿ ಇರುವ ಪಟ್ಟಣಗಳೆಂದರೆ, ಬೆಳಗಾವಿ, ಮೈಸೂರು ಹಾಗೂ ಬೆಂಗಳೂರು. ಈ ಮೂರೂ ಪಟ್ಟಣಗಳಿಗಿಂತಲೂ ಗುಲಬರ್ಗಾದಲ್ಲಿನ ಜೀವನಮಟ್ಟ ವಿಭಿನ್ನವಾಗಿದೆ. ಆದರೆ ಒಂದು ಅಂಶ ಸ್ಪಷ್ಟವಾಗಿ ಗೋಚರಿಸುವುದು. ಅದೆಂದರೆ, ರಾಜ್ಯದ ಇತರೆ ವಿಲೀನಗೊಂಡ ಪ್ರದೇಶಗಳ ತುಲನಾತ್ಮಕ ಅಧ್ಯಯನವನ್ನು ಹೈದರಾಬಾದ್ ಪ್ರದೇಶದ ಜಿಲ್ಲೆಯೊಂದಿಗೆ ಹೋಲಿಸಿದಾಗ, ಈ ಪ್ರದೇಶ ಆರ್ಥಿಕ ಅಸಮಾನತೆ ಇರುವುದು ತಿಳಿದುಬರುತ್ತದೆ. ಹೈದರಾಬಾದ್ ಪ್ರದೇಶದ ಮೂರು ಜಿಲ್ಲೆಗಳ ಪೈಕಿ ರಾಯಚೂರಿನ ನಂತರ ಗುಲಬರ್ಗಾದ ಸ್ಥಾನವಿರುವುದು ತಿಳಿಯುತ್ತದೆ.

ಈ ಜಿಲ್ಲೆಯ ಆರ್ಥಿಕ ಬೆಳವಣಿಗೆ ಹಾಗೂ ಅಭಿವೃದ್ಧಿಗಾಗಿ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಯೋಜಿಸಿದೆ. ಇಲ್ಲಿನ ಬೆಳವಣಿಗೆಗೆ ಸ್ಥಳೀಯ ಗ್ರಾಮೀಣ ಜನರ ಸ್ಪಂದನೆಯೂ ಉತ್ತೇಜಿತ ಪ್ರಮಾಣದಲ್ಲಿ ಇಲ್ಲದಿರುವುದೂ ಸಹ ಜೀವನಮಟ್ಟದಲ್ಲಿನ ಅಸಮಾನತೆಗೆ ಕಾರಣವೆಂದೂ ಊಹಿಸಬಹುದು.

ದ್ವಿತೀಯ ಮಹಾಯುದ್ಧದ ಅವಧಿಯಲ್ಲಿ ಮತ್ತು ನಂತರದ ಕೆಲವು ವರ್ಷಗಳಲ್ಲಿ ಗ್ರಾಹಕನಿಗೆ ಹೆಚ್ಚಿನ ತೊಂದರೆಗಳುಂಟಾದವು. ಹೆಚ್ಚುತ್ತಿರುವ ಬೆಲೆಗಳು, ಜೀವನಮಟ್ಟದ ಮೇಲೆ ತಮ್ಮ ಪ್ರಭಾವವನ್ನು ಬೀರಲಾರಂಭಿಸಿದವು. ೧೯೪೪ರಿಂದ ೧೯೭೫ರವರೆಗೆ ಗುಲಬರ್ಗಾ ಪಟ್ಟಣದ ಕೆಲವು ಸೂಚ್ಯಂಕಗಳನ್ನು ಇಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೧**

(ಆಗಸ್ಟ್ ೧೯೪೩, ಜುಲೈ ೧೯೪೪-೧೦೦)

| ವರ್ಷ | ಆಹಾರ | ಇಂಧನ ಮತ್ತು ವಿದ್ಯುಚ್ಛಕ್ತಿ | ವಸ್ತು | ಬಾಡಿಗೆ | ಇತರೆ | ಮಾದಕ ವಸ್ತುಗಳು | ಸಾಮಾನ್ಯ ಸೂಚ್ಯಂಕ |
|---|---|---|---|---|---|---|---|
| ೧೯೪೮ | ೧೭೭ | ೧೯೯ | ೧೩೦ | ೧೦೦ | ೨೦೩ | ೨೧೦ | ೧೭೮ |
| ೧೯೫೦ | ೧೫೪ | ೧೮೩ | ೧೨೩ | ೧೦೦ | ೧೯೧ | ೨೯೩ | ೧೫೬ |
| ೧೯೫೨ | ೧೩೮ | ೧೫೭ | ೧೨೯ | ೧೦೦ | ೨೦೦ | ೩೧೬ | ೧೪೭ |
| ೧೯೫೪ | ೧೪೬ | ೧೫೭ | ೧೨೫ | ೧೦೦ | ೧೮೬ | ೩೨೨ | ೧೫೦ |
| ೧೯೫೬ | ೧೬೯ | ೧೫೬ | ೧೩೦ | ೧೦೦ | ೧೯೯ | ೨೬೯ | ೧೬೫ |
| ೧೯೫೮ | ೧೪೪ | ೧೨೮ | ೧೨೪ | ೧೦೦ | ೧೯೦ | ೨೬೩ | ೧೪೬ |
| ೧೯೬೧ | ೧೬೦-೭೨ | ೧೫೫-೦೭ | ೧೩೪-೦೬ | ೧೦೦ | ೧೪೭-೯೬ | ೨೯೨-೬೮ | ೧೬೧-೨೯ |
| ೧೯೬೨ | ೧೬೭-೧೯ | ೧೫೫-೪೫ | ೧೩೪-೧೯ | ೧೦೦ | ೨೦೨-೦೫ | ೨೯೨-೬೮ | ೧೬೫-೪೯ |
| ೧೯೬೩ | ೧೭೫-೧೪ | ೧೫೮-೫೯ | ೧೩೫-೦೬ | ೧೦೦ | ೨೧೧-೭೩ | ೨೯೬-೩೪ | ೧೭೨-೪೯ |
| ೧೯೬೪ | ೨೧೬-೮೫ | ೧೬೧-೯೯ | ೧೪೩-೧೫ | ೧೦೦ | ೨೩೨-೫೩ | ೩೨೨-೨೭ | ೨೦೪-೧೨ |
| ೧೯೬೫ | ೨೪೪-೫೬ | ೧೬೨-೭೨ | ೧೪೫-೦೫ | ೧೦೦ | ೨೧೯-೯೪ | ೩೫೧-೧೯ | ೨೨೨-೨೭ |

ಗುಲಬರ್ಗಾ ಪಟ್ಟಣದಲ್ಲಿ ಸಾಮಾನ್ಯ ಬೆಲೆ ಸೂಚ್ಯಂಕವು ೧೯೪೮ರಲ್ಲ ೧೭೮ ಇದ್ದು, ಆಹಾರ ಪದಾರ್ಥಗಳ ಬೆಲೆ ಸೂಚ್ಯಂಕವು ೧೭೭ ಇದ್ದಿತು. ನಂತರ ೧೯೪೯ರಲ್ಲಿ ಸೂಚ್ಯಂಕವು ಹೆಚ್ಚಾಗಿ, ಪುನಃ ೧೯೫೦ರಿಂದ ೧೯೫೫ರಲ್ಲಿ ಬದಲಾವಣೆಗಳುಂಟಾದವು. ೧೯೫೦ರ ನಂತರದ ದಶಕದಲ್ಲಿ, ಆಹಾರ ಮತ್ತು ಆಹಾರೇತರ ಪದಾರ್ಥಗಳ ಬೆಲೆಯು ಹೆಚ್ಚಾಗಿ, ಬೆಲೆ ಸೂಚ್ಯಂಕವು ಗಮನೀಯವಾಗಿ ಹೆಚ್ಚಿತು. ಇದರಿಂದ ಸಾಮಾನ್ಯ ಗ್ರಾಹಕನಿಗೆ ಜೀವನ ಸಾಗಿಸುವುದು ಕಷ್ಟ ಸಾಧ್ಯವಾಯಿತು. ಯುದ್ಧ ಪೂರ್ವದಲ್ಲಿ ೧ ರೂ.ಗೆ ೪ ಆಣೆಗಳಷ್ಟು ಬೆಲೆಯ ವಸ್ತುಗಳನ್ನು ಖರೀದಿಸಬಹುದಾಗಿದ್ದರೆ, ೧೯೪೧-೧೯೪೨ರಲ್ಲಿ ಇದು ೧೧ ಆಣೆಗೆ ಏರಿ ೪೨-೪೩ರಲ್ಲಿ ೬.೫ ಆಣೆ (೪೦ ಪೈಸೆ) ಮತ್ತು ೧೯೪೩-೪೪ರಲ್ಲಿ ೪.೭೫ (೩೪ ಪೈಸೆ) ಆಣೆ ಆಗಿದ್ದಿತು. ೧೯೬೧ರ ಹೊತ್ತಿಗೆ ಇದರ ಬೆಲೆಯು ೨ ಆಣೆಯಿಂದ ೩ (೧೯ ಪೈಸೆ) ಆಣೆಯವರೆಗೆ ಇದ್ದಿತು. ನಗರೀಕರಣ ಮತ್ತು ನೂತನ ಸಾರಿಗೆ ವಿಧಾನಗಳಿಂದ, ಅತಿ ದೂರದಲ್ಲಿನ ಗ್ರಾಮಗಳಲ್ಲಿ ಜೀವನ ಸುಧಾರಣೆ ಆಗಿದ್ದಿತು ಮತ್ತು ಆಹಾರದ ವಿಧಾನಗಳಲ್ಲಿಯೂ ಬದಲಾವಣೆಗಳಾದವು. ಯುದ್ಧಾನಂತರ ಗ್ರಾಮೀಣ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ಕೊರತೆಯನ್ನು ಮತ್ತು ಭತ್ತದ ಬೀಜಗಳ ಕೊರತೆಯನ್ನು ನೀಗಲೂ, ದವಸದ ಬ್ಯಾಂಕುಗಳು (ಗ್ರೇನ್ ಬ್ಯಾಂಕ್) ಸಹಕಾರಿ ವಲಯದಲ್ಲಿ ಕಾರ್ಯಾರಂಭ ಮಾಡಿದವು. ಉತ್ಪನ್ನಗಳ ಪದಾರ್ಥಗಳ ಬೆಲೆಗಳು ಕೃಷಿಕರ ಆರ್ಥಿಕ ಪರಿಸ್ಥಿತಿಯನ್ನು ತೋರಿಸುತ್ತವೆ. ಹಾಗೆಯೇ ಕೃಷಿ ಕಾರ್ಮಿಕರ ವೇತನವೂ (ಪ್ರಮುಖವಾಗಿ ಕಾಳುಗಳ ರೂಪದಲ್ಲಿ ಕೊಡುವ) ಕೃಷಿಕರ ಆರ್ಥಿಕ ಜೀವನಮಟ್ಟದ ಬಗ್ಗೆ ತಿಳಿಸುತ್ತವೆ. ಈ ದಿಸೆಯಲ್ಲಿ ಮೊದಲಿಗೆ ಜಿಲ್ಲೆಯಲ್ಲಿನ ಬೆಲೆಗಳನ್ನು ಐದು ಹಂತದಲ್ಲಿ ಅಭ್ಯಸಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೧೮೯೦ ರಿಂದ ೧೯೧೪, ೧೯೧೪ ರಿಂದ ೧೯೨೯, ೧೯೩೦ ರಿಂದ ೧೯೫೬, ೧೯೫೬ ರಿಂದ ೧೯೮೦ ರ ನಂತರ, ೧೮೯೦ ರಿಂದ ೧೯೧೪ರವರೆಗಿನ ಕಾಲದಲ್ಲಿ ಬೆಲೆಗಳಲ್ಲಿ ತೀವ್ರ ವ್ಯತ್ಯಾಸ ಕಂಡುಬಂದು, ಇವುಗಳಿಗೆ ಕೃಷಿಯಲ್ಲಿ ಬದಲಾದ ಪರಿಸ್ಥಿತಿ ಎಂದು ತಿಳಿಯಲಾಗಿದೆ. ೧೯೧೩ರಲ್ಲಿ ಭಾರತ ಸರ್ಕಾರವು "ಬೆಲೆ ವಿಚಾರಣೆ ಸಮಿತಿ"ಯನ್ನು ಬೆಲೆಗಳ ಏರಿಕೆಗೆ

ಕಾರಣಗಳನ್ನು ತಿಳಿಯಲು ನೇಮಿಸಿತು. ಈ ಸಮಿತಿಯ ವರದಿಯಲ್ಲಿ ೧೯೦೫ರ ನಂತರ ಬೆಲೆಗಳ ಹೆಚ್ಚಳಕ್ಕೆ ಈ ಕೆಳಕಂಡ ಕೆಲವು ಪ್ರಮುಖ ಕಾರಣಗಳನ್ನು ಕೊಡಲಾಗಿದೆ.

ಅ) ಕೃಷಿ ಉತ್ಪನ್ನಗಳ ಸರಬರಾಜಿನಲ್ಲಿ ಕೊರತೆ (ಜನಸಂಖ್ಯೆಗೆ ಅನುಗುಣವಾಗಿ ಬೆಳೆಗಳು ಹೆಚ್ಚಾಗದಿರುವಿಕೆ, ಹಾಗೂ ಆಹಾರ ಬೆಳೆಗಳ ಬದಲಿಗೆ, ವಾಣಿಜ್ಯ ಬೆಳೆಗಳ ಹೆಚ್ಚಳ ಕಾರಣವೆಂದು ತಿಳಿಸಲಾಗಿದೆ.)

ಆ) ಈ ಕೃಷಿ ಉತ್ಪನ್ನಗಳ ಅಗತ್ಯಗಳ ಹೆಚ್ಚಾಗುವಿಕೆ.

ಇ) ರೈಲು ಮುಂತಾದ ಇತರ ಸಾರಿಗೆ ವೆಚ್ಚವೂ ಸೇರಿ, ಕೃಷಿ ಉತ್ಪನ್ನಗಳ ಬೆಲೆಗಳು ಮೊದಲು ದೊರಕುತ್ತಿದ್ದ ಬೆಲೆಗಳಿಗಿಂತ ಹೆಚ್ಚಾದವು.

ಈ ಹಿನ್ನೆಲೆಯಲ್ಲಿ ಗುಲಬರ್ಗಾ ಜಿಲ್ಲೆಯ ಬೆಳೆಗಳನ್ನು ಅಭ್ಯಸಿಸಿದಾಗ ೧೮೯೦ರ ನಂತರದ ಮಾಹಿತಿಗಳು ದೊರಕಿವೆ. ಹೈದರಾಬಾದ್ ಸರ್ಕಾರದ ರಾಜ್ಯಪತ್ರಗಳಲ್ಲಿ (ಜರಿದಾಯಿ ಅಲಾಮಿಯಾ) ಮಾಹಿತಿಯಂತೆ ೧೮೯೦ರಿಂದ ೧೯೧೩ರವರೆಗೆ ಕೃಷಿ ಉತ್ಪನ್ನಗಳ ಸೂಚ್ಯಂಕಗಳು ಹೀಗಿದ್ದವು.

(ಆಧಾರ ವರ್ಷ : ೧೮೯೦-೧೦೦)

**ಕೋಷ್ಟಕ ೮.೨**

| ವರ್ಷ | ಅಕ್ಕಿ | ಗೋಧಿ | ಜೋಳ |
|---|---|---|---|
| ೧ | ೨ | ೩ | ೪ |
| ೧೮೯೦ | ೧೦೦ | ೧೦೦ | ೧೦೦ |
| ೧೮೯೩ | ೮೩ | ೯೭ | ೧೬೯ |
| ೧೮೯೬ | ೧೪೧ | ೧೭೧ | ೨೧೯ |
| ೧೮೯೮ | ೮೫ | ೧೦೯ | ೧೦೩ |
| ೧೯೦೦ | ೧೩೦ | ೧೭೧ | ೧೮೪ |
| ೧೯೦೩ | ೮೩ | ೭೫ | ೧೧ |
| ೧೯೦೫ | ೧೨೫ | ೧೧೬ | ೧೫೩ |
| ೧೯೦೭ | ೧೪೧ | ೧೮೦ | ೧೮೪ |
| ೧೯೦೯ | ೧೨೦ | ೧೪೪ | ೧೬೨ |
| ೧೯೧೧ | ೧೪೭ | ೧೫೦ | ೧೭೬ |
| ೧೯೧೩ | ೧೬೨ | ೧೬೪ | ೧೮೪ |

೧೮೯೦ರಿಂದ ೧೯೧೩ರವರೆಗಿನ ವರ್ಷಗಳಲ್ಲಿ ೧೮೯೩, ೧೮೯೮, ೧೯೦೩ ವರ್ಷಗಳಲ್ಲಿ ಅಕ್ಕಿ ಮತ್ತು ಗೋಧಿಗಳ ಬೆಲೆ ಹೆಚ್ಚು ಕಡಿಮೆ ಸ್ಥಿರವಾಗಿದ್ದು, ಜೋಳದಲ್ಲಿ ೧೮೯೩ಗಿಂತಲೂ ಬೆಲೆ ಕಡಿಮೆ ಇದ್ದಿರುವುದು ಕಂಡು ಬರುತ್ತದೆ. ೧೮೯೯ರಲ್ಲಿ ಜೋಳದ ಬೆಲೆಯು ಅಧಿಕವಾಗಿದ್ದು, ಕ್ರಮೇಣ ಕಡಿಮೆಯಾಗಿರುವುದು ಕಂಡುಬರುತ್ತದೆ. ನಂತರದ ದಶಕದಲ್ಲಿ ಜೋಳದ ಬೆಲೆಯು ೧೮೯೯ರ ಮಟ್ಟವನ್ನು ಮುಟ್ಟಲಿಲ್ಲ. ಗೋಧಿಯ ಬೆಲೆಯು ೧೮೯೯ರಲ್ಲಿ ಅತ್ಯಂತ ಅಧಿಕವಾಗಿದ್ದು (೧೮೦) ನಂತರದ ವರ್ಷಗಳಲ್ಲಿ ಇಳಿಮುಖವಾಗಿರುವುದನ್ನು ಕಾಣಬಹುದು. ಈ ಜಿಲ್ಲೆಯಲ್ಲಿ ೧೮೯೭ ಮತ್ತು ೧೯೦೦ರವರೆಗೆ ಕ್ಷೇಮವಿದ್ದಿತೆಂದು ತಿಳಿಯಲಾಗಿದೆ. ೧೯೦೮-೧೯೧೧ರ ಅವಧಿಯಲ್ಲಿ ವಾಣಿಜ್ಯ ಮುಗ್ಗಟ್ಟಿನಿಂದ (Trade depression) ಬೆಲೆಯಲ್ಲಿ ಆರ್ಥಿಕ ಸಬ್ಸಿಡಿಯಲ್ಲೂ ವ್ಯತ್ಯಾಸವಾಗಿದ್ದು ಮೊದಲನೇ ಮಹಾಯುದ್ಧದ ಹೊತ್ತಿಗೆ ಅದು ಹೆಚ್ಚು ಕಡಿಮೆ

ಸ್ಥಿರವಾಗಿದ್ದಿತು. ಒಂದನೇ ಮಹಾಯುದ್ಧದ ಸಮಯದಲ್ಲಿ (೧೯೧೪-೧೯೧೮) ಬೆಲೆಗಳೂ ಊಹಿಸಲಾರದಷ್ಟು ಹೆಚ್ಚಾಗಿರುವುದನ್ನು ಕಾಣಬಹುದು. ಈ ಜಿಲ್ಲೆಯಲ್ಲಿ ಸ್ಥಳೀಯವಲ್ಲದ ಕೆಲವು ಕಾರಣಗಳು ಬೆಲೆಗಳ ಹೆಚ್ಚಳಕ್ಕೆ ಕಾರಣವೆಂದು ತಿಳಿಯಲಾಗಿದೆ. ಆದರೆ ಈ ಜಿಲ್ಲೆಯಲ್ಲಿನ ಬೆಲೆಗಳಲ್ಲಿ ಆದ ಹೆಚ್ಚಳವು ದೇಶದಲ್ಲಾದ ಬದಲಾವಣೆಗಳಿಗಿಂತ ಕಡಿಮೆ ಇದ್ದಿತು ಎಂದು ತಿಳಿಯಲಾಗಿದೆ.

೨)ಈ ಕೆಳಗಿನ ಪಟ್ಟಿಯಲ್ಲಿ ೧೯೧೪-೧೯೨೯ರವರೆಗಿನ ಅವಧಿಯಲ್ಲಿ ಬೆಲೆಗಳಲ್ಲಿ ಉಂಟಾದ ಬದಲಾವಣೆಯನ್ನು ಕೊಡಲಾಗಿದೆ.

**ಕೋಷ್ಟಕ ೮.೩**

(ಆಧಾರ ವರ್ಷ : ೧೯೧೪-೧೦೦)

| ವರ್ಷ | ಅಕ್ಕಿ | ಗೋಧಿ | ಜೋಳ |
|---|---|---|---|
| ೧೯೧೪ | ೧೦೦ | ೧೧೦ | ೧೦೦ |
| ೧೯೧೬ | ೮೧ | ೮೪ | ೯೫ |
| ೧೯೧೮ | ೧೨೨ | ೧೩೧ | ೧೭೯ |
| ೧೯೨೦ | ೧೭೦ | ೧೮೮ | ೧೭೯ |
| ೧೯೨೨ | ೧೮೧ | ೨೪೭ | ೧೮೦ |
| ೧೯೨೪ | ೧೭೫ | ೧೮೮ | ೧೩೯ |
| ೧೯೨೬ | ೧೬೯ | ೧೭೫ | ೧೩೦ |
| ೧೯೨೮ | ೧೮೦ | ೧೮೦ | ೧೪೭ |
| ೧೯೨೯ | ೧೫೭ | ೧೫೫ | ೧೩೬ |

ಈ ಅವಧಿಯಲ್ಲಿ ಅಕ್ಕಿಯ ಬೆಲೆಯು ೧೯೨೧ರಲ್ಲಿ ಅತೀ ಹೆಚ್ಚು ಇದ್ದು, ೧೯೧೫ರಲ್ಲಿ ಕಡಿಮೆ ಇದ್ದಿತು. ನಂತರ ಬೆಲೆಗಳಲ್ಲಿ ವ್ಯತ್ಯಾಸವಾಗುತ್ತಾ ೧೯೨೯ರ ಹೊತ್ತಿಗೆ ೧೫೭ ಸೂಚ್ಯಂಕವನ್ನು ತಲುಪಿದ್ದಿತು. ಹಾಗೆಯೇ ಗೋಧಿ ಬೆಲೆಯು ೧೯೧೬ರಲ್ಲಿ ಕಡಿಮೆ ಇದ್ದು, ೧೯೨೨ರಲ್ಲಿ ಅತೀ ಹೆಚ್ಚು ಇದ್ದಿತು. ನಂತರ ಬೆಲೆಗಳಲ್ಲಿ ವ್ಯತ್ಯಾಸವಾಗುತ್ತಾ ೧೯೨೯ರ ಹೊತ್ತಿಗೆ ೧೫೫ ಸೂಚ್ಯಂಕವನ್ನು ಹೊಂದಿತ್ತು. ಜೋಳದ ಬೆಲೆಯು ೧೯೧೫ರಲ್ಲಿ ಕಡಿಮೆ ಇದ್ದು, ೧೯೨೧ರಲ್ಲಿ ಅತಿ ಹೆಚ್ಚು ಇದ್ದಿತು. ನಂತರ ೧೯೨೯ರ ಹೊತ್ತಿಗೆ ೧೩೬ ಸೂಚ್ಯಂಕವನ್ನು ಹೊಂದಿತ್ತು.

ಯುದ್ಧದ ನಂತರದ ದಿನಗಳಲ್ಲಿ ಬೆಲೆಗಳು ಹೆಚ್ಚಾಗಿ, ನಂತರ ಇಳಿಮುಖವಾಗಿರುವುದು ಕಾಣಬರುತ್ತದೆ. ಬೆಲೆಗಳ ಹೆಚ್ಚಳವನ್ನು ತಡೆಗಟ್ಟಲು ಆಗಿನ ಹೈದರಾಬಾದ್ ಸರ್ಕಾರವು ೧೯೧೮ರ ಹೊತ್ತಿಗೆ, ರಾಜ್ಯದಿಂದ ಆಹಾರ ಪದಾರ್ಥಗಳ ರಫ್ತನ್ನು ನಿಷೇಧಿಸಿತು. ಇದೇ ಕಾಲಾವಧಿಯಲ್ಲಿ ಈ ಪ್ರದೇಶದಲ್ಲಿನ ಕೃಷಿ ಉತ್ಪಾದನೆ, ಅಗತ್ಯಕ್ಕಿಂತಲೂ ಹೆಚ್ಚಿದ್ದರಿಂದ ಈ ನಿಷೇಧ ನಿಯಮ ಪ್ರತಿಕೂಲವಾಗಿತ್ತೆಂದು ಹೇಳಲಾಗಿದೆ. ಆದರೆ ನಂತರದ ದಿನಗಳಲ್ಲಿನ ಭೀಕರ ಕ್ಷಾಮದಿಂದ ಸ್ಥಳೀಯವಾಗಿ ಬೆಳೆದ ಬೆಳೆಯು ಸಾಲದಂತಾಯಿತು. ಪಕ್ಕದಲ್ಲಿನ ರಾಜ್ಯಗಳೂ ಸಹ ಹೈದರಾಬಾದ್ ರಾಜ್ಯಕ್ಕೆ ಆಹಾರ ವಸ್ತುಗಳನ್ನು ನಿಷೇಧಿಸಿದುದರಿಂದ ಗುಲಬರ್ಗಾ ಜಿಲ್ಲೆಯೂ ಸೇರಿದಂತೆ ಪದಾರ್ಥಗಳ ಬೆಲೆ ಏರುವ ಪರಿಸ್ಥಿತಿ ಉಂಟಾಯಿತು. ಇದರಿಂದ ಹೈದರಾಬಾದ್ ರಾಜ್ಯದಲ್ಲಿ ಮಾಡಿದ ನಿಯಮಗಳಿಂದ ಅನುಕೂಲಗಳಿಗಿಂತಲೂ ಅನಾನುಕೂಲಗಳೇ ಹೆಚ್ಚಾಗುವ ಪ್ರಸಂಗ ಉಂಟಾಯಿತು. ನಂತರದ ವರ್ಷಗಳಲ್ಲಿ ಕ್ರಮೇಣ ಬೆಲೆಗಳು ನಿಧಾನವಾಗಿ ಕಡಿಮೆಯಾಗುತ್ತಾ ಬಂದವು. ಆದಾಗ್ಯೂ ಯುದ್ಧಪೂರ್ವದಲ್ಲಿನ ಬೆಲೆಗಳಿಗಿಂತಲೂ ಸುಮಾರು ಶೇಕಡಾ ೫೦-೭೫ ಹೆಚ್ಚಿದ್ದಿತು.

೧೯೩೦ರ ನಂತರದ ದಶಕದಲ್ಲಿ ಉಂಟಾದ ಬೆಲೆಗಳಲ್ಲಿ ವ್ಯತ್ಯಾಸವು ಪ್ರಪಂಚದ ಇತಿಹಾಸದಲ್ಲಿ ಗಮನಾರ್ಹವಾದುದೆಂದೂ, ಇದಕ್ಕೆ ಆರ್ಥಿಕ ಕುಸಿತ ಕಾರಣವೆಂದೂ ತಿಳಿಯಲಾಗಿದೆ. ಇದರಂತೆ ಗುಲಬರ್ಗಾ ಜಿಲ್ಲೆಯಲ್ಲಿಯೂ

ಬೆಲೆಗಳಲ್ಲಿ ವ್ಯತ್ಯಾಸಗಳುಂಟಾದವು. ಈ ಕೆಳಗಿನ ಪಟ್ಟಿಯಲ್ಲಿ ೧೯೨೮-೧೯೩೪ರ ವರೆಗಿನ ಜಿಲ್ಲೆಯಲ್ಲಿನ ಸಗಟು ಬೆಲೆಗಳ ಸೂಚ್ಯಂಕವನ್ನು ಕೊಡಲಾಗಿದೆ.

**ಕೋಷ್ಟಕ ೮.೪**

(ಆಧಾರ ವರ್ಷ : ೧೯೨೧-೨೨-೧೦೦)

| ವರ್ಷ | ಅಕ್ಕಿ | ಗೋಧಿ | ಜೋಳ | ಎಲ್ಲಾ ಪದಾರ್ಥಗಳು |
|---|---|---|---|---|
| ೧೯೨೮-೨೯ | ೮೭ | ೭೨ | ೬೫ | ೭೭ |
| ೧೯೨೯-೩೦ | ೮೧ | ೫೯ | ೬೩ | ೬೫ |
| ೧೯೩೦-೩೧ | ೬೫ | ೪೮ | ೪೫ | ೫೯-೬ |
| ೧೯೩೨-೩೩ | ೫೦ | ೩೭ | ೪೩ | ೫೦-೭ |
| ೧೯೩೩-೩೪ | ೪೮ | ೩೬ | ೪೩ | ೪೭ |

ಅಕ್ಕಿಯ ಬೆಲೆ ಸೂಚ್ಯಂಕವು ೧೯೨೮-೨೯ರಲ್ಲಿ ೮೭ ಇದ್ದು, ೧೯೩೩-೩೪ರಲ್ಲಿ ೪೮ ಕ್ಕೆ ಇಳಿದಿದ್ದಿತು. ಹಾಗೆಯೇ ಗೋಧಿಯ ಬೆಲೆ ಸೂಚ್ಯಂಕವು ೭೨ ರಿಂದ ೩೬ಕ್ಕೆ, ಜೋಳದ ಬೆಲೆ ಸೂಚ್ಯಂಕವು ೬೫ ರಿಂದ ೪೩ಕ್ಕೆ ಮತ್ತು ಎಲ್ಲಾ ಪದಾರ್ಥಗಳ ಬೆಲೆ ಸೂಚ್ಯಂಕವು ೭೭ ರಿಂದ ೪೭ಕ್ಕೆ ಇಳಿದಿದ್ದಿತು ಎಂದು ತಿಳಿದುಬರುತ್ತದೆ.

ಬೆಲೆಗಳ ಈ ವ್ಯತ್ಯಾಸಗಳು ಕೃಷಿ ಹಾಗೂ ಕೈಗಾರಿಕಾ ಘಟಕಗಳಿಗೆ ಪ್ರತಿಕೂಲ ಪರಿಣಾಮ ಉಂಟು ಮಾಡಿದ್ದವು. ೧೯೩೩-೩೪ರ ಹೊತ್ತಿಗೆ ಬೆಲೆಗಳು ಹತೋಟಿಗೆ ಬಂದು, ಅಕ್ಟೋಬರ್ ೧೯೩೬ರಿಂದ ಅಕ್ಟೋಬರ್ ೧೯೩೭ರ ಅವಧಿಯಲ್ಲಿ ಪರಿಸ್ಥಿತಿ ಉತ್ತಮವಾಯಿತು. ನಂತರ ಪುನಃ ಬೆಲೆಗಳು ಹೆಚ್ಚಾದವು.

ಎಲ್ಲಾ ವಸ್ತುಗಳ ಬೆಲೆ ಸೂಚ್ಯಂಕವು ೧೯೩೩-೩೪ರಲ್ಲಿ ೪೭ ಇದ್ದು ೧೯೩೬-೩೭ರಲ್ಲಿ ಹೆಚ್ಚಳವಾಯಿತು. ಆದರೆ ಅಕ್ಕಿಯ ಬೆಲೆಯಲ್ಲಿ ಗಣನೀಯವಾದ ಹೆಚ್ಚಳ ಉಂಟಾಗಿರಲಿಲ್ಲ. ಈ ವ್ಯತ್ಯಾಸವು ಮುಂದುವರೆದು ೧೯೩೫-೩೬ರಲ್ಲಿ ಗೋಧಿ ಬೆಲೆ ಸೂಚ್ಯಂಕವು ೩೩ ಇದ್ದಿತು. (೧೯೩೩ರಲ್ಲಿ ೩೬). ಎರಡನೆಯ ಮಹಾಯುದ್ಧದ ಪರಿಣಾಮವು ಎಲ್ಲಾ ವಸ್ತುಗಳ ಮೇಲೂ ಬೀರಿ ಬೆಲೆಗಳು ಅತೀ ಹೆಚ್ಚಾದವು. ಇದಕ್ಕೆ ಬಹುಮಟ್ಟಿಗೆ ವ್ಯಾಪಾರಿಗಳು ಆಹಾರ ಧಾನ್ಯಗಳನ್ನು ಶೇಖರಿಸಿಟ್ಟುಕೊಂಡಿದ್ದುದು ಕಾರಣವೆಂದು ಹೇಳಬಹುದು. ೧೯೩೯ರಿಂದ ೧೯೪೪ರವರೆಗಿನ ಬೆಲೆಗಳ ಸೂಚ್ಯಂಕವನ್ನು ಕೋಷ್ಟಕದಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೫**

(ಆಧಾರ ವರ್ಷ ೧೯೨೪-೧೦೦)

| ವರ್ಷ | ಅಕ್ಕಿ | ಗೋಧಿ | ಜೋಳ |
|---|---|---|---|
| ೧೯೩೯ | ೧೦೩ | ೧೦೧ | ೧೧೮ |
| ೧೯೪೦ | ೧೨೧ | ೧೧೩ | ೧೧೬ |
| ೧೯೪೧ | ೧೨೫ | ೧೧೨ | ೯೯ |
| ೧೯೪೨ | ೧೫೦ | ೧೩೭ | ೧೧೬ |
| ೧೯೪೩ | ೨೨೦ | ೨೫೮ | ೨೦೭ |
| ೧೯೪೪ | ೨೨೩ | ೨೬೨ | ೨೩೪ |

ಅಕ್ಕಿ, ಗೋಧಿ ಹಾಗೂ ಜೋಳದ ಬೆಲೆಯು ೧೯೪೦ರಲ್ಲಿ ಕಡಿಮೆ ಇದ್ದು ೧೯೪೪ರಲ್ಲಿ ಅತಿ ಹೆಚ್ಚಿತ್ತು ಮತ್ತು ಮುಂದಿನ ಐದು ವರ್ಷಗಳ ಅವಧಿಯಲ್ಲಿ ಶೇ. ೧೦ರಷ್ಟು ಬೆಲೆಗಳ ಹೆಚ್ಚಳ ಕಂಡುಬರುತ್ತದೆ.

ಮಹಾಯುದ್ಧ ಪ್ರಾರಂಭವಾದ ಕೂಡಲೇ ಬೆಲೆಗಳನ್ನು ಹತೋಟಿಗೆ ತರುವುದು ರಾಷ್ಟ್ರೀಯ ರಕ್ಷಣೆಯ ದೃಷ್ಟಿಯಲ್ಲಿ ಮುಖ್ಯವಾದ ಅಂಶವೆಂದು ಆಗಿನ ಸರ್ಕಾರಕ್ಕೆ ಮನದಟ್ಟಾಯಿತು. ಅಗತ್ಯ ವಸ್ತುಗಳ ಸಾಗಾಣಿಕೆಯನ್ನು ನಿಯಂತ್ರಿಸಲು ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಿತು. **ಕೇಂದ್ರ ಬೆಲೆ ನಿಯಂತ್ರಣಾ ಸಮಿತಿಯನ್ನು** ಹೈದರಾಬಾದಿನಲ್ಲಿಯೂ, **ಸ್ಥಳೀಯ ಬೆಲೆ ನಿಯಂತ್ರಣಾ ಸಮಿತಿ**ಯನ್ನು ಜಿಲ್ಲಾಮಟ್ಟದಲ್ಲಿಯೂ ರಚಿಸಲಾಯಿತು. ೧೯೪೧-೪೨ ಹಾಗೂ ೧೯೪೨-೪೩ರಲ್ಲಿ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಬೆಳೆಗಳು ಬಾರದೇ ಇದ್ದುದು ಮತ್ತು ಇತರೆ ಜಿಲ್ಲೆಗಳಿಗಿಂತ ಕೊರತೆ ಇದ್ದು ಈ ಜಿಲ್ಲೆಗೆ ಆಹಾರ ಸಾಮಗ್ರಿಗಳ ಆಮದು ಇದ್ದಲ್ಲಿ ಆದ ತೊಂದರೆಗಳು ಮೊದಲಾದ ಕಾರಣಗಳಿಂದ ಬೆಲೆಗಳನ್ನು ಹತೋಟಿಗೆ ತರುವುದು ಕಷ್ಟವಾಗಿದ್ದಿತು. ಪರಿಸ್ಥಿತಿ ಗಂಭೀರವಾದಾಗ ಸರ್ಕಾರವು **ಆಹಾರ ವಸ್ತುಗಳ ನಿಯಂತ್ರಣಾ ಆಜ್ಞೆಯನ್ನು** ಜಾರಿಗೆ ತರಬೇಕಾಯಿತು. ಮತ್ತು ಅಕ್ರಮ ಸಾಗಾಣಿಕೆಯನ್ನು ತಡೆಯಲು ಗಡಿಗಳಲ್ಲಿ ಸೇನೆಯನ್ನು ನೇಮಿಸಲಾಯಿತು.

ಸರ್ಕಾರವು ಆಹಾರ ಸಾಮಗ್ರಿಗಳನ್ನು ಒಟ್ಟಿಗೆ ಲೆವಿ ಮೂಲಕ ಪಡೆಯುವ ಆಜ್ಞೆಯನ್ನು ಹೊರಡಿಸಿ ರೈತರಿಂದ ನೇರವಾಗಿ ಖರೀದಿ ಮಾಡಿತು. ಪ್ರತಿ ಗ್ರಾಮದಲ್ಲಿ ಈ ರೀತಿ ಖರೀದಿ ಮಾಡುವ ಪ್ರತಿನಿಧಿಯನ್ನು ಸರ್ಕಾರ ನೇಮಿಸಿತು. ಅಕ್ಟೋಬರ್ ೧೯೪೩ರಲ್ಲಿ ಕಾನೂನುಬದ್ಧವಾಗಿ ಬೆಲೆಗಳನ್ನು ನಿರ್ಧರಿಸಲಾಯಿತು. ರೈತನಿಗೆ ನ್ಯಾಯವಾದ ಬೆಲೆಯನ್ನು ಒದಗಿಸುವುದರ ಜೊತೆಗೆ ಸರಾಸರಿ ಗ್ರಾಹಕನ ಕೊಳ್ಳುವ ಸಾಮರ್ಥ್ಯಕ್ಕೂ ಸರಿತೂಗುವಂತೆ ಬೆಲೆಗಳನ್ನು ನಿಗದಿ ಮಾಡಲಾಯಿತು.

೧೯೪೫ರ ನಂತರ ಅಕ್ಕಿಯ ಬೆಲೆಯು ಯುದ್ಧಪೂರ್ವದ ಬೆಲೆಗಳಿಗಿಂತ ಸುಮಾರು ಶೇ. ೧೦೦-೧೨೫ರಷ್ಟು ಹೆಚ್ಚಾಯಿತು. (ಒಂದು ಬೆಂಗಾಲ್ ಮಣ ಅಕ್ಕಿಗೆ ಹೆಚ್ಚಳಗೊಂಡ ದರ ೧೨ ಆಣೆ, ಜೋಳ ೭ ಆಣೆ.) ಸರ್ಕಾರವು ಕಾನೂನಿನನ್ವಯ ನಿಗದಿಪಡಿಸಿದ ದರದಿಂದ, ಕೃಷಿಕರಿಗೆ ಅತೃಪ್ತಿಯುಂಟಾಯಿತು. ಆದ್ದರಿಂದ ಸರ್ಕಾರವು ಆಹಾರ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ ನಿಗದಿತ ಬೆಲೆಗಳನ್ನು ಹೆಚ್ಚಿಸಿತು. ಜೋಳದ ಬೆಲೆಯು ಪಲ್ಲಕ್ಕೆ (೩ ಮಣ) ೨೧ ರೂ. ಹಾಗೂ ಅಕ್ಕಿ ರೂ. ೩೨ಕ್ಕೆ ಏರಿತು. ೧೯೫೨ರಲ್ಲಿ ಸರ್ಕಾರವು **ಆಹಾರ ಪದಾರ್ಥಗಳ (ಲೈಸೆನ್ಸಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್) ಅಧಿನಿಯಮವನ್ನು** ಜಾರಿಗೆ ತಂದುದರಿಂದ ವ್ಯಾಪಾರಸ್ಥರು ಆಹಾರ ಸಾಮಗ್ರಿಗಳನ್ನು ಮಾರಲು ಪರವಾನಗಿಯನ್ನು ಪಡೆಯಬೇಕಾಗಿದ್ದಿತು. ೧೯೫೦-೫೧ ರಿಂದ ೧೯೫೫-೫೬ರವರೆಗೆ ಉಂಟಾದ ಬೆಲೆಗಳ ಹೆಚ್ಚಳವನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದೆ.

**ಕೋಷ್ಟಕ ೮.೬**

(ಆಧಾರ ವರ್ಷ ೧೯೪೯-೫೦ ೧೦೦)

| ವರ್ಷ | ಅಕ್ಕಿ | ಗೋಧಿ | ಜೋಳ |
|---|---|---|---|
| ೧೯೫೦-೫೧ | ೧೦೦ | ೯೭ | ೧೦೩ |
| ೧೯೫೧-೫೨ | ೧೦೬ | ೯೬ | ೧೦೪ |
| ೧೯೫೨-೫೩ | ೧೧೯ | ೧೪೪ | ೧೨೨ |
| ೧೯೫೩-೫೪ | ೧೨೫ | ೧೫೬ | ೧೪೩ |
| ೧೯೫೪-೫೫ | ೧೪೧ | ೧೦೯ | ೧೨೭ |
| ೧೯೫೫-೫೬ | ೧೫೧ | ೧೦೦ | ೧೨೯ |

ಈ ಅವಧಿಯಲ್ಲಿ ಜನಸಂಖ್ಯೆಯ ಹೆಚ್ಚಳ, ಆಹಾರ ವಸ್ತುಗಳ ಕೊರತೆ, ಆಯಾತ ನಿರ್ಯಾತ ನೀತಿ ಮೊದಲಾದ ಕಾರಣಗಳಿಂದ ಹೆಚ್ಚುತ್ತಿದ್ದ ಬೆಲೆಗಳು ೧೯೬೦-೬೧ರ ಹೊತ್ತಿಗೆ ಸ್ಥಿರತೆಯನ್ನು, ೧೯೬೪-೬೫ರಲ್ಲಿ ಮತ್ತೆ ಹೆಚ್ಚಳವನ್ನು ಕಂಡಿತು. ೧೯೬೦-೬೧ರಿಂದ ೧೯೬೪-೬೫ರವರೆಗಿನ ಕೆಲವು ಅಗತ್ಯ ವಸ್ತುಗಳ ಬೆಲೆಯನ್ನು ಈ ಕೋಷ್ಟಕದಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೭**

ಬೆಲೆಗಳು ಕ್ವಿಂಟಾಲ್ ಒಂದಕ್ಕೆ ರೂ.ಗಳು)

| ಪದಾರ್ಥಗಳು | ೧೯೬೦-೬೧ | ೬೧-೬೨ | ೬೨-೬೩ | ೬೩-೬೪ | ೬೪-೬೫ |
|---|---|---|---|---|---|
| ಅಕ್ಕಿ (ಉತ್ತಮದರ್ಜೆ) | ೭೪ | ೮೨ | ೬೫ | ೭೫ | ೮೮ |
| ಅಕ್ಕಿ (ಸಾಧಾರಣ) | ೬೧ | ೫೮ | ೫೦ | ೫೮ | ೭೦ |
| ಗೋಧಿ (ಬನ್ಸಿ) | ೫೬ | ೫೮ | ೫೫ | ೫೫ | ೧೦೩ |
| ಜೋಳ (ಬಿಳಿ) | ೩೮ | ೪೧ | ೪೦ | ೪೨ | ೬೯ |
| ಜೋಳ | ೩೩ | ೩೫ | ೩೬ | ೩೬ | ೬೮ |

ಗೋಧಿ ಹಾಗೂ ಜೋಳದ ಬೆಲೆಯು ೧೯೬೦-೬೧ ರಲ್ಲಿದ್ದ ಬೆಲೆಗಿಂತಲೂ ೧೯೬೪-೬೫ರಲ್ಲಿ ಸುಮಾರು ಶೇ. ೧೧೦ರಷ್ಟು ಹೆಚ್ಚಾಗಿರುವುದು ಕಂಡು ಬರುತ್ತದೆ. ಚಿಲ್ಲರೆ ಬೆಲೆಯಲ್ಲಿ ೧೯೬೪ರಿಂದ ೧೯೬೫ರಲ್ಲಿ ಆದ ಬದಲಾವಣೆಯನ್ನು ತೋರಿಸುವ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೮**

| ತಿಂಗಳು:ವರ್ಷ | ಒಂದು ಕಿಲೋಗೆ ದರ (ಪೈಸೆ) | | | |
|---|---|---|---|---|
| | ಉತ್ತಮ ಅಕ್ಕಿ | ಸಾಧಾರಣ ಅಕ್ಕಿ | ಗೋಧಿ ಬನ್ಸಿ | ಜೋಳ ಬಿಳಿ |
| ಎಪ್ರಿಲ್ ೧೯೬೪ | ೯೪ | ೭೦ | ೭೫ | ೫೫ |
| ಜುಲೈ ೧೯೬೪ | ೯೨ | ೭೫ | ೯೪ | ೭೧ |
| ಅಕ್ಟೋಬರ್ ೬೪ | ೮೮ | ೭೫ | ೧೨೫ | ೮೦ |
| ಜನವರಿ ೬೫ | ೮೮ | ೭೫ | ೧೦೦ | ೮೧ |
| ಮಾರ್ಚ್ ೬೫ | ೮೮ | ೭೫ | ೮೭ | ೬೨ |

ಈ ಪರಿಸ್ಥಿತಿಯಲ್ಲಿ ಸರ್ಕಾರದ ನೀತಿಯು ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು ಆಗಿದ್ದಿತು. ಆಹಾರದ ಕೊರತೆಯನ್ನು ನೀಗಿಸಲು, ಸಗಟು ಹಾಗೂ ಚಿಲ್ಲರೆ ಬೆಲೆಯನ್ನು ನಿಯಂತ್ರಿಸಲು ಸರ್ಕಾರವು ಅನೇಕ ನಿಯಮಗಳನ್ನು ಜಾರಿಯಲ್ಲಿ ತಂದಿತು. ಅದರಂತೆ ಆಹಾರ ಧಾನ್ಯಗಳ ಸಗಟು ಹಾಗೂ ಚಿಲ್ಲರೆ ಬೆಲೆಗಳನ್ನು ನಿರ್ಧರಿಸುವುದು, ವರ್ತಕರು ತಮ್ಮಲ್ಲಿರುವ ದಾಸ್ತಾನಿನ ವಿವರವನ್ನು ಪ್ರದರ್ಶಿಸುವುದು, ಆಹಾರ ಧಾನ್ಯಗಳ ಸಾಗಾಣಿಕೆಯಲ್ಲಿ ನಿಯಂತ್ರಣ ಮೊದಲಾದ ನಿಯಮಗಳನ್ನು ಬಳಕೆಗೆ ತರಲಾಯಿತು.

ನಂತರದ ವರ್ಷಗಳಲ್ಲಿ ಬೆಲೆಗಳಲ್ಲಿ ಹೆಚ್ಚಳವುಂಟಾಯಿತೇ ವಿನಹ ಕಡಿಮೆಯಾಗಲಿಲ್ಲ.

೧೯೮೦-೮೧ರಿಂದ ೧೯೯೫-೯೬ರವರೆಗಿನ ಕೆಲವು ಪ್ರಮುಖ ಆಹಾರ ಪದಾರ್ಥಗಳ ಚಿಲ್ಲರೆ ಬೆಲೆಗಳನ್ನು (ಕಿಲೋ ಒಂದಕ್ಕೆ) ಇಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೯**

| ಪದಾರ್ಥಗಳು | ೧೯೮೦-೮೧ | ೧೯೯೧-೯೨ | ೯೨-೯೩ | ೯೫-೯೬ |
|---|---|---|---|---|
| | ರೂ.ಪೈ. | ರೂ.ಪೈ. | ರೂ.ಪೈ. | ರೂ.ಪೈ. |
| ಅಕ್ಕಿ (ಉತ್ತಮ) | ೬-೮೦ | ೮-೮೦ | ೧೦-೦೦ | ೧೪-೦೦ |
| ಜೋಳ | ೪-೧೦ | ೫-೦೫ | ೬-೦೩ | ೬-೫೦ |
| ಉಳ್ಳಾಗಡ್ಡಿ | ೨-೬೦ | ೩-೨೫ | ೨-೫೯ | ೩-೫೦ |
| ಸಕ್ಕರೆ | ೭-೦೫ | ೮-೭೫ | ೧೨-೮೯ | ೧೩-೦೦ |
| ತೊಗರಿಬೇಳೆ | ೧೪-೧೦ | ೧೬-೭೦ | ೧೬-೧೫ | ೪೦-೦೦ |
| ಶೇಂಗಾಎಣ್ಣೆ | ೨೪-೩೦ | ೩೯-೮೦ | ೩೮-೦೮ | ೩೮-೦೦ |

ಬೆಲೆ ಏರಿಕೆಯು ಜಿಲ್ಲೆಯಲ್ಲಿ ೧೯೬೦-೬೫ರ ಕಾಲಾವಧಿಯಲ್ಲಿ ತೀವ್ರವಾಗಿದ್ದು ಸುಮಾರು ಶೇ. ೬೭ರಷ್ಟು ಹೆಚ್ಚಾಗಿದ್ದಿತು. ೧೯೬೫-೭೦ರ ಅವಧಿಯಲ್ಲಿನ ಹೆಚ್ಚಳ ಶೇ. ೪೬, ನಂತರದ ಐದು ವರ್ಷಗಳಲ್ಲಿ ಅಂದರೆ ೧೯೭೦-೭೫ರಲ್ಲಿ ಬೆಲೆಗಳು ಸ್ಥಿರವಾಗಿದ್ದು ನಂತರ ಪುನಃ ಬೆಲೆಗಳು ಹೆಚ್ಚಲ್ಪಟ್ಟವು. ೧೯೯೦ರ ನಂತರದ ಅವಧಿಯಲ್ಲಿ ಬೆಲೆಗಳಲ್ಲಿ ತೀವ್ರ ಹೆಚ್ಚಳವಿದ್ದು, ೧೯೯೩-೯೪ ರಿಂದ ೧೯೯೪-೯೫ರಲ್ಲಿ ಸಾಮಾನ್ಯ ಗ್ರಾಹಕನಿಗೆ ಪದಾರ್ಥಗಳ ಬೆಲೆಗಳು ಎಟುಕದಷ್ಟು ಹೆಚ್ಚಾದವೆಂದು ಹೇಳಬಹುದು. ಗ್ರಾಹಕ ಬೆಲೆಗಳು ಸಾಮಾನ್ಯವಾಗಿ ಸಗಟು ಬೆಲೆಗಳಿಗಿಂತ ಹೆಚ್ಚಾಗಿರುತ್ತವೆ ಈ ಗ್ರಾಹಕ ಬೆಲೆಗಳಲ್ಲಿ ವಿವಿಧ ರೀತಿಯ ಸೂಚಿಗಳಿವೆ. ಅವುಗಳೆಂದರೆ ಕಾರ್ಮಿಕರಿಗೆ, ಮಧ್ಯಮ ವಗದವರಿಗೆ ಮತ್ತು ಕೃಷಿ ಕೆಲಸಗಾರರಿಗೆ ಸಂಬಂಧಪಟ್ಟ ಗ್ರಾಹಕಸೂಚಿಗಳು.

ಕೃಷಿ ಕಾರ್ಮಿಕರ ಜೀವನ ವೆಚ್ಚ ೧೯೬೦-೬೧ರ ಅವಧಿಯಲ್ಲಿ ಗಮನೀಯವಾಗಿ ಹೆಚ್ಚಿದ್ದು ಆಹಾರ ದಿನಿಸುಗಳ ಸೂಚ್ಯಂಕ ೧೦೧ರಿಂದ ೩೨೬ಕ್ಕೆ ಏರಿದ್ದಿತು.

**ಕೋಷ್ಟಕ. ೮.೧೦**

**ಗುಲ್ಬರ್ಗಾ ಜಿಲ್ಲೆಯಲ್ಲಿ ಕೆಲವು ಮುಖ್ಯ ಕೃಷಿ ವಸ್ತುಗಳ ಬೆಲೆ (೧೯೮೪-೮೫ ರಿಂದ ೧೯೯೪-೯೫ರ ವರೆಗೆ) ಒಂದು ಕ್ವಿಂಟಾಲಿಗೆ ರೂ.ಗಳಲ್ಲಿ**

| ವಸ್ತುವಿನ ಹೆಸರು | | ೧೯೮೫-೮೬ | ೮೬-೮೭ | ೮೭-೮೮ | ೮೮-೮೯ | ೮೯-೯೦ | ೯೦-೯೧ | ೯೧-೯೨ | ೯೨-೯೩ | ೯೩-೯೪ | ೯೪-೯೫ |
|---|---|---|---|---|---|---|---|---|---|---|---|
| ೧ ಭತ್ತ | ಗರಿಷ್ಠ | ೨೬೫ | ೨೦೫ | ೨೫೦ | ೩೦೫ | ೩೦೦ | ೩೫೧ | ೪೨೮ | ೪೯೦ | ೪೬೦ | ೫೩೫ |
| | ಕನಿಷ್ಠ | ೨೧೦ | ೧೮೦ | ೧೯೦ | ೧೭೫ | ೧೫೦ | ೧೪೫ | ೨೫೦ | ೨೩೦ | ೨೦೫ | ೨೫೦ |
| ೨. ಉತ್ತಮ ಅಕ್ಕಿ | ಗರಿಷ್ಠ | ೪೮೦ | ೫೦೦ | ೫೫೦ | ೫೭೫ | ೪೩೦ | ೬೦೦ | ೯೨೦ | ೯೫೦ | ೧೨೫೦ | ೧೪೦೦ |
| | ಕನಿಷ್ಠ | ೩೬೫ | ೪೧೦ | ೪೮೦ | ೪೭೦ | ೩೦೦ | ೫೦೦ | ೪೨೧ | ೭೫೦ | ೬೩೫ | ೮೦೦ |
| ೩. ಬಿಳಿಜೋಳ | ಗರಿಷ್ಠ | ೨೩೦ | ೨೨೫ | ೨೯೦ | ೪೫೦ | ೩೮೦ | ೪೩೦ | ೬೪೦ | ೬೪೦ | ೪೫೦ | ೩೧೦ |
| | ಕನಿಷ್ಠ | ೧೫೫ | ೧೭೦ | ೧೮೦ | ೨೫೦ | ೧೯೦ | ೧೬೦ | ೨೭೦ | ೨೮೦ | ೨೨೫ | ೨೫೦ |
| ೪. ತೊಗರಿಬೇಳೆ (೧೦ ಕೆಜಿಗೆ) | ಗರಿಷ್ಠ | ೨೧೦ | ೨೩೫ | ೨೧೬ | ೨೧೦ | ಲವಿ | ೩೪೫ | ೩೭೫ | ೪೫೦ | ೭೪೦ | ೫೦೫ |
| | ಕನಿಷ್ಠ | ೨೦೦ | ೨೦೦ | ೨೦೨ | ೧೮೫ | | ೨೮೫ | ೨೭೫ | ೨೬೫ | ೨೮೦ | ೪೦೦ |
| ೫. ಕಡಲೇಕಾಯಿ ಬೀಜ (ಶೇಂಗಾ) | ಗರಿಷ್ಠ | ೫೯೦ | ೬೫೦ | ೭೪೦ | ೭೪೬ | ೯೭೧ | ೧೧೪೦ | ೧೨೦೦ | ೧೧೩೫ | ೧೩೮೫ | ೧೩೬೫ |
| | ಕನಿಷ್ಠ | ೫೨೦ | ೫೭೬ | ೬೭೦ | ೪೫೦ | ೪೦೦ | ೫೦೦ | ೭೨೦ | ೭೦೦ | ೬೦೦ | ೯೫೦ |
| ೬. ಒಣಮೆಣಸಿನ ಕಾಯಿ | ಗರಿಷ್ಠ | ೧೧೦೦ | ೭೫೦ | ೧೯೯೫ | ೩೮೯೫ | ೨೧೦೦ | ೨೮೦೦ | ೫೦೦೦ | ೪೫೦೦ | ೨೧೦೦ | ೩೦೦ |
| | ಕನಿಷ್ಠ | ೧೧೦೦ | ೫೦೦ | ೧೬೮೦ | ೧೧೫೦ | ೭೪೦ | ೬೦೦ | ೩೦೦೦ | ೧೪೦೦ | ೯೦೦ | ೧೩೦೦ |
| ೭. ಈರುಳ್ಳಿ | ಗರಿಷ್ಠ | ೯೦ | ೨೬೦ | ೨೨೫ | ೩೫೦ | ೨೨೫ | ೫೬೦ | ೪೭೦ | ೩೦೦ | ೭೦೦ | ೪೫೦ |
| | ಕನಿಷ್ಠ | ೪೦ | ೧೫೦ | ೧೬೫ | ೧೦೦ | ೧೩೫ | ೭೫ | ೩೦ | ೪೦ | ೧೨೦ | ೮೦ |
| ೮. ಆಲೂಗಡ್ಡೆ | ಗರಿಷ್ಠ | ೧೫೦ | ೨೨೦ | ೪೬೫ | | | | | ೩೫೦ | ೩೦೦ | ೪೦೦ |
| | ಕನಿಷ್ಠ | ೯೦ | ೨೧೦ | ೪೦೦ | --------ಲಭ್ಯವಿಲ್ಲ-------- | | | | ೧೨೩ | ೧೫೦ | ೨೦೦ |
| ೯. ಹುಣಸೇಹಣ್ಣು | ಗರಿಷ್ಠ | ೧೭೦೦ | ೧೦೦೦ | ೭೦೦ | ೮೦೦ | ೧೩೦೦ | ೮೫೦ | ೧೬೦೦ | ೯೫೦ | ೧೮೦೦ | ೧೮೦೦ |
| | ಕನಿಷ್ಠ | ೫೨೫ | ೧೦೦ | ೬೦೦ | ೬೭೦ | ೪೦೦ | ೪೨೫ | ೫೦೦ | ೭೦೦ | ೭೦೦ | ೧೦೦೦ |
| ೧೦. ಬನ್ನಿರವೆ | ಗರಿಷ್ಠ | ೪೫೦ | ೩೫೦ | ೪೮೦ | ೫೦೨ | ೫೦೦ | ೫೬೦ | ೭೦೦೦ | ೭೧೦ | ೭೫೦ | ೭೭೫ |
| | ಕನಿಷ್ಠ | ೩೦೦ | ೨೯೦ | ೩೫೦ | ೩೧೦ | ೩೧೦ | ೨೬೦ | ೪೦೦ | ೪೪೦ | ೫೦೦೦ | ೫೦೦ |

**ಕೋಷ್ಟಕ ೮.೧೧**

| | ತಲಾ ಆದಾಯ (ರೂ.ಗಳಲ್ಲಿ) | ಸ್ಥಾನ |
|---|---|---|
| ೧೯೬೦-೬೧ | ೨೨.೩ | ೧೭ |
| ೧೯೭೦-೭೧ | ೫೯೯ | ೧೨ |
| ೧೯೮೦-೮೧ | ೧೩೮೫ | ೧೩ |
| ೧೯೮೯-೯೦ | ೧೭೯೪ | ೧೧ |
| ೧೯೯೨-೯೩ | ೧೮೯೩ | |
| ೧೯೯೩-೯೪ | ೧೯೭೪ | |
| ೧೯೯೪-೯೫ | ೨೦೧೫ | |
| ೧೯೯೫-೯೬ | ೨೦೭೦ | |

ಗುಲಬರ್ಗಾ ಜಿಲ್ಲೆಯಲ್ಲಿ **ಸಾಮಾನ್ಯ ಬಳಕೆದಾರರ ಸೂಚ್ಯಂಕ** ೧೯೮೭ರಿಂದ ೧೯೯೫ರವರೆಗೆ ಹೀಗಿದ್ದಿತು. (೧೯೮೨-೧೦೦)

೧೯೮೭-೭೪೪, ೧೯೮೮-೮೬೬, ೧೯೮೯-೯೪೫, ೧೯೯೦-೯೨೬, ೧೯೯೧-೯೯೧, ೧೯೯೨-೧೦೩೧, ೧೯೯೩-೧೧೦೦, ೧೯೯೪-೧೧೫೬, ೧೯೯೫-೧೧೭೮, ೧೯೯೬-೧೨೦೧

ಸಾಮಾನ್ಯ ಬಳಕೆದಾರರ ಸೂಚ್ಯಂಕವನ್ನು ೧೯೯೦ ಮತ್ತು ೧೯೯೧ರಲ್ಲಿದ್ದಂತೆ ಹೋಲಿಸಿದಾಗ, ಜಿಲ್ಲೆಯಲ್ಲಿ ಆಹಾರ ಪದಾರ್ಥಗಳಲ್ಲಿನ ಹೆಚ್ಚಳ ಶೇ. ೩೭.೫೨ ಇದ್ದು, ಇತರ ವಸ್ತುಗಳಲ್ಲಿನ ಸೂಚ್ಯಂಕದಲ್ಲಿನ ಹೆಚ್ಚಳ ಶೇ. ೨೮.೬೯ ಇದ್ದಿತು. ೧೯೯೦ ಹಾಗೂ ೧೯೯೧ರಲ್ಲಿ ಆಹಾರ ವಸ್ತುಗಳ ಮತ್ತು **ಸಾಮಾನ್ಯ ವಸ್ತುಗಳ ಸೂಚ್ಯಂಕ** ಕ್ರಮವಾಗಿ

| | | |
|---|---|---|
| ಆಹಾರ ವಸ್ತುಗಳ ಸೂಚ್ಯಂಕ | ೯೦೬(೯೦) | ೧೨೪೬(೯೧) |
| ಇತರೆ ವಸ್ತುಗಳ ಸೂಚ್ಯಂಕ | ೯೨೦(೯೦) | ೧೧೮೪(೯೧) |

ಜಿಲ್ಲೆಯ ಪಟ್ಟಣ ವಾಸಿಗಳಲ್ಲಿ ಕುಶಲಕರ್ಮಿಗಳಲ್ಲದವರ. ಸೂಚ್ಯಂಕವು ಈ ರೀತಿ ಇದ್ದಿತು.

೧೯೮೮-೧೩೪, ೧೯೮೯-೧೪೫, ೧೯೯೦-೧೫೪ ೧೯೯೧-೧೬೬,

೧೯೯೩-೧೫೩, ೧೯೯೪-೧೯೦, ೧೯೯೫-೧೯೩, ೧೯೯೬-೨೦೧

ಇದೇ ರೀತಿ ಸಾಮಾನ್ಯ ಕೆಲಸಗಾರರ ಬೆಲೆ ಸೂಚ್ಯಂಕವನ್ನು ಇಲ್ಲಿ ಕೊಡಲಾಗಿದೆ. ಮಾರ್ಚ್-೯೦-೯೧೯, ಡಿಸೆಂಬರ್-೯೦-೯೫೯, ಮಾರ್ಚ್-೯೧-೧೦೧೮, ಡಿಸೆಂಬರ್-೯೧-೧೪೨೧.

೧೯೯೦ ನಂತರದ ಅವಧಿಯಲ್ಲಿ ಗ್ರಾಹಕ ವಸ್ತುಗಳ ಬೆಲೆಯು ಶೇ. ೩೦ ರಿಂದ ಶೇ. ೪೦ರ ವರೆಗೂ ಹೆಚ್ಚಿರುವುದು ಕಂಡುಬರುತ್ತದೆ. ಗ್ರಾಹಕ ವಸ್ತುಗಳ ಬೆಲೆಯು ಹೆಚ್ಚಾದಂತೆಲ್ಲಾ ಸೂಚ್ಯಂಕಗಳು ಹೆಚ್ಚಾಗಿರುವುದನ್ನು ಕಾಣಬಹುದು.

## ಜಿಲ್ಲೆಯ ಆದಾಯ

೧೯೯೦-೯೧ನೇ ಸಾಲಿನಲ್ಲಿ ಜಿಲ್ಲೆಯ ಒಟ್ಟು ಆದಾಯ ಚಾಲ್ತಿ ಬೆಲೆಗಳಲ್ಲಿ ೧೧೯೩.೧೬ ಕೋಟಿ ರೂ.ಗಳಾಗಿದ್ದು, ಇವುಗಳಲ್ಲಿ ವಿವಿಧ ಬಾಬ್ತುಗಳಿಂದ ಬಂದ ಆದಾಯ ಈ ರೀತಿ ಇದ್ದಿತು.

ಕೃಷಿ (ಪಶು ಸಂಗೋಪನೆ ಸೇರಿ) ೩೪೮.೩೮ ಕೋಟಿ ರೂ, ಅರಣ್ಯ ೩೧.೫೭ ಕೋಟಿ ರೂ., ಮೀನುಗಾರಿಕೆ .೯೨ ಕೋಟಿ ರೂ., ಗಣಿ ೫.೯೭ ಕೋಟಿ. ರೂ., ತಯಾರಿಕೆ ೨೧೯.೨೩ ಕೋಟಿ ರೂ., ನಿರ್ಮಾಣ ಕಾರ್ಯ ೧೦೫.೮೩ ಕೋಟಿ

ರೂ., ವಿದ್ಯುಚ್ಛಕ್ತಿ ಅನಿಲ, ನೀರು ಸರಬರಾಜು ೧೬.೭೫ ಕೋಟಿ ರೂ., ರೈಲ್ವೆ ೩.೬೩ ಕೋಟಿ ರೂ., ಇತರ ಸಾರಿಗೆ ಸಂಗ್ರಹ ೩೧.೮೩ ಕೋಟಿ ರೂ., ಶೇಖರಣೆ ೯.೧೫ ಕೋಟಿ ರೂ., ಸಂಪರ್ಕ ೧೩.೦೨ ಕೋಟಿ ರೂ., ವ್ಯಾಪಾರ ಇತ್ಯಾದಿ ೧೪೪.೨೭ ಕೋಟಿ ರೂ., ಬ್ಯಾಂಕ್ ಉದ್ದಿಮೆ ಮತ್ತು ವಿಮೆ ೨೭.೧೯ ಕೋಟಿ ರೂ., ಸ್ಥಿರ ಆಸ್ತಿ ಮತ್ತು ವಾಸಗ್ರಹ ೪೮.೮೪ ಕೋಟಿ ರೂ., ಸಾರ್ವಜನಿಕ ಆಡಳಿತ ೪೩.೪೭ ಕೋಟಿ ರೂ., ಇತರೆ ಸೇವೆ ೫೨.೨೧ ಕೋಟಿ ರೂ.

ಜಿಲ್ಲೆಯ ತಲಾ ಆದಾಯ ೪೨೨೩ ರೂ. ಇದ್ದು ಹಿಂದಿನ ಸಾಲಿಗಿಂತ (೧೯೮೯-೯೦ರಲ್ಲಿ ೩೭೫೧ ರೂ) ೪೭೨ ರೂ. ಹೆಚ್ಚಾಗಿದ್ದಿತು.

**ಕೋಷ್ಟಕ ೮.೧೨**

ಗುಲಬರ್ಗಾ ಜಿಲ್ಲೆಯ ಅಭಿವೃದ್ಧಿ ಸೂಚಿ

| ವರ್ಷ | ಅಭಿವೃದ್ಧಿ ಸೂಚಿ | ಶ್ರೇಣಿ |
|---|---|---|
| ೧೯೬೦-೬೧ | ೬೦-೧೦ | ೧೯ |
| ೧೯೭೦-೭೧ | ೬೩-೧೯ | ೧೯ |
| ೧೯೭೪-೭೫ | ೬೭-೦೪ | ೧೯ |
| ೧೯೭೬-೭೭ | ೬೬-೮೩ | ೧೯ |
| ೧೯೭೯-೮೦ | ೬೫-೭೭ | ೧೯ |
| ೧೯೮೧-೮೨ | ೬೮.೧೦ | ೧೯ |
| ೧೯೮೫-೮೬ | ೧೩೮.೪ | ೧೯ |
| ೧೯೯೦-೯೧ | ೧೪೯.೫ | ೧೯ |
| ೧೯೯೧-೯೨ | ೧೫೩.೨ | -- |
| ೧೯೯೨-೯೩ | ೧೬೦.೮ | -- |
| ೧೯೯೩-೯೪ | ೧೬೯.೮ | -- |
| ೧೯೯೪-೯೫ | ೧೭೫.೩ | -- |

## ವೇತನ

ಈ ಜಿಲ್ಲೆಯಲ್ಲಿ ೨೦ನೇ ಶತಮಾನದ ಪ್ರಾರಂಭದಲ್ಲಿ ಗಂಡಾಳು ಕೃಷಿ ಕೆಲಸಗಾರನಿಗೆ ದಿನಕೂಲಿ ಸುಮಾರು ೨ ಆಣೆ (೧೨ ಪೈ), ಹೆಣ್ಣಾಳಿಗೆ ೧.೫ ಆಣೆ (೧೦ ಪೈಸೆ) ಇದ್ದಿತು. ನಂತರ ಯುದ್ಧಕಾಲದಲ್ಲಿ ವೇತನ ಹೆಚ್ಚಿ ದಿನಕ್ಕೆ ೬ ಆಣೆ ಹಾಗೂ ೪.೫ ಆಣೆ ಇದ್ದು, ಸುಮಾರು ೧೯೬೦ರಲ್ಲಿ ದಿನಗೂಲಿ ೩ ರೂ. ಇದ್ದಿತು. ಒಬ್ಬ ಮೇಸ್ತ್ರಿಗೆ ಸುಮಾರು ೪ ರೂ., ಬಣ್ಣ ಹಚ್ಚುವವನಿಗೆ ೨-೫೦ ರೂ., ಸಹಾಯಕ ಕೆಲಸಗಾರನಿಗೆ ರೂ. ೧-೫೦ ನಿಂದ ೨-೦೦ ಇದ್ದಿತು. ಒಬ್ಬ ಸರ್ಕಾರಿ ಕಾರಕೂನನಿಗೆ ಮಾಸಿಕ ಸುಮಾರು ೭೦ ರೂ., ಅಧೀಕ್ಷಕರಿಗೆ ರೂ. ೯೦, ತಹಶೀಲ್ದಾರ ಅಥವಾ ತತ್ಸಮಾನ ಹುದ್ದೆಗೆ ರೂ. ೧೦೦, ಹೈಸ್ಕೂಲು ಉಪಾಧ್ಯಾಯರಿಗೆ ೬೫-೭೫ ರೂ. ಇದ್ದಿತು. ಸರ್ಕಾರಿ ಕಾಯಿದೆಯಂತೆ ವೇತನವನ್ನು ಜೀವನ ವಸ್ತುಗಳ ಸೂಚ್ಯಂಕದ ಆಧಾರದ ಮೇಲೆ ನಿಷ್ಕರ್ಷೆ ಮಾಡಲಾಯಿತು.

ಇದರಂತೆ ೧೯೬೪-೬೫ರಲ್ಲಿ ಒಬ್ಬ ದ್ವಿತೀಯ ದರ್ಜೆ ಗುಮಾಸ್ತನಿಗೆ ೯೦ ರೂ., ಪ್ರಥಮ ದರ್ಜೆ ಗುಮಾಸ್ತನಿಗೆ ೧೧೦ ರೂ., ಕಾಲೇಜು ಉಪನ್ಯಾಸಕನಿಗೆ ೨೭೫ ರೂ. ಇದ್ದಿತು.

೧೯೫೭ರಿಂದ ೯೮ರ ವರೆಗೆ ಇದ್ದ ಕೆಲವು ಹುದ್ದೆಗಳ ಮೂಲವೇತನ ಈ ರೀತಿ ಇದ್ದಿತು.

**ಕೋಷ್ಟಕ** ೮.೧೩

(ರಾಜ್ಯ ಸರ್ಕಾರಿ ಕಛೇರಿಗಳಲ್ಲಿ)

| ಹುದ್ದೆ | ೧.೧.೫೭ ರಲ್ಲಿ | ೧.೧.೬೧ ರಲ್ಲಿ | ೧.೧.೭೦ ರಲ್ಲಿ | ೧.೧.೭೭ ರಲ್ಲಿ | ೧.೧.೮೨ ರಲ್ಲಿ | ೧.೭.೮೬ ರಲ್ಲಿ | ೧.೭.೯೬ ರಲ್ಲಿ |
|---|---|---|---|---|---|---|---|
| ಜವಾನ (ಗ್ರೂಪ್ ಡಿ) | ೨೫ | ೫೦ | ೬೫ | ೨೫೦ | ೩೯೦ | ೭೮೦ | ೮೪೦ |
| ದಫೇದಾರ | ೩೦ | ೫೫ | ೮೦ | ೨೮೦ | ೪೧೦ | ೮೧೦ | ೮೭೦ |
| ಪೊಲೀಸ್ ಪೇದೆ | ೩೦ | ೬೫ | ೮೦ | ೩೦೦ | ೪೯೦ | ೯೬೦ | ೧,೦೪೦ |
| ಪ್ರೈಮರಿ ಶಾಲೆ ಉಪಾಧ್ಯಾಯ | ೫೦ | ೮೦ | ೧೦೦ | ೩೪೦ | ೫೫೦ | ೧,೦೪೦ | ೧,೧೩೦ |
| ದ್ವಿ.ದ.ಸ. (ಗು) | ೫೦ | ೮೦ | ೯೦ | ೩೦೦ | ೪೯೦ | ೯೬೦ | ೧,೦೪೦ |
| ಪ್ರ.ದ.ಗು. | ೭೫ | ೧೧೦ | ೧೩೦ | ೧೪೦೦ | ೬೩೦ | ೧,೧೯೦ | ೧,೨೮೦ |
| ಪ್ರೌಢಶಾಲೆ ಉಪಾಧ್ಯಾಯ | ೭೫ | ೧೩೦ | ೧೭೫ | ೫೦೦ | ೭೫೦ | ೧,೪೦೦ | ೧,೫೨೦ |

ಮೇಲಿನ ವೇತನ ಶ್ರೇಣಿ ಸರ್ಕಾರಿ ಕಛೇರಿಗಳಲ್ಲಿ ಇದ್ದು, ಸರ್ಕಾರೇತರ ಕಛೇರಿಗಳಲ್ಲಿ, ವೇತನ ಇನ್ನೂ ಕಡಿಮೆ ಇದ್ದಿತು. ಒಂದು ಖಾಸಗಿ ಸಂಸ್ಥೆಯಲ್ಲಿ ಒಬ್ಬ ದ್ವಿ.ದ. ಗುಮಾಸ್ತನಿಗೆ ಸರ್ಕಾರಿ ಕಛೇರಿಯಲ್ಲಿನ ವೇತನ ಶೇ. ೫೦ ರಿಂದ ಶೇ. ೬೦ ರಷ್ಟು ಮಾತ್ರ ಕೊಡುತ್ತಿದ್ದರು. ಕೆಲವು ದಿನಗೂಲಿ ನೌಕರರ ಮಾಸಿಕ ವೇತನ ಈ ರೀತಿ ಇದ್ದಿತು.

ಬಿಲ್ ಕಲೆಕ್ಟರ್, ಕಾರಕೂನ, ಸೈಲ್ಸ್‌ಮ್ಯಾನ್ ಶಾಪ್ ಸಹಾಯಕ ಇತ್ಯಾದಿ

ರೂ. ೩೩೫-(೧೯೮೦-೮೧), ೪೩೫ ರೂ. (೧೯೮೮-೮೯) : ರಲ್ಲಿ

ಮ್ಯಾನೇಜರ್, ಫಾರ್ಮಸಿಸ್ಟ್, ಕೆಮಿಸ್ಟ್ ರೂ. ೫೮೪ (೧೯೮೮-೮೯)

| | | |
|---|---|---|
| ಅಕೌಂಟೆಂಟ್, ಶೀಘ್ರಲಿಪಿಗಾರರು | ರೂ. ೫೦೩ (೧೯೮೮-೮೯) | |
| ಗೋಣಿಚೀಲ ಹೊಲೆಯುವವ | ಒಂದು ಚೀಲ ಹೊಲೆಯಲು ೭೦ ಪೈಸೆ | |
| ಹೋಟೆಲ್‌ನಲ್ಲಿ ಅಡಿಗೆ ಮಾಡುವವ | ಮಾಸಿಕ | ೪೦೦ ರೂ. |
| ಕೊಠಡಿ ಸೇವಕ | ಮಾಸಿಕ | ೩೫೦ |
| ಕಾಫಿ ತಯಾರಿಸುವವ | ಮಾಸಿಕ | ೨೮೫ |
| ತರಕಾರಿ ಹೆಚ್ಚುವವ | ಮಾಸಿಕ | ೨೬೫ |
| ರಿಸೆಪ್ಷನಿಸ್ಟ್ | ಮಾಸಿಕ | ೪೦೦ |
| ಎಲೆಕ್ಟ್ರಿಷಿಯನ್ | ಮಾಸಿಕ | ೩೮೦ |
| ಲಿಫ್ಟ್ ಸಹಾಯಕ | ಮಾಸಿಕ | ೨೬೫ |

ಕೃಷಿಕ ಕಾರ್ಮಿಕರಲ್ಲಿ ಪ್ರತಿ ದಿನದ ವೇತನ ಈ ರೀತಿ ಇದ್ದಿತು.

| | | |
|---|---|---|
| ೧. | ಕಳೆ ಕೀಳುವುದು | ರೂ. ೧೫-೨೦ |
| ೨. | ಭೂಮಿ ಅಗೆಯುವುದು | ೧೫-೨೦ |
| ೩. | ಟ್ರಾಕ್ಟರ್ ಮೂಲಕ ಉಳುವುದು | ೧೬-೪೦ |

೪. ಉಳುವುದು ೧೫-೨೦

೫. ಗೊಬ್ಬರ ಸಾಗಿಸುವುದು ೧೩-೨೫

ಹೆಚ್ಚು ಕಡಿಮೆ ಎಲ್ಲಾ ಬಗೆಯ ಕೆಲಸಗಳಿಗೂ ಗರಿಷ್ಟ ರೂ. ೧೬-೪೦ ಮತ್ತು ಕನಿಷ್ಟ ರೂ. ೧೩-೨೫ ದಿನಗೂಲಿ ೧೯೮೪ರ ಹೊತ್ತಿಗೆ ಇದ್ದಿತು. ಮನೆ ಕೆಲಸ ಮಾಡುವ ವ್ಯಕ್ತಿಗೆ ೧೯೯೦ರ ಹೊತ್ತಿಗೆ ಗರಿಷ್ಠ ಮಾಸಿಕ ೧೦೦ ರೂ. ಕನಿಷ್ಟ ೬೦ ರೂ. ಇದ್ದಿತು. ಇತ್ತೀಚೆಗೆ ಈ ವೇತನವು ಗರಿಷ್ಟ ಸುಮಾರು ರೂ. ೧೭೫ ಕನಿಷ್ಟ ೧೦೦ ರೂ. ಇದೆ. (ಸುಮಾರು ೫-೬ ಸದಸ್ಯರಿರುವ ಮನೆಯಲ್ಲಿ ಎಲ್ಲಾ ಕೆಲಸ ಮಾಡಲು) ಆದರೆ ಈ ವೇತನ ನೀಡುವಿಕೆಗೆ ಯಾವ ಕಾಯಿದೆಯೂ ಇಲ್ಲ.

ಗುಲಬರ್ಗಾ ಜಿಲ್ಲೆಯಲ್ಲಿ ಕನಿಷ್ಟ ವೇತನ ಕಾಯ್ದೆಯನ್ವಯ ಕೆಲವು ಕೆಲಸಗಾರರಿಗೆ ವೇತನವನ್ನು ೧೯೫೦ಕ್ಕೆ ಮುಂಚೆ ನಿಗದಿಪಡಿಸಲಾಗಿತ್ತು. ಅದರಂತೆ ಕನಿಷ್ಟ ೩೯ ರೂ. ಮತ್ತು ಗರಿಷ್ಟ ೪೭ ರೂ. ನಂತರ ೧೯೫೨ರಿಂದಲೂ ಕೆಲವು ಕೆಲಸಗಾರರಿಗೆ ವೇತನ ನಿಗದಿಪಡಿಸಲಾಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ತಿಳಿಸಲಾಗಿದೆ.

ಕಾಮಗಾರಿ ಅಥವಾ ರಸ್ತೆ ಸುವ್ಯವಸ್ಥೆ ಮತ್ತು ಕಟ್ಟಡ ನಿರ್ಮಾಣ ಕಾರ್ಯ, ಸಾರ್ವಜನಿಕ ವಾಹನ ಚಾಲನೆ, ಕಲ್ಲು ಒಡೆಯುವುದು, ಚರ್ಮದ ಕೆಲಸ, ತೋಟದ ಕೆಲಸ, ಹಿಟ್ಟಿನ ಗಿರಣಿಯಲ್ಲಿ ಕೆಲಸ, ರೇಷ್ಮೆ ಕೈಗಾರಿಕೆ, ಹೊಗೆಸೊಪ್ಪು ಕೈಗಾರಿಕೆ, ಹತ್ತಿ ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗ ಕೈಗಾರಿಕೆ, ಬೇಕರಿ, ಪೆಟ್ರೋಲ್ ಮತ್ತು ಡೀಸೆಲ್ ಪಂಪುಗಳಲ್ಲಿ ಕೆಲಸ, ಆಸ್ಪತ್ರೆ, ಎಣ್ಣೆಗಿರಣಿ, ಅಂಗಡಿಗಳು, ಮುದ್ರಣ ಕೈಗಾರಿಕೆ, ಫೌಂಡ್ರಿ ಮೊದಲಾದವುಗಳು.

ನಂತರ ಕನಿಷ್ಟ ದರಗಳನ್ನು ೧ನೇ ಅಕ್ಟೋಬರ್ ೧೯೯೪ರಿಂದ ಜಾರಿಗೆ ಬರುವಂತೆ ಸರ್ಕಾರವು ಕನಿಷ್ಟ ವೇತನ ಕಾಯಿದೆಯಂತೆ ಈ ಕೆಳಕಂಡ ಕಾರ್ಮಿಕರುಗಳಿಗೆ ನಿಗದಿಪಡಿಸಿದೆ.

**ಕೋಷ್ಟಕ ೮.೧೪**

| ಕ್ರಮ ಸಂಖ್ಯೆ | ಕೆಲಸಗಾರರು | ಕನಿಷ್ಟ ವೇತನ ಮಾಸಿಕ |
|---|---|---|
| ೧. | ಕುಶಲ ಕಾರ್ಮಿಕರು | |
| | ೧) ಫಿಟ್ಟರ್<br>೨) ಎಲೆಕ್ಟ್ರಿಷಿಯನ್ | ೧೦೪೭ |
| ೨. | ಅರೆ ಕುಶಲ ಕಾರ್ಮಿಕರು | |
| | ೧) ಬಿಸ್ಕತ್ ತಯಾರಿಕೆಯಲ್ಲಿ ತೊಡಗಿರುವ ಎಲ್ಲಾ ಕಾರ್ಮಿಕರು | ೯೩೬ |
| | ೨) ಪ್ಯಾಕರ್ | |
| ೩. | ಕುಶರಲ್ಲದವರು | ೯೩೬ |
| ೪. | ಕಛೇರಿ ಸಿಬ್ಬಂದಿ | |
| | ೧. ಸೂಪರ್‌ವೈಸರ್<br>೨. ಅಕೌಂಟೆಂಟ್ | ೧೩೨೧ |
| | ೩. ಕ್ಲಾರ್ಕ್ | ೧೦೯೭ |
| | ೪. ಕ್ಯಾಷಿಯರ್ | ೧೨೧೮ |
| | ೫. ಕ್ಲಾರ್ಕ್ ಕಂ ಸ್ಟೆನೋಗ್ರಾಫರ್ | ೧೩೨೧ |
| | ೬. ವಾಚ್‌ಮನ್<br>೭. ಆಫೀಸ್‌ಬಾಯ್ | ೯೩೬ |

ಈ ದರಗಳು ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕ (೧೯೬೦-೧೦೦) ೧೩೯೪ ಅಂಶಗಳಿಗೆ ವಿಲೀನಗೊಳಿಸಿ ನಿಗಪಡಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕ ೧೩೯೪ ಅಂಶಗಳಿಗಿಂತ ಹೆಚ್ಚಾಗಿರುವ ಪ್ರತಿ ಅಂಶಕ್ಕೆ ದಿನವೊಂದಕ್ಕೆ ೩ ಪೈಸೆಯಂತೆ ತುಟ್ಟಿ ಭತ್ಯೆಯನ್ನು ನೀಡಲಾಗುವುದು. ಜೀವನ ನಿರ್ವಹಣಾ ಭತ್ಯೆಯ ಲೆಕ್ಕಾಚಾರವನ್ನು ಪ್ರತಿವರ್ಷ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ ೧೨ ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿವರ್ಷ ಲೆಕ್ಕಾಚಾರ ಮಾಡಿ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಅವರೋಹಣ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಿ ಕೊಡಲಾಗುವುದು. ವಿದ್ಯುತ್ ಮಗ್ಗ, ಕೈಮಗ್ಗ ಮತ್ತು ರೇಷ್ಮೆ ಉದ್ಯಮದ ಕಾರ್ಮಿಕರಿಗೆ ಹಿಂದೆ ಕಾರ್ಮಿಕ ಕಾಯ್ದೆ ಅನ್ವಯವಾಗಿದ್ದು, ೧೯೯೦-೯೨ರ ಅವಧಿಯಲ್ಲಿ ಈ ಕಾಯ್ದೆ ಅನ್ವಯವಾಗುವಂತೆ ಸರ್ಕಾರ ವಿನಾಯಿತಿ ನೀಡಲಾಗಿತ್ತು. ಈ ಬಗ್ಗೆ ಪುನರ್ ಪರಿಶೀಲಿಸಿ ಐದು ಲಕ್ಷಕ್ಕಿಂತಲೂ ಹೆಚ್ಚು ಕಾರ್ಮಿಕರಿರುವ ಈ ಉದ್ದಿಮೆಗಳಿಗೆ ರಾಜ್ಯಾದ್ಯಂತ ಈ ಉದ್ಯಮದ ಕಾರ್ಮಿಕರನ್ನು ಪುನಃ ಕಾರ್ಖಾನೆ ಕಾಯ್ದೆಯಡಿ ತರಲು ಸರ್ಕಾರ ಯೋಜಿಸಿದೆ. ಇದರಂತೆ ಗುಲಬರ್ಗಾ ಜಿಲ್ಲೆಯಲ್ಲಿನ ಕೈಮಗ್ಗ, ವಿದ್ಯುತ್ ಮಗ್ಗ ಮತ್ತು ರೈಷ್ಮೆ ಕಾರ್ಮಿಕರಿಗೂ ಈ ವ್ಯವಸ್ಥೆ ಜಾರಿಗೆ ತಂದಿದೆ.

**ಭೂಮಿಯ ಬೆಲೆ**

ಆಳಂದ ತಾಲೂಕಿನ ರುದ್ರವಾಡಿಯಲ್ಲಿರುವ ೧೧೦೩ರ ಆರನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಶಾಸನವು ೩೦೦ ಮತ್ತರು (ಒಂದು ಮತ್ತರು ಸುಮಾರು ೩.೭೫ ಎಕರೆಗೆ ಸಮ) ಭೂಮಿಯನ್ನು (ಹೊಲ) ೫೦೦ ಗದ್ಯಾಣಕ್ಕೆ ಖರೀದಿಸಿ ದೇವಾಲಯಕ್ಕೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ನಂತರದ ಭೂಮಿಯ ಬೆಲೆ ಹೆಚ್ಚಾಗುತ್ತಾ ಬಂದಿದೆ.

ರಾಜ್ಯದ ಇತರೆಡೆಯಂತೆ ಹಲವಾರು ಕಾರಣಗಳಿಂದ ಗುಲಬರ್ಗಾ ಜಿಲ್ಲೆಯಲ್ಲಿಯೂ ಭೂಮಿಯ ಬೆಲೆಯು ಗಣನೀಯವಾಗಿ ಹೆಚ್ಚಿದೆ. ೧೯೬೦ಕ್ಕೂ ಮೊದಲು, ಭೂಮಿಯ ಬೆಲೆ ಎಕರೆಗೆ ೨೦೦-೩೦೦ರೂ. ಇದ್ದು (ಸೇಡಂ ತಾಲೂಕಿನಲ್ಲಿ ೩೩೪ ರೂ., ಆಳಂದ ತಾಲೂಕು ೧೭೮ ರೂ.) ನಂತರದ ದಶಕದಲ್ಲಿ ಹೆಚ್ಚಾಗಿದೆ. ತಾಲೂಕುವಾರು ಜಮೀನಿನ ಬೆಲೆಯಲ್ಲಿ ಆದ ಹೆಚ್ಚಳವನ್ನು ಇಲ್ಲಿ ಕೊಡಲಾಗಿದೆ. ಆಳಂದ ತಾಲೂಕಿನಲ್ಲಿ ೧೯೬೦-೬೧ರಿಂದ ೧೯೯೦-೯೧ರವರೆಗೆ ಅಂದರೆ ೩೦ ವರ್ಷಗಳಲ್ಲಿ ಶೇ. ೯೫೦ರಷ್ಟು ಜಮೀನಿನ ಬೆಲೆ ಹೆಚ್ಚಾಗಿದೆ. ನಂತರ ೧೯೯೦-೯೧ರಿಂದ ೧೯೯೪-೯೫ರವರೆಗಿನ ಅವಧಿಯಲ್ಲಿ ಶೇ. ೪೪೩ರಷ್ಟು ಹೆಚ್ಚಾಗಿದೆ. ಜೇವರ್ಗಿ ತಾಲೂಕಿನಲ್ಲಿ ೧೯೬೦-೬೧ರಿಂದ ೧೯೯೦-೯೧ರ ಅವಧಿಯಲ್ಲಿ, ಶೇ. ೧,೩೨೨ರಷ್ಟು ಜಮೀನಿನ ಬೆಲೆ ಎಕರೆಗೆ ಹೆಚ್ಚಾಗಿದೆ. ಆದರೆ ನಂತರದ ೫ ವರ್ಷಗಳ ಅವಧಿಯಲ್ಲಿ ಅಂದರೆ ೧೯೯೦-೯೧ರಿಂದ ೯೪-೯೫ರವರೆಗಿನ ಅವಧಿಯಲ್ಲಿ ಶೇ. ೧೦೬ರಷ್ಟು ಜಮೀನಿನ ಬೆಲೆ ಹೆಚ್ಚಾಗಿದೆ. ಸೇಡಂ ತಾಲೂಕಿನಲ್ಲಿ ಖುಷ್ಕಿ ಜಮೀನು ೩೦ ವರ್ಷಗಳ ಅವಧಿಯಲ್ಲಿ (೧೯೬೦-೬೧ ರಿಂದ ೯೦-೯೧ರವರೆಗೆ) ಶೇ. ೨೭೯೦ ಹೆಚ್ಚಾಗಿದ್ದು, ನಂತರದ ೫ ವರ್ಷದ ಅವಧಿಯಲ್ಲಿ ಶೇ. ೫೪ರಷ್ಟು ಹೆಚ್ಚಾಗಿದೆ. ತರೀ ಜಮೀನು ೧೯೮೫-೮೬ರಿಂದ ೧೯೯೪-೯೫ರವರೆಗಿನ ಅವಧಿಯಲ್ಲಿ ಶೇ. ೧೪೫ ಹೆಚ್ಚಾಗಿದೆ. ಆದರೆ ೧೯೯೨-೯೩ರ ಬೆಲೆಗಿಂತಲೂ ೧೯೯೩-೯೪ರ ಬೆಲೆಯು ಶೇ. ೧೩ರಷ್ಟು ಇಳಿಮುಖವಾಗಿದೆ. ಯಾದಗಿರಿ ತಾಲೂಕಿನಲ್ಲಿ ಖುಷ್ಕಿ ಜಮೀನು ೧೯೬೦-೬೧ರಿಂದ ೧೯೯೦-೯೧ರ ಅವಧಿಯಲ್ಲಿ ಶೇ. ೧೫೦೪ರಷ್ಟು ಹೆಚ್ಚಾಗಿದ್ದು, ನಂತರದ ೫ ವರ್ಷಗಳ ಅವಧಿಯಲ್ಲಿ ಶೇ. ೧೧೧ ಹೆಚ್ಚಾಗಿದೆ. ಹಾಗೆಯೇ ತರಿಜಮೀನು ೧೯೬೦-೬೧ರಿಂದ ೩೦ ವರ್ಷಗಳ ಅವಧಿಯಲ್ಲಿ ಶೇ. ೯೦೦ ಹೆಚ್ಚಿದ್ದು, ನಂತರದ ೫ ವರ್ಷದ ಅವಧಿಯಲ್ಲಿ ಶೇ. ೫೯ರಷ್ಟು ಹೆಚ್ಚಿದೆ.

ಗುಲಬರ್ಗಾ ಜಿಲ್ಲೆಯಲ್ಲಿ ೧೯೬೦-೬೧ರಿಂದ ೧೯೯೪-೯೫ರವರೆಗೆ ಮಾರಾಟವಾದ ತಾಲೂಕುವಾರು ಭೂಮಿಯ ವಿಸ್ತೀರ್ಣ ಮತ್ತು ಎಕರೆಯ ದರ,

**ಕೋಷ್ಟಕ ೮.೧೫**

**ಆಳಂದ ತಾಲ್ಲೂಕು**

| ವರ್ಷ | ಮಾರಾಟವಾದ ಭೂಮಿ ಎಕರೆಗಳಲ್ಲಿ | ರೂ. ಎಕರೆಗೆ | ಹಿಂದಿನ ಸಾಲಿಗೆ ಶೇಕಡ ಹೆಚ್ಚಳ |
|---|---|---|---|
| ೧೯೬೦-೬೧ | ೨,೫೮೬ | ೧೭೮ | -- |
| ೧೯೭೦-೭೧ | ೭,೫೬೮ | ೪೬೧ | ೧೫೮ |
| ೧೯೮೦-೮೧ | ೨,೮೬೨ | ೧,೦೪೨ | ೧೨೬ |
| ೧೯೯೦-೯೧ | ೪,೧೦೭ | ೧,೮೬೯ | ೭೯ |
| ೧೯೯೧-೯೨ | ೩,೦೨೫ | ೫,೬೩೦ | ೨೦೧ |
| ೧೯೯೨-೯೩ | ೨,೬೮೩ | ೭,೫೧೬ | ೩೩ |
| ೧೯೯೪-೯೫ | ೨,೬೬೫ | ೮,೮೬೫ | ೧೮ |
| ೧೯೯೪-೯೫ | ೩,೨೦೧ | ೧೦,೧೫೭ | ೧೫ |
| ೧೯೬೦-೬೧ | ರಿಂದ ೧೯೯೦-೯೧ | ೩೦ ವರ್ಷಗಳಲ್ಲಿ | ೯೫೦ ಶೇ. |
| ೧೯೯೦-೯೧ | ರಿಂದ ೧೯೯೪-೯೫ | ೫ ವರ್ಷಗಳಲ್ಲಿ | ೪೪೩ ಶೇ. |

**ಕೋಷ್ಟಕ ೮.೧೬**

**ಜೇವರ್ಗಿ ತಾಲೂಕು**

| ವರ್ಷ | ಮಾರಾಟವಾದ ಭೂಮಿ ಎಕರೆಗಳಲ್ಲಿ | ಮೌಲ್ಯ ಎಕರೆಗೆ ರೂ. | ಶೇಕಡ ಹೆಚ್ಚಳ | |
|---|---|---|---|---|
| ೧೯೬೦-೬೧ | ಕಛೇರಿ ಇರಲಿಲ್ಲ | | | |
| ೧೯೭೦-೭೧ | ೮,೪೦೦ | ೨೪೯ | | |
| ೧೯೮೦-೮೧ | ೧,೬೩೦ | ೨,೦೩೬ | ೭೧೭ | ೧೯೭೦-೭೧ ರಿಂದ ೧೯೯೦-೯೧ |
| ೧೯೯೦-೯೧ | ೩,೨೫೦ | ೧,೩೪೩ | ೬೭ | ರ ವರೆಗೆ ಹೆಚ್ಚಳ ೧೩.೨೨ (ಶೇ.) |
| ೧೯೯೧-೯೨ | ೩,೮೦೦ | ೩,೭೪೧ | ೦೫ | |
| ೧೯೯೨-೯೩ | ೩,೬೨೦ | ೪,೪೫೮ | ೧೯ | ೧೯೯೦-೯೧ - ೯೪-೯೫ |
| ೧೯೯೩-೯೪ | ೩,೯೧೫ | ೪,೨೮೩ | -೩ | ಹೆಚ್ಚಳ ೧೦೬ (ಶೇ) |
| ೧೯೯೪-೯೫ | ೪,೦೫೦ | ೭,೫೧೦ | ೮೦ | |

## ಕೋಷ್ಟಕ ೮.೧೭
## ಸೇಡಂ ತಾಲೂಕು-ಖುಷ್ಕಿ ಜಮೀನು

| ೧ | ೨ | ೩ | ೪ | |
|---|---|---|---|---|
| ೧೯೬೦-೬೧ | ೮೮೨ | ೩೩೪ | | ೧೯೬೦-೬೧ ರಿಂದ |
| ೧೯೭೦-೭೧ | ೧,೧೫೦ | ೧೫೩೭ | ೩೬೦ | ೧೯೯೦-೯೧ರ ವರೆಗೆ |
| ೧೯೮೦-೮೧ | ೬೦೦ | ೬೧೬೮ | ೩೦೧ | ಹೆಚ್ಚಳ ೨೭೯೦ |
| ೧೯೯೦-೯೧ | ೧,೪೩೧ | ೯೬೫೪ | ೫೬ | |
| ೧೯೯೧-೯೨ | ೧,೬೯೮ | ೧೪೪೦೩ | ೪೯ | ೧೯೯೦-೯೧ ರಿಂದ |
| ೧೯೯೨-೯೩ | ೧,೫೮೦ | ೧೩,೨೬೫ | -೮ | ೯೪-೯೫ |
| ೧೯೯೩-೯೪ | ೧,೨೦೦ | ೧೬೬೦೫ | ೨೫.೭ | ಶೇ, ೫೪,೬ |
| ೧೯೯೪-೯೫ | ೧,೬೫೦ | ೧೪೯೨೭ | -೧೦ | |

## ಕೋಷ್ಟಕ ೮.೧೮
## ತರಿ (ನೀರಾವರಿ) ಜಮೀನು

| ೧ | ೨ | ೩ | ೪ | |
|---|---|---|---|---|
| ೧೯೮೫-೮೬ | ೧೯ | ೧೨,೨೨೨ | | |
| ೧೯೯೦-೯೧ | ೧೦ | ೨೧,೩೦೦ | ೭೪.೨ | |
| ೧೯೯೧-೯೨ | ೩೨ | ೨೪,೩೧೨ | ೧೪ | ೧೯೮೫-೮೬ರಿಂದ ೧೯೯೪-೯೫ರವರೆಗೆ ಹೆಚ್ಚಳ ೧೪೫ |
| ೧೯೯೨-೯೩ | ೧೦ | ೨೯,೩೦೮ | ೨೦ | |
| ೧೯೯೩-೯೪ | ೧೩ | ೨೫,೩೦೭ | -೧೩ | |
| ೧೯೯೪-೯೫ | ೧೨ | ೩೦,೦೦೦ | ಋ೧೯ | |

## ಕೋಷ್ಟಕ ೮.೧೯
## ಯಾದಗಿರಿ ತಾಲೂಕು ಖುಷ್ಕಿ ಜಮೀನು

| ವರ್ಷ | ಮಾರಾಟವಾದ ಭೂಮಿ ಎಕರೆಗಳಲ್ಲಿ | ಮೌಲ್ಯ ಎಕರೆಗೆ ರೂ. | ಶೇಕಡಾ ಹೆಚ್ಚಳ | |
|---|---|---|---|---|
| ೧೯೬೦-೬೧ | ೮೨೦ | ೨೪೧ | | ೧೯೬೦-೬೧ರಿಂದ ೧೯೯೦-೯೧ರ ವರೆಗೆ ಹೆಚ್ಚಳ ಶೇ. ೫೦೪ |
| ೧೯೭೦-೭೧ | ೫,೯೧೩ | ೩೬೫ | ೪೭ | |
| ೧೯೮೦-೮೧ | ೨,೧೧೮ | ೧೦೦ | ೪೭೫ | ೯೦-೯೧ ರಿಂದ ೯೪-೯೫ರ ವರೆಗೆ ಹೆಚ್ಚಳ ಶೇ. ೧೧೧ |

| | | | |
|---|---|---|---|
| ೧೯೯೦-೯೧ | ೨೧೩೨ | ೩,೮೬೬ | ೮೪ |
| ೧೯೯೧-೯೨ | ೨೬೪೬ | ೫,೨೦೭ | ೩೪ |
| ೧೯೯೨-೯೩ | ೧೯೮೭ | ೬,೬೦೨ | ೨೭ |
| ೧೯೯೩-೯೪ | ೨೦೨೦ | ೬,೬೧೧ | ೦೦ |
| ೧೯೯೪-೯೫ | ೨೦೫೪ | ೮,೧೬೧ | ೨೩ |

**ಕೋಷ್ಟಕ ೮.೨೦**

**ತರಿ ಜಮೀನು**

| | | | | |
|---|---|---|---|---|
| ೧೯೬೦-೬೧ | ೨೩ | ೧,೫೦೧ | | |
| ೧೯೭೦-೭೧ | ೨೩೭ | ೨,೨೪೭ | ೫೦ | ೬೦-೬೧ರಿಂದ ೯೦-೯೧ರ ವರೆಗೆ ಹೆಚ್ಚಳ ಶೇ. ೯೦೦ |
| ೧೯೮೦-೮೧ | ೨೮೦ | ೫,೫೩೨ | ೧೪೬ | |
| ೧೯೯೦-೯೧ | ೧೦೧ | ೧೫,೧೧೦ | ೧೭೧ | ೯೦-೯೧ರಿಂದ ೯೪-೯೫ರ ವರೆಗೆ ಹೆಚ್ಚಳ ಶೇ. ೫೯ |
| ೧೯೯೧-೯೨ | ೧೩೯ | ೨೦,೭೧೨ | ೩೮ | |
| ೯೨-೯೩ | ೧೧೧ | ೨೩,೦೯೯ | ೧೨ | |
| ೯೩-೯೪ | ೧೧೮ | ೨೩,೧೦೧ | ೦ | |
| ೯೪-೯೫ | ೧೩೭ | ೨೩,೯೧೨ | ೩ | |

### ಗುಲಬರ್ಗಾ ತಾಲೂಕು

ಗುಲಬರ್ಗಾ ತಾಲೂಕಿನಲ್ಲಿ ೧೯೬೦ರಿಂದ ೯೫ರವರೆಗೆ ಭೂಮಿಯ ಬೆಲೆಯಲ್ಲಾದ ಹೆಚ್ಚಳವನ್ನು ಈ ಪಟ್ಟಿಯಲ್ಲಿ ಕೊಡಲಾಗಿದೆ. ಈ ತಾಲೂಕಿನಲ್ಲಿ ೧೯೬೦ರಲ್ಲಿ ಖುಷ್ಕಿ ಜಮೀನು ಪ್ರತಿ ಎಕರೆಗೆ ೧೭೪ ರೂ. ಇದ್ದದ್ದು, ೧೯೯೫ರ ಹೊತ್ತಿಗೆ ೧೦,೫೭೯ ರೂ. ಆಗಿದ್ದಿತು. ಅಂದರೆ ಶೇ. ೫,೯೮೦ ಹೆಚ್ಚಳ ಉಂಟಾಗಿದೆ. ವ್ಯಾಪಾರವಾದ ಜಮೀನಿನ ವಿಸ್ತೀರ್ಣ ಹೆಚ್ಚು ಕಡಿಮೆ ಸ್ಥಿರವಾಗಿದ್ದಿತು. ೧೯೬೦ರಲ್ಲಿ ೩.೫೩೯ ಎಕರೆ ವ್ಯಾಪಾರವಾಗಿದ್ದಿತು. ೧೯೮೦-೮೧ರಲ್ಲಿ ೫,೮೫೩ ಎಕರೆ (ಗರಿಷ್ಟ) ಮತ್ತು ೬೬-೬೭ರಲ್ಲಿ ೨೦೦೪ ಎಕರೆ (ಕನಿಷ್ಟ) ಇದ್ದಿತು. ಉಳಿದಂತೆ ಸರಾಸರಿ ವಾರ್ಷಿಕ ೩೮೦೦ ರಿಂದ ೩೯೦೦ ಎಕರೆ ವ್ಯಾಪಾರವಾಗಿದೆ.

೧೯೮೦-೮೧ರಿಂದ ೧೯೮೫-೮೬ನೇ ಸಾಲಿಗೆ ಬೆಳೆಯನ್ನು ಹೋಲಿಸಿದಾಗ ಶೇ. ೨.೩೩ರಷ್ಟು ಹೆಚ್ಚು ಕಂಡು ಬರುತ್ತದೆ. ಆ ಅವಧಿಯಲ್ಲಿ ಭೂಮಿಯ ಬೆಲೆ ಹೆಚ್ಚಾಗಿದೆ.

**ಕೋಷ್ಟಕ ೮.೨೧**

| ವರ್ಷ | ಮಾರಾಟವಾದ ಭೂಮಿ ಎಕರೆಗಳಲ್ಲಿ | ಮೌಲ್ಯ ಎಕರೆಗೆ | ಹಿಂದಿನ ಸಾಲಿಗೆ ಶೇ. ಹೆಚ್ಚಳ |
|---|---|---|---|
| ೧೯೬೦ | ೩,೫೩೯ | ೧೭೪ | |
| ೧೯೬೫ | ೪,೯೧೦ | ೩೭೧ | +೧೧೩ |
| ೧೯೬೬-೬೭ | ೨,೦೦೪ | ೨೬೦ | - ೩೦ |
| ೧೯೭೦-೭೧ | ೪,೬೫೯ | ೭೧೫ | +೧೭೫ |
| ೧೯೭೫-೭೬ | ೪,೨೧೦ | ೭೪೩ | + ೪ |
| ೧೯೮೦-೮೧ | ೫,೮೫೩ | ೧,೨೦೯ | + ೬೨ |
| ೧೯೮೫-೮೬ | ೩,೨೩೧ | ೪,೦೩೩ | +೨೩೩.೫ |
| ೧೯೯೦-೯೧ | ೩,೬೮೨ | ೫,೧೬೯ | + ೨೮ |
| ೧೯೯೧-೯೨ | ೪,೩೯೪ | ೭,೬೩೨ | +೪[illegible] |
| ೧೯೯೨-೯೩ | ೩,೭೩೧ | ೭,೭೬೧ | ೧.೬ |
| ೧೯೯೩-೯೪ | ೩,೪೭೫ | ೯,೦೩೯ | ೧೬.೫ |
| ೧೯೯೪-೯೫ | ೪,೩೬೬ | ೧೦,೫೭೯ | ೧೭ |

(ಆಧಾರ : ಉಪ ನೋಂದಣಾಧಿಕಾರಿ, ಗುಲಬರ್ಗಾ)

## ಉದ್ಯೋಗ ವಿನಿಮಯ ಕೇಂದ್ರ

ಗುಲಬರ್ಗಾ ಜಿಲ್ಲೆಯಲ್ಲಿ ಉದ್ಯೋಗ ವಿನಿಯಮ ಕೇಂದ್ರವು ೧೯೫೯ನೇ ಫೆಬ್ರವರಿಯಲ್ಲಿ ಪ್ರಾರಂಭವಾಯಿತು. ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿಸಿ ಉದ್ಯೋಗವನ್ನು ಪಡೆಯುವ ಕ್ರಮ ಪ್ರಾರಂಭದಲ್ಲಿ ಅಂದರೆ ಸುಮಾರು ೧೯೬೦-೬೫ರಲ್ಲಿ ಅನೂಚಾನವಾಗಿ ಇದ್ದಿತು. ಉದ್ಯೋಗವನ್ನು ಪಡೆದವರೆಲ್ಲರೂ ವಿನಿಮಯ ಕೇಂದ್ರದಿಂದಲೇ ಪಡೆದವರೆಂದು ಹೇಳಲಾಗುವುದಿಲ್ಲ. ನೇರವಾಗಿ ಅರ್ಜಿಯನ್ನು ಹಾಕಿ, ಅಥವಾ ಬೇರೆ ವಿಧಾನಗಳಿಂದ ಉದ್ಯೋಗವನ್ನು ಪಡೆಯುತ್ತಿದ್ದರು. ಈ ಕ್ರಮ ಈಗಲೂ ಮುಂದುವರೆಯುತ್ತಿದೆ. ಆದರೂ ಕೆಲವು ಸರ್ಕಾರಿ ಮತ್ತು ಅರೆ ಸರ್ಕಾರಿ ಕಛೇರಿಗಳಿಗೆ ವಿನಿಮಯ ಕೇಂದ್ರದ ಅಭ್ಯರ್ಥಿಗಳನ್ನು ಆರಿಸುತ್ತಿದ್ದಾರೆ. ೧೯೫೯ನೇ ಕಾಯಿದೆ ಪ್ರಕಾರ ಖಾಸಗಿ ಉದ್ಯೋಗಗಳಿಗೂ, ಮಾಲೀಕರು ವಿನಿಮಯ ಕೇಂದ್ರದ ಮೂಲಕವೇ ಉದ್ಯೋಗಿಗಳನ್ನು ಆರಿಸಬೇಕೆಂಬ ನಿಯಮವಿದೆ. ಗುಲಬರ್ಗಾ ಜಿಲ್ಲೆಯಲ್ಲಿನ ಉದ್ಯೋಗವಿನಿಮಯ ಕೇಂದ್ರದಲ್ಲಿ ೧೯೬೦-೬೧ರಿಂದ ೧೯೬೪-೬೫ರವರೆಗೆ ನೋಂದಣಿಯಾದ ಅಭ್ಯರ್ಥಿಗಳ ವಿವರ ಈ ರೀತಿ ಇದೆ.

**ಕೋಷ್ಟಕ ೮.೨೨**

| ವರ್ಷ | ನೊಂದಣಿ ಯಾದವರ ಸಂಖ್ಯೆ | ದೊರೆತ ನೌಕರಿಗಳು | ವಿನಿಮಯ ಕೇಂದ್ರ ತಿಳಿಸಲ್ಪಟ್ಟ ನೌಕರಿಗಳು | ವರ್ಷದ ಅಖೈರಿನಲ್ಲಿ ರಿಜಿಸ್ಟರ್‌ನಲ್ಲಿ ಇದ್ದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|
| ೧೯೬೦-೬೧ | ೬,೦೯೭ | ೧,೧೧೧ | ೧,೨೦೪ | ೩,೨೧೭ |
| ೧೯೬೧-೬೨ | ೪,೫೭೮ | ೧,೪೬೧ | ೧,೭೫೨ | ೨,೫೯೧ |
| ೧೯೬೨-೬೩ | ೫,೮೦೫ | ೧,೨೦೯ | ೨,೪೪೧ | ೩,೨೫೮ |
| ೧೯೬೩-೬೪ | ೬,೨೧೪ | ೯೨೩ | ೧,೧೩೧ | ೪,೩೪೭ |
| ೧೯೬೪-೬೫ | ೬,೧೫೧ | ೬೮೮ | ೧,೧೩೨ | ೪,೫೧೨ |

(ಉದ್ಯೋಗಾಕಾಂಕ್ಷಿಗಳ ಪಟ್ಟಿ ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ)

**ತೋಟಗಾರಿಕೆ**

ಈ ಜಿಲ್ಲೆಯಲ್ಲಿ ತೋಟಗಾರಿಕೆಯು, ಸರ್ಕಾರೀ ಇಲಾಖೆಯ ವತಿಯಿಂದ ೧೯೬೦ರಲ್ಲಿ ಪ್ರಾರಂಭವಾಯಿತು. ಈ ಇಲಾಖೆಯು ಮುಖ್ಯವಾಗಿ ಸಲಹಾತ್ಮಕ ಕರ್ತವ್ಯವನ್ನೇ ಮಾಡಿದರೂ ಹೂವು, ಹಣ್ಣು, ತರಕಾರಿಗಳ ಬೀಜ ಮತ್ತು ಸಸಿಗಳನ್ನು ಯೋಗ್ಯ ಬೆಲೆಯಲ್ಲಿ ಪೂರೈಸುವ ಕೆಲಸವನ್ನೂ ಮಾಡುತ್ತದೆ. ಈ ಇಲಾಖೆಯಿಂದ ೧೯೬೫-೬೬ರಲ್ಲಿ ೨೦ ಎಕರೆಗಳಿಗಾಗುವಷ್ಟು ೧೦೦೦ ಸಸಿಗಳನ್ನೂ, ೧೯೬೬-೬೭ರಲ್ಲಿ ೪೦ ಎಕರೆಗಳಿಗಾಗುವಷ್ಟು ೨೦೦೦ ಸಸಿಗಳನ್ನೂ ರೈತರಿಗೆ ಇತರ ವೃತ್ತಿಗಳಿಗಾಗಿ ಕೊಡಲಾಗಿದೆ. ೧೯೭೮-೭೯ರ ಹೊತ್ತಿಗೆ ೩೨೪ ಎಕರೆಯ ಪ್ರದೇಶದಲ್ಲಿ ಹಣ್ಣು ಬೆಳವಣಿಗೆಗೂ, ೨೬೩೨ ಎಕರೆ ತರಕಾರಿ ಬೆಳೆಗೂ, ೬೩ ಎಕರೆ ತೆಂಗಿನಕಾಯಿ ಅಭಿವೃದ್ಧಿಗೂ, ೩೧೯೬ ಎಕರೆ ಸಸ್ಯ ಅಭಿವೃದ್ಧಿಗೂ, ೬೩ ಎಕರೆ ದ್ರಾಕ್ಷಿ ಅಭಿವೃದ್ಧಿಗೂ ತೆಗೆದುಕೊಳ್ಳಲಾಗಿತ್ತು. ೯೦ ರೈತರಿಗೆ ತೋಟಗಾರಿಕೆಯಲ್ಲಿ ತರಬೇತಿಯನ್ನು ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ ೮೦೦ ಕುಟುಂಬಗಳಿಗೆ ತೆಂಗಿನ ಸಸಿಗಳನ್ನು ನೀಡಲಾಯಿತು. ಜಿಲ್ಲೆಯಲ್ಲಿ ೮ ತೋಟಗಾರಿಕೆ ಫಾರ್ಮುಗಳು, ೭ ತೋಟಗಾರಿಕೆ ನರ್ಸರಿಗಳೂ ಇದ್ದವು. ಈ ಜಿಲ್ಲೆಯು ತೋಟಗಾರಿಕೆಗೆ ಹೆಚ್ಚು ಅನುಕೂಲವಲ್ಲದ ಜಿಲ್ಲೆಯಾಗಿದೆ. ನೀರಾವರಿಯು ಹೆಚ್ಚಿಲ್ಲವಾದುದರಿಂದಲೂ, ಆಗಾಗ್ಗೆ ಉಂಟಾಗುವ "ಬರ"ದಿಂದಲೂ, ತೋಟಗಾರಿಕೆ ಚಟುವಟಿಕೆ ಈ ಜಿಲ್ಲೆಯಲ್ಲಿ ಇನ್ನೂ ಅಭಿವೃದ್ಧಿ ಆಗಬೇಕಾಗಿದೆ.

ಜಿಲ್ಲೆಯಲ್ಲಿ ೧೯೯೪-೯೫ರಲ್ಲಿದ್ದ ಕೆಲವು ಮುಖ್ಯ ತೋಟದ ಬೆಳೆಗಳ ವಿಸ್ತೀರ್ಣದ ವಿವರ ಹೀಗಿದೆ. ಮಾವು - ೧೪೮೫ ಹೆ., ಬಾಳೆಹಣ್ಣು - ೨೭೫೨ ಹೆಯ, ನಿಂಬೆಹಣ್ಣು - ೧೧೯೪ ಹೆ., ದ್ರಾಕ್ಷಿ - ೯೮ ಹೆ., ತೆಂಗಿನಕಾಯಿ - ೯೯೫ ಹೆ., ವೀಳ್ಯದೆಲೆ - ೨೧೫ ಹೆ., ಮೆಣಸಿನಕಾಯಿ - ೨೯೫ ಹೆ., ಜಿಲ್ಲೆಯ ಹೆಚ್ಚಿನ ಭಾಗ ಮಳೆ ಆಧಾರದ ಪ್ರದೇಶವಾಗಿದ್ದು, ಘೋರ ಬರ ಪರಿಸ್ಥಿತಿ ಉಂಟಾಗುವ ಪ್ರದೇಶಗಳಾಗಿರುವ ಕಾರಣ, ತೋಟಗಾರಿಕೆ ಬೆಳೆಗಳು ಬೆಳೆಯುವ ವಿಸ್ತೀರ್ಣ ಕಡಿಮೆಯಾಗಿದೆ. ಆಹಾರ ಧಾನ್ಯಗಳನ್ನು ಬೆಳೆಸುವ ಬಗ್ಗೆ ನೀರಾವರಿಯ ಮೂಲಕ ಹೆಚ್ಚು ಒತ್ತು ಕೊಡುವ ಕಾರ್ಯಕ್ರಮಗಳ ಬಗ್ಗೆ ಚಟುವಟಿಕೆಗಳು ಹೆಚ್ಚಾಗಿದ್ದರೂ ಕೆಲವು ಆಯ್ದ ಪ್ರದೇಶಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದು ಕಂಡುಬಂದಿದೆ. ಸುಮಾರು ಮೂರು ಲಕ್ಷ ಕುಟುಂಬಗಳು ತೋಟಗಾರಿಕೆಗೆ ಅವಲಂಬಿತರಾಗಿದ್ದಾರೆ.

ನೀರಾವರಿಗಾಗಿ ತಗಲುವ ವೆಚ್ಚವು ಹೆಚ್ಚಾಗಿರುವುದರಿಂದಲೂ ತೋಟದ ಬೆಳೆಗಳ ಶೇಖರಣೆ ಮತ್ತು ವ್ಯಾಪಾರ ಸೌಲಭ್ಯದ ಕೊರತೆ ಇರುವುದರಿಂದಲೂ ತೋಟಗಾರಿಕೆಯ ಮಟ್ಟ ಜಿಲ್ಲೆಯಲ್ಲಿ ಇಳಿಮುಖವಾಗುತ್ತಿದೆ. ಗ್ರಾಮೀಣ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯಾಗದೆ ಇರುವುದರಿಂದ ತೋಟಗಾರಿಕೆಯು ಪ್ರಗತಿದಾಯಕವಾಗಿರುವುದಿಲ್ಲ. ಆದರೆ ಮುಂಬರುವ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹೆಚ್ಚಿನ ಬೆಳವಣಿಗೆಯನ್ನು ಊಹಿಸಲಾಗಿದೆ. ಈ ಕ್ಷೇತ್ರದ ಉತ್ಪಾದನಾ ಮೌಲ್ಯವನ್ನು ಪರಿಶೀಲಿಸಿದಾಗ ೧೯೯೩-೯೪ರಲ್ಲಿ ರೂ. ೩೪.೧೫ ಲಕ್ಷ ಇದ್ದು ಅದು ೧೯೯೪-೯೫ರಲ್ಲಿ ಶೇ. ೨೧ರಷ್ಟು ಹೆಚ್ಚಳ ಅಂದರೆ ರೂ. ೪೧.೨೪ ಲಕ್ಷಕ್ಕೆ ಹೆಚ್ಚಾಗಿದ್ದಿತು.

**ಕೋಷ್ಟಕ ೮.೨೩**

೧೯೮೨-೮೩ ರಿಂದ ೧೯೯೪-೯೫ ರವರೆಗೆ ಆಯಾ ವರ್ಷದ ಕೊನೆಯಲ್ಲಿ ಇದ್ದ ಅಭ್ಯರ್ಥಿಗಳ ದಾಖಲೆ ಈ ಕೆಳಗಿನಂತೆ ಇದೆ. (ಲೈವ ರಜಿಸ್ಟರ್‌ನಲ್ಲಿ ಇದ್ದಂತೆ)

| ವರ್ಷ | ಪುರುಷರು | | ಮಹಿಳೆಯರು | ಒಟ್ಟು | |
|---|---|---|---|---|---|
| | ನಿರುದ್ಯೋಗಸ್ಥರು | ಉದ್ಯೋಗಸ್ಥರು | ನಿರುದ್ಯೋಗಸ್ಥರು | ನಿರುದ್ಯೋಗಿಗಳು | ಉದ್ಯೋಗಿಗಳು |
| ೧೯೮೨-೮೩ | ೨೬,೯೧೭ | ೫೪ | ೩,೧೧೯ | ೩೦,೦೩೬ | ೫೪ |
| ೧೯೮೩-೮೪ | ೨೬,೮೬೭ | ೫೪ | ೩,೪೮೪ | ೩೦,೩೫೧ | ೫೪ |
| ೧೯೮೪-೮೫ | ೨೨,೩೩೫ | ೫೪ | ೩,೧೨೬ | ೨೫,೪೮೧ | ೫೪ |
| ೧೯೮೫-೮೬ | ೩೧,೫೮೨ | ೫೪ | ೪,೨೬೭ | ೩೫೮೪೯ | ೫೪ |
| ೧೯೮೬-೮೭ | ೩೦,೦೮೭ | ೫೪ | ೪,೧೧೮ | ೩೪,೨೦೫ | ೫೪ |
| ೧೯೮೭-೮೮ | ೩೦,೧೨೯ | ೫೪ | ೪,೦೬೭ | ೩೪,೧೯೬ | ೫೪ |
| ೧೯೮೮-೮೯ | ೩೮,೧೦೭ | ೫೪ | ೪,೧೧೫ | ೪೨,೨೨೨ | ೫೪ |
| ೧೯೮೯-೯೦ | ೩೨,೩೬೨ | ೫೪ | ೪,೬೧೨ | ೩೬,೯೭೪ | ೫೪ |
| ೧೯೯೦-೯೧ | ೩೪,೨೬೪ | ೪೯ | ೫,೪೬೨ | ೩೯,೭೨೬ | ೫೦ |
| ೧೯೯೧-೯೨ | ೪೩,೦೨೨ | ೪೯ | ೮,೫೫೦ | ೫೯,೪೭೪ | ೫೦ |
| ೧೯೯೨-೯೩ | ೫೦,೯೨೪ | ೪೯ | ೮,೫೫೦ | ೫೯,೪೭೪ | ೫೦ |
| ೧೯೯೩-೯೪ | ೫೪,೩೪೩ | ೪೯ | ೯,೧೬೩ | ೬೩,೬೦೬ | ೫೦ |
| ೧೯೯೪-೯೫ | ೫೮,೯೧೨ | ೪೯ | ೧೦,೩೩೫ | ೬೯,೨೪೭ | ೫೦ |

ನಬಾರ್ಡ್ (ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್)ನ ಒಂದು ವರದಿಯಂತೆ ಆಗಬಹುದಾದ ಬೆಳವಣಿಗೆ ಕಾರಣಗಳು ಹೀಗಿವೆ :

೧) ಮಾವು ಮತ್ತು ಬಾಳೆ ಬೆಳೆಗಳಿಗೆ ಬೇಕಾದ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವುದು ಮತ್ತು ಮಳೆ ಆಧಾರಿತ ಬೆಳವಣಿಗೆ ಬದಲಾಗಿ ಬೇರೆ ತೋಟಗಾರಿಕೆ ಚಟುವಟಿಕೆಯನ್ನು ಅಳವಡಿಸಿಕೊಳ್ಳುವುದು ಮತ್ತು ಬರದ ವಿರುದ್ಧ ವಿಮಾ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿರುವುದು.

೨) ಹನಿ ನೀರಾವರಿ ಸೌಕರ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಅಳವಡಿಸಿಕೊಂಡಿರುವುದು ಮತ್ತು ರೈತರು ಈ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿರುವುದು.

೩) ಸರ್ಕಾರೇತರ ಸಂಸ್ಥೆಗಳಾದ ಡಿಎಲ್ಐಬಿ., ಖುಷ್ಕಿ ಭೂಮಿ ಅಭಿವೃದ್ಧಿ ಮಂಡಳಿ ಹಾಗೂ ಖಾಸಗಿ ನರ್ಸರಿಗಳ ಮೂಲಕ ತೋಟಗಾರಿಕೆ ಕಾರ್ಯವು ಹೆಚ್ಚು ಚಟುವಟಿಕೆಯಲ್ಲಿರುವುದು.

೧೯೯೬-೯೭ರ ಅವಧಿಗೆ ನಬಾರ್ಡ್ ಸಂಸ್ಥೆಯು ಹಿಂದಿನ ವರ್ಷಗಳ ಕಾರ್ಯಕ್ರಮಗಳ ಆಧಾರದ ಮೇಲೆ ಬ್ಯಾಂಕುಗಳ ಮೂಲಕ ಈ ಘಟಕಕ್ಕಾಗಿ ಒದಗಿಸಿದ ಸಾಲದ ವಿವರಣೆ ಹೀಗಿದೆ.

| | | |
|---|---|---|
| **ಮಾವು-** | ಭೌತಿಕ ಕಾರ್ಯಕ್ರಮ | ೮೫ ಹೆಕ್ಟೇರ್ |
| | ಆರ್ಥಿಕ ಕಾರ್ಯಕ್ರಮ | ೧೮.೨೮ ಲಕ್ಷ ರೂ. |
| **ದ್ರಾಕ್ಷಿ-** | ಭೌತಿಕ ಕಾರ್ಯಕ್ರಮ | ೪೦ ಹೆಕ್ಟೇರ್ |
| | ಆರ್ಥಿಕ ಕಾರ್ಯಕ್ರಮ | ೭೧ ಲಕ್ಷ ರೂ. |
| **ಇತರೆ** | | |
| **ದಾಳಿಂಬೆ, ಸೀಬೆ** | ಭೌತಿಕ ಕಾರ್ಯಕ್ರಮ | ೧೩೦ ಹೆಕ್ಟೇರ್ |
| **ವೀಳ್ಯೆದೆಲೆ, ಗೋಡಂಬಿ** | ಆರ್ಥಿಕ ಕಾರ್ಯಕ್ರಮ | ೧೯.೫೦ ಲಕ್ಷ ರೂ. |
| **ಇತ್ಯಾದಿ** | | |
| **ಒಟ್ಟು** | ಭೌತಿಕ ಕಾರ್ಯಕ್ರಮ | ೨೫೫ ಹೆಕ್ಟೇರ್ |
| | ಆರ್ಥಿಕ ಕಾರ್ಯಕ್ರಮ | ೧೧೮ ಹೆಕ್ಟೇರ್ |

## ಹೈನು ಅಭಿವೃದ್ಧಿ

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಗುಲಬರ್ಗಾದ ಸರಕಾರಿ ಹಾಲು ಸರಬರಾಜು ಯೋಜನೆಗೆ ಮಂಜೂರಾತಿ ಸಿಕ್ಕಿತು. ಆಗ ಗುಲಬರ್ಗಾದ ಸುತ್ತಮುತ್ತಲಿನ ಪ್ರದೇಶದಲ್ಲಿ ಹಾಲು ಸಿಗುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ, ವಾರ್ಷಿಕ ೩೦,೦೦೦ ಲೀಟರ್ ಹಾಲು ಸಿಗಬಹುದೆಂದು ಅಂದಾಜು ಮಾಡಲಾಗಿತ್ತು. ನಂತರ ೧೯೬೬ರಲ್ಲಿ ಹಾಲು ಸರಬರಾಜು ಮಾಡುವ ಮಾರ್ಗದರ್ಶಕ ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು. ಇಲ್ಲಿನ ಹಾಲಿನ ಕೇಂದ್ರವು ದಿನಂಪ್ರತಿ ೧,೦೦೦ ಲೀಟರ್ ಹಾಲನ್ನು ಪೂರೈಸುವ ಸಾಮರ್ಥ್ಯವನ್ನು ಪಡೆಯಿತು. ಕ್ರಮೇಣ ಈ ಸಾಮರ್ಥ್ಯವು ಹೆಚ್ಚಿ ೧೯೯೦-೯೧ರಲ್ಲಿ ಪಾಶ್ಚರೀಕರಣದಿಂದ ಪ್ರತಿದಿನ ೪೦,೦೦೦ ಲೀಟರ್ ಸಾಮರ್ಥ್ಯಕ್ಕೆ ಹೆಚ್ಚಳಗೊಂಡಿತು. ೧೯೯೫-೯೬ರ ವೇಳೆಗೆ ಇದು ೬೦,೦೦೦ ಲೀಟರ್ ಸಾಮರ್ಥ್ಯಕ್ಕೆ ಹೆಚ್ಚಳಗೊಂಡಿರುವುದು. ಗುಲಬರ್ಗಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಬೀದರ್ ಹಾಲಿನ ಶೀಥಲೀಕರಣ ಕೇಂದ್ರವನ್ನು ಮಿನಿ ಡೈರಿಯನ್ನಾಗಿ ಪರಿವರ್ತಿಸಲು ವ್ಯವಸ್ಥೆ ಮಾಡಲಾಗಿದೆ. ಇದು ದಿನಂಪ್ರತಿ ೩೦೦೦೦ ಲೀಟರ್ ಸಾಮರ್ಥ್ಯವನ್ನು ಹೊಂದಿರುತ್ತದೆ. ಶಹಾಪುರ ಹಾಲಿನ ಶೀಥಲೀಕರಣ ಕೇಂದ್ರವನ್ನು ಕಟ್ಟಲ್ಪಟ್ಟು ಇದರ ಸಾಮರ್ಥ್ಯವನ್ನು ಪ್ರತಿದಿನಕ್ಕೆ ೧೦೦೦೦ ಲೀಟರ್‌ಗೆ ಹೆಚ್ಚಿಸಲಾಗಿದೆ.

ಶಹಾಪುರ, ಸುರಪುರ, ಯಾದಗಿರ, ಜೇವರ್ಗಿ ತಾಲೂಕುಗಳಲ್ಲಿ ನೀರಾವರಿ ಪದ್ಧತಿಯು ಜಾರಿಗೆ ಬರುತ್ತಿದ್ದು, ಅಲ್ಲಿನ ರೈತರುಗಳಿಗೆ ಹೈನುಗಾರಿಕೆಯ ಬಗ್ಗೆ ಮಾಹಿತಿಗಳನ್ನು ಒಕ್ಕೂಟದ ಮೂಲಕ ನೀಡಲಾಗುತ್ತಿದೆ.

೧೯೮೮ ರಿಂದ ೧೯೯೪ ಮಾರ್ಚವರೆಗೆ ಗುಲಬರ್ಗಾ ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಮತ್ತು ಮಾರಾಟದ ವಿವರ

**ಕೋಷ್ಟಕ ೮.೨೪**

| ಕ್ರಮ ಸಂಖ್ಯೆ | ವರ್ಷ | ಹಾಲು ಉತ್ಪಾದನೆ | ಹಾಲು ಮಾರಾಟ ಲಕ್ಷ ರೂ.ಗಳಲ್ಲಿ |
|---|---|---|---|
| ೧. | ೧೯೮೭-೮೮ | ೧೦,೧೨,೬೮೯ | ೧,೦೬.೨೦ |
| ೨. | ೧೯೮೮-೮೯ | ೧೨,೪೫,೦೫೭ | ೧,೧೨.೪೫ |
| ೩. | ೧೯೮೯-೯೦ | ೧೨,೮೦,೫೬೦ | ೧,೨೬.೩೭ |
| ೪. | ೧೯೯೦-೯೧ | ೧೯,೦೩,೨೧೯ | ೧,೦೯.೨೨ |
| ೫. | ೧೯೯೧-೯೨ | ೨೦,೩೦,೫೬೨ | ೧,೦೩.೫೧ |
| ೬. | ೧೯೯೨-೯೩ | ೨೦,೦೪,೫೯೦ | ೧,೦೨.೬೩ |
| ೭. | ೧೯೯೩-೯೪ | ೨೯,೧೪,೧೨೫ | ೧,೧೩.೦೨ |

ಆಧಾರ : ಜಿಲ್ಲಾ ಪಂಚಾಯತ್, ಗುಲಬರ್ಗಾ

## ಮೀನುಗಾರಿಕೆ

ಗುಲಬರ್ಗಾ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯು ೧೯೫೮ರಲ್ಲಿ ಪ್ರಾರಂಭವಾಯಿತು. ಈ ಜಿಲ್ಲೆಯಲ್ಲಿನ ಭೀಮಾ, ಕೃಷ್ಣಾ, ಅಮರಜಾ ಮತ್ತು ಕಾಗಿನಾ ನದಿಗಳು ೪೧೪ ಕೆರೆಗಳು ಮೀನಿನ ಬೇಸಾಯಕ್ಕೆ ಅನುಕೂಲವಾಗಿದೆ. ೧೯೬೬ರ ಹೊತ್ತಿಗೆ ಪ್ರತಿವರ್ಷ ಕಲ್ಕತ್ತಾ ಮತ್ತು ತುಂಗಭದ್ರಾ ಜಲಾಶಯದಿಂದಲೂ ಮೀನಿನ ಮರಿಗಳನ್ನು ತರಿಸಿ ಗುಲಬರ್ಗಾ ನಗರಕ್ಕೆ ನೀರು ಪೂರೈಸುವ ಭೂಸಗಾ ಜಲಾಶಯದಲ್ಲಿರುವ ಮೀನಿನ ಕ್ಷೇತ್ರದ ಆರು ನರ್ಸರಿಗಳಲ್ಲಿ ಮತ್ತು ಲಾಂಡಗಾ ಮಾರುಕಟ್ಟೆ ಆಗ ಇರಲಿಲ್ಲವಾದರೂ ಇತರೆ ಮಾರುಕಟ್ಟೆಗಳಲ್ಲಿ ಮೀನುಗಳನ್ನು ಮಾರುವ ವ್ಯವಸ್ಥೆ ಮಾಡಲಾಗುತ್ತಿತ್ತು. ೧೯೫೯-೬೦ ರಿಂದ ೧೯೬೬-೬೭ರವರೆಗೆ ಮೀನಿನ ಕೃಷಿಯ ವಿವರಣೆಯನ್ನು ತೋರಿಸುವ ಕೋಷ್ಟಕವನ್ನು ಇಲ್ಲಿ ಕೊಡಲಾಗಿದೆ.

**ಕೋಷ್ಟಕ ೮.೨೫**

| ವರ್ಷ | ನರ್ಸರಿಯಲ್ಲಿ ಸಾಕಿದ ಮೀನಿನ ಸಂಖ್ಯೆ | ಕೆರೆಗಳಲ್ಲಿ ಬೆಳೆಸಿದ ಮೀನಿನ ಸಂಖ್ಯೆ | ಮೀನಿನ ಮಾರಾಟದಿಂದ ಆದಾಯ ರೂ. (ಸಾವಿರ) |
|---|---|---|---|
| ೧೯೫೯-೬೦ | ೭೪,೨೫೦ | ೧೩,೧೦೦ | ೮೧ |
| ೧೯೬೦-೬೧ | ೫೦,೦೦೦ | ೧೯,೬೦೦ | ೬೬೯ |
| ೧೯೬೧-೬೨ | ೫೦,೦೦೦ | ೯,೬೦೦ | ೬೭೧ |
| ೧೯೬೨-೬೩ | ೪೦,೦೦೦ | ೮,೭೭೧ | ೧೦೩೦ |
| ೧೯೬೩-೬೪ | ೩೦.೦೦೦ | ೩೯.೧೪೬ | ೨೯೪೬ |

| | | | |
|---|---|---|---|
| ೧೯೬೪-೬೫ | ೩೦.೦೦೦ | ೧೦.೦೦೦ | ೧೯೩೭ |
| ೧೯೬೫-೬೬ | ೧.೦೦.೦೦೦ | ೧೬.೦೦೦ | ೭೧೫೪ |
| ೧೯೬೬-೬೭ | ೭೫.೦೦೦ | -- | ಲಭ್ಯವಿಲ್ಲಾ |

(ಆಧಾರ : ಗುಲಬರ್ಗಾ ಜಿಲ್ಲಾ ವಾರ್ತಾ ಇಲಾಖೆ ೧೯೬೬)

ಗುಲಬರ್ಗಾ ಜಿಲ್ಲೆಯು ಬರಪೀಡಿತ ಪ್ರದೇಶವಾಗಿದೆ. ಜಿಲ್ಲೆಯಲ್ಲಿ ೭೧೯ ಹೆಕ್ಟೇರು ನೀರಿನ ಪ್ರದೇಶವಿದ್ದು ಇದರಲ್ಲಿ ೧೨೦೦ ಹೆಕ್ಟೇರು ನೀರಾವರಿ ಪ್ರದೇಶವು ಮೀನುಗಾರಿಕೆ ಅಭಿವೃದ್ಧಿಗೆ ಯೋಗ್ಯವಾಗಿದೆ. ಒಟ್ಟು ೨೫೦ ಕೆರೆಗಳಿದ್ದು, ಅವುಗಳಲ್ಲಿ ೬೦ ಕೆರೆಗಳಲ್ಲಿ ವರ್ಷದ ಎಲ್ಲಾ ಕಾಲದಲ್ಲೂ ನೀರು ಇರುತ್ತದೆ. ಇದಲ್ಲದೆ ಮೀನು ಅಭಿವೃದ್ಧಿಗೆ ಕೃಷ್ಣಾ, ಭೀಮಾ, ಬೆಣೆತೂರಾ, ಕಾಗಿನಾ ಮತ್ತು ಅಮರ್ಜಾ ನದಿಗಳು ಸಹಾಯಕವಾಗಿವೆ. ಜಿಲ್ಲೆಯಲ್ಲಿ ೨೧ ಮೀನುಗಾರಿಕೆ ಸಹಕಾರ ಸಂಘಗಳು ಕಾರ್ಯನಿರತವಾಗಿವೆ. ಈ ಸಂಘಗಳು ಕೆರೆ, ನದಿ ಹಾಗೂ ಜಲಾಶಯಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುತ್ತಿವೆ. ಜಿಲ್ಲೆಯಲ್ಲಿನ ೧೦ ತಾಲೂಕುಗಳಲ್ಲಿ ಆರು ತಾಲೂಕುಮಟ್ಟದ ಅಧಿಕಾರಿಗಳು ಮೀನುಗಾರಿಕೆ ಚಟುವಟಿಕೆಗಳ ಬಗ್ಗೆ ಸರಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯವನ್ನು ಮಾಡುತ್ತಿದ್ದಾರೆ. ಇವುಗಳ ಉಸ್ತುವಾರಿಯನ್ನು ಇಲಾಖೆಯ ಜಿಲ್ಲಾ ಕಛೇರಿಯು ಹೊಂದಿದೆ.

೧೯೯೪-೯೫ರಲ್ಲಿ ಜಿಲ್ಲೆಯಲ್ಲಿ ತಾಲೂಕುವಾರು ಮೀನು ಹಿಡಿದಿರುವ ವಿವರವನ್ನು ಈ ಮುಂದೆ ಕೊಡಲಾಗಿದೆ. (ಟನ್‌ಗಳಲ್ಲಿ)

ಅಫಜಲ್ಪುರ-೧೩೦, ಆಳಂದ-೩೨, ಚಿಂಚೋಳಿ-೧೫೦, ಚಿತ್ತಾಪುರ-೬೦, ಗುಲಬರ್ಗಾ-೧೬೦, ಜೇವರ್ಗಿ-೩೦, ಸೇಡಂ-೭೦, ಶಹಾಪುರ-೧೫೦, ಸುರಪುರ-೯೦ ಮತ್ತು ಯಾದಗಿರ-೯೦. ಒಟ್ಟು ೯೬೨ ಟನ್.

### ರೇಷ್ಮೆ ಕೃಷಿ

ಇತ್ತೀಚಿನ ವರ್ಷಗಳವರೆಗೂ ಈ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ರೂಢಿಯಲ್ಲಿರಲಿಲ್ಲ. ಮಳೆ ಪ್ರದೇಶದಲ್ಲಿ ಕೃಷಿಯಿಂದ ವರಮಾನವನ್ನು ಹೆಚ್ಚಿಸುವ ಕಾರ್ಯಕ್ರಮದ ಅಡಿಯಲ್ಲಿ ರೇಷ್ಮೆ ಕೃಷಿಯನ್ನು ಹಮ್ಮಿಕ್ಕೊಳ್ಳಲಾಗಿದೆ. ಹಾಗೆಯೇ ಕುಟುಂಬದಲ್ಲಿನ ಸದಸ್ಯರನ್ನು ಗಳಿಸುವ ಉದ್ಯಮದಲ್ಲಿ ತೊಡಗಿಸುವ ಉದ್ದೇಶವೂ ಸಹ ಇದಕ್ಕೆ ಪೂರಕವಾಗಿದೆ. ಕೆಲವು ತಾಲೂಕುಗಳಲ್ಲಿ ಈ ಕೃಷಿಯು ಅಭಿವೃದ್ಧಿಯಾಗುತ್ತಿದೆ. ೧೯೯೦ರ ಹೊತ್ತಿಗೆ ಸುಮಾರು ೧೫೦೪ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯುತ್ತಿದ್ದು, ಅವುಗಳಲ್ಲಿ ೧೨೬೬ ಹೆಕ್ಟೇರ್‌ಗಳಷ್ಟು ನೀರಾವರಿ ಪ್ರದೇಶವಾಗಿದೆ. ಜಿಲ್ಲೆಯಲ್ಲಿ ಸುಮಾರು ೨,೯೫೦ ರೇಷ್ಮೆ ಕೃಷಿಕರಿದ್ದು, ೧೫೦೦ ಜನರಿಗೆ ಉದ್ಯೋಗ ಲಭಿಸಿದೆ. ಇವರಲ್ಲಿ ಶೇ. ೬೦ ಭಾಗ ಮಹಿಳೆಯರು. ೧೯೯೪-೯೫ರಲ್ಲಿ ನೀರಾವರಿ ಪ್ರದೇಶದಲ್ಲಿ ಹಿಪ್ಪುನೇರಳೆಯ ಬೆಳೆ ಸುಮಾರು ೨೬೫ ಮೆಟ್ರಿಕ್ ಟನ್‌ಗಳಷ್ಟಿತ್ತು. ಗ್ರಾಮೀಣ ಮಹಿಳೆಯರಿಗೆ ಈ ಉದ್ಯಮವು ಹೆಚ್ಚುವರಿ ಆದಾಯ ತರುವ ಉದ್ಯಮವಾಗಿ ಬೆಳೆಯುತ್ತಿದೆ. ೧೯೯೨-೯೩ರಲ್ಲಿ ಈ ಕ್ಷೇತ್ರದಲ್ಲಿನ ಉತ್ಪಾದನೆ ರೂ. ೨೨.೪೭ ಲಕ್ಷ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ ತಯಾರಿಸಿರುವ ಒಂದು ವರದಿಯಂತೆ (ಪಿ.ಎಲ್.ಸಿ.ಪಿ.) - ಪೊಟೆನ್ಷಿಯಲ್ ಲಿಂಕ್ಡ್ ಕ್ರೆಡಿಟ್ ಪ್ಲಾನ್) ಸಾಧ್ಯತೆಗಳಿಗೆ ಅನುಸಾರವಾಗಿ ತಯಾರಿಸಿದ ಸಾಲದ ಯೋಜನೆಯ ಗುರಿಯನ್ನು ಹೋಲಿಸಿದಾಗ ಈ ದಿಸೆಯಲ್ಲಿ ಆಗಿರುವ ಅಭಿವೃದ್ಧಿಯು ಶೇ. ೫೪.೫೧ ಇರುವುದು. ಬರಗಾಲ ಪೀಡಿತವಾದ ಜಿಲ್ಲೆಯು ರೇಷ್ಮೆಗೂಡುಗಳಿಗೆ ಆಕರ್ಷಕವಾಗಿಲ್ಲ. ಮಾರುಕಟ್ಟೆಯ ಬೆಲೆಯು ಕೆ.ಜಿ.ಗೆ ರೂ. ೧೬೦ ಇದ್ದು, ೬೦ ರೂ.ಗೆ ಇಳಿದಿದ್ದಿತು. ಈ ಜಿಲ್ಲೆಯ ಪ್ರಗತಿಯ ಕುಂಠಿತಕ್ಕೆ ಈ ಬೆಲೆ ಇಳಿಯುವಿಕೆ ಕಾರಣವೆಂದು ತಿಳಿಯಬಹುದು. ೧೯೯೪-೯೫ರ ಕೃಷಿ ಮತ್ತು ಜವಳಿ ಮಂತ್ರಾಲಯಗಳ ಬದಲಾದ ನೀತಿಯಿಂದ ರೇಷ್ಮೆ ಕೃಷಿಗೆ ಉತ್ತಮ ಭವಿಷ್ಯ ದೊರಕಿದಂತಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ತಾಂತ್ರಿಕ ಸಿಬ್ಬಂದಿಯವರಿಂದ ತರಬೇತಿ, ಕಾರ್ಯಾಗಾರ ಮೊದಲಾದವುಗಳಿಂದ ಈ ಕೃಷಿಗೆ ಒತ್ತು ಕೊಟ್ಟಂತಾಗಿದೆ. ೧೯೯೪-೯೫ರಲ್ಲಿ ಈ ಕ್ಷೇತ್ರದ ಆರ್ಥಿಕ ಉತ್ಪಾದನೆ ರೂ. ೩೮.೮೩ ಲಕ್ಷಗಳಿದ್ದು, ಗುರಿಯು ೧೨೮.೫೦ ಲಕ್ಷ ರೂ.ಗಿಂತ ಕಡಿಮೆ ಇದ್ದಿತು. ರೇಷ್ಮೆ ಕೃಷಿಕರು ಜಿಲ್ಲೆಯ ಜೇವರ್ಗಿಯಲ್ಲಿ, ರೇಷ್ಮೆಗೂಡಿನ ಮಾರುಕಟ್ಟೆ ಇದ್ದರೂ ಸಹ ಉತ್ತಮ ಬೆಲೆಯನ್ನು ಪಡೆಯುವ ಸಲುವಾಗಿ ರಾಮನಗರ, ಚನ್ನಪಟ್ಟಣಗಳಲ್ಲಿರುವ ಮಾರುಕಟ್ಟೆಗಳಲ್ಲಿ ತಮ್ಮ ರೇಷ್ಮೆ

ಗೂಡುಗಳನ್ನು ಮಾರಾಟ ಮಾಡಿರುವುದು ಕಂಡುಬರುತ್ತದೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕಿನ ಸಮೀಕ್ಷೆಯಂತೆ ರೇಷ್ಮೆ ಕೃಷಿಯಲ್ಲಿ ಆಸಕ್ತಿ ಕಡಿಮೆಯಾಗಲು ಈ ಕೆಳಕಂಡ ಕಾರಣಗಳನ್ನು ಕೊಡಲಾಗಿದೆ.

೧) ಮಾರುಕಟ್ಟೆ ಬೆಲೆಗಳಲ್ಲಿ ಉತ್ತಮ ಬದಲಾವಣೆ ಇಲ್ಲದಿರುವುದು.

೨) ರೇಷ್ಮೆಗೂಡಿನ ಬೆಲೆ ಶೇ. ೨೦ ರಷ್ಟು ಇಳಿದಿದ್ದು ಕೃಷಿಕರಲ್ಲಿ ಭಯದ ವಾತಾವರಣ ಉಂಟಾಗಿರುವುದು ಹಾಗೂ ಹಿಪ್ಪುನೇರಳೆ ಬದಲಿಗೆ ಎಣ್ಣೆಕಾಳುಗಳನ್ನು ಬೆಳೆಯಲು ಪ್ರಾರಂಭ ಮಾಡಿರುವುದು.

೩) ರೇಷ್ಮೆ ವಿಸ್ತರಣಾ ಇಲಾಖೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡದಿರುವುದು.

೪) ಬ್ಯಾಂಕಿನಿಂದ ದೊರೆತ ಸಾಲದ ಹಣವನ್ನು ಇತರೆ ಉದ್ದೇಶಗಳಿಗಾಗಿ ಬಳಸಿರುವುದು.

ಈ ಮೇಲ್ಕಂಡ ವಿಷಯಗಳು ಹಾಗೂ ೧೯೯೪-೯೫ರಲ್ಲಾದ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ೧೯೯೬-೯೭ರ ಸಾಲಿಗೆ ಈ ಕೆಳಕಂಡ ಯೋಜನೆಯ ಗುರಿಯನ್ನು ಹಮ್ಮಿಕೊಳ್ಳಲಾಗಿತ್ತು.

ಬೆಳೆ-೧೫೦ ಎಕರೆ, ೧೫೦ ಲಕ್ಷ ರೂ.ಗಳಷ್ಟು ಸಾಧನಗಳು ಮತ್ತು ೮೦ ಚೌಕಿಗಳು ಇವುಗಳಿಗೆ ತಗಲುವ ಒಟ್ಟು ವೆಚ್ಚ ರೂ. ೪೪.೧೧ ಲಕ್ಷ ರೂ. ಜಿಲ್ಲೆಯಲ್ಲಿ ೪೧೪ ಕೃಷಿ ಗ್ರಾಮಗಳಿದ್ದು ಸಣ್ಣ ಮತ್ತು ಅತಿ ಸಣ್ಣ ಕೃಷಿಕರು ರೇಷ್ಮೆ ಕೃಷಿಯನ್ನು ಅನುಸರಿಸುತ್ತಿದ್ದಾರೆ.

ಜಿಲ್ಲೆಯಲ್ಲಿ ೧೯೯೪-೯೫ನೇ ಸಾಲಿನಲ್ಲಿ ೩೧೭೫ ಎಕರೆ ಭೂಮಿಯನ್ನು ಹಿಪ್ಪುನೇರಳೆ ಕೃಷಿಗೆ ಒಳಪಡಿಸಲಾಗಿದೆ ಮತ್ತು ೨೯೫೦ ರೇಷ್ಮೆ ಕೃಷಿಕರಿಗೆ ಉದ್ಯೋಗವನ್ನು ಒದಗಿಸಲಾಗಿದೆ. ಇದರಿಂದ ಸುಮಾರು ೧೫೦೦೦ ಜನರಿಗೆ (ಶೇ. ೬೦ ಮಹಿಳೆಯರು) ಪರೋಕ್ಷವಾಗಿ ಉದ್ಯೋಗ ದೊರಕಿದೆ.

ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕ್ (ನಬಾರ್ಡ್)ನ ವರದಿಯ ಪ್ರಕಾರ ೧೯೯೬-೯೭ರ ಸಾಲಿಗೆ ರೇಷ್ಮೆ ಕೃಷಿಗಾಗಿ ಸಾಲವನ್ನು ಒದಗಿಸಿದ ಕಾರ್ಯಕ್ರಮ ಈ ರೀತಿ ಇದೆ. ವಾಣಿಜ್ಯ ಬ್ಯಾಂಕುಗಳು ರೂ. ೧೭.೬೪ ಲಕ್ಷ, ಗ್ರಾಮೀಣ ಬ್ಯಾಂಕು ೮.೮೦ ಲಕ್ಷ ರೂ., ಎಸ್.ಎಲ್.ಡಿ.ಬಿ. ೧೭.೬೭ ಲಕ್ಷ ರೂ. ಮೊತ್ತ ೪೪.೧೧ ಲಕ್ಷ ರೂ.

**ನಗರ ಯೋಜನೆ**

ಈ ಜಿಲ್ಲೆಯಲ್ಲಿ ನಗರ ಯೋಜನೆಯ ದಿಸೆಯಲ್ಲಿ ೧೯೬೨ಕ್ಕೆ ಮೊದಲು ಹೇಳಿಕೊಳ್ಳುವಂತಹ ಯಾವ ಕೆಲಸವೂ ನಡೆದಿರಲಿಲ್ಲ. ೧೯೫೬ರ ಮೊದಲಿಗೆ ಪೂರ್ವದಲ್ಲಿ ಹೈದರಾಬಾದ್ ಚೀಫ್ ಟೌನ್ ಪ್ಲಾನರ್ ಈ ಜಿಲ್ಲೆಯ ಪಟ್ಟಣ/ನಗರಗಳ ಅಭಿವೃದ್ಧಿ ಯೋಜನೆ ತಯಾರಿಸುವ ಕೆಲಸ ಮಾಡುತ್ತಿದ್ದವಾದರೂ, ಹಾಗೆ ಮಾಡಿದ ಸರ್ವೇ ಯೋಜನೆಗಳು ಕಾರ್ಯರೂಪಕ್ಕೆ ಬರಲಿಲ್ಲ. ರಾಜ್ಯ ಸರ್ಕಾರವು ೧೯೬೨ರಲ್ಲಿ ಗುಲಬರ್ಗಾದಲ್ಲಿ ಟಾನ್ ಪ್ಲಾನಿಂಗ್ ಇಲಾಖೆಯ ಕಛೇರಿಯನ್ನು ಪ್ರಾರಂಭಿಸಿತು. ಈ ಇಲಾಖೆಯಿಂದ ಕೆಲವು ನಗರ, ಪಟ್ಟಣಗಳ ಸರ್ವೆ ನಡೆಸಿ ಕೆಲವು ಮಾಸ್ಟರ್ ಪ್ಲಾನ್‌ಗಳನ್ನು ಸಿದ್ಧಗೊಳಿಸಲಾಗಿತ್ತು. ಇದರಂತೆ ಗುಲಬರ್ಗಾ, ದೇವಲ ಗಾಣಗಾಪುರ, ಚಿಂಚೋಳಿಗಳಿಗೂ ಯೋಜನೆಗಳನ್ನು ಸಿದ್ಧಗೊಳಿಸಲಾಗಿತ್ತು. ಗುಲಬರ್ಗಾ ನಗರ ಯೋಜನೆಯ ಕೆಲವು ಮುಖ್ಯಾಂಶಗಳು ಹೀಗಿದ್ದವು. ನಗರವು ೬೫೦೦ ಎಕರೆ ಭೂಮಿಯ ಮೇಲೆ ವ್ಯಾಪಿಸಿದ್ದು, ಶೇ. ೩೨ ಭಾಗ ವಸತಿ ಸೌಕರ್ಯಕ್ಕೆ ಉಪಯೋಗಿಸಲಾಗಿದೆ. ಆಗಿನ ಜನಸಂಖ್ಯೆಗೆ ಅನುಗುಣವಾಗಿ (ಸುಮಾರು ೧ ಲಕ್ಷ) ವಸತಿ ಸೌಕರ್ಯಕ್ಕೆ ೨೦೦೦ ಎಕರೆ ವಿನಿಯೋಗವಾಗಿದ್ದಿತು. ಅಂದರೆ ಪ್ರತಿ ಎಕರೆಗೆ ಸರಾಸರಿ ೫೦ ಜನರು ವಾಸಿಸುತ್ತಿದ್ದರು. ೧೯೮೮ರಲ್ಲಿ ಜನಸಂಖ್ಯೆ ಸುಮಾರು ೧.೭೫ ಲಕ್ಷ ಆಗಬಹುದೆಂದು ಆಗ ಅಂದಾಜು ಮಾಡಿ ೫,೪೨೭ ಎಕರೆ ಜಮೀನನ್ನು ವಸತಿಗೆ ಅಳವಡಿಸಬೇಕೆಂದು ಯೋಜಿಸಲಾಗಿತ್ತು. ೧೯೬೬ರಲ್ಲಿ ೮೫೩ ಎಕರೆಗಳಲ್ಲಿ ಜನರು ವಾಸಿಸುವ ಮನೆಗಳಿದ್ದು, ಒಂದು ಎಕರೆಗೆ ೧೧೮ ಜನರು ಮನೆಗಳಲ್ಲಿ ವಾಸಿಸುತ್ತಿದ್ದರು. ಗುಲಬರ್ಗಾದ ಮೋಮಿನುಪುರ, ಗಾಜಿಪುರ, ಬ್ರಹ್ಮಪುರ, ರೋಜಾಗಳಲ್ಲಿ ಈ ಪ್ರಮಾಣ ೨೦೦ಕ್ಕೂ ಹೆಚ್ಚಿತ್ತು. ಹೊಸ ಯೋಜನೆಯ ಪ್ರಕಾರ ವಾಸಿಸುವ ಮನೆಗಳಿಗಾಗಿ ೨೫೦೫ ಎಕರೆಯನ್ನು ವಿನಿಯೋಗಿಸಲು ಅಂದಾಜು ಮಾಡಲಾಗಿತ್ತು. ಇದಕ್ಕಾಗಿ ಸೇಡಂ ರಸ್ತೆಯ ಮೇಲಿನ ೩೦೦ ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿತ್ತು.

ವ್ಯಾಪಾರ ವ್ಯವಹಾರದ ಕಟ್ಟಡಗಳಿಗಾಗಿ ೭೮ ಎಕರೆ ಜಮೀನು ಬಳಸಲಾಗಿತ್ತು. ಹೊಸ ಯೋಜನೆಯಂತೆ, ೨೪೫ ಎಕರೆಗೆ ಇದನ್ನು ವಿಸ್ತರಿಸಲು ಅಂದಾಜು ಮಾಡಲಾಗಿತ್ತು. ಇದರಲ್ಲಿ ೭೫ ಎಕರೆ ಸಗಟು ವ್ಯಾಪಾರದ ಮಾರುಕಟ್ಟೆಯ ವಿಸ್ತರಣೆಗಾಗಿ ಕಾದಿಡಲು ಯೋಜಿಸಲಾಗಿತ್ತು. ಆಗಿನ ಕೇಂದ್ರ ಕಾರಾಗೃಹವು ನಗರದ ಮಧ್ಯದಲ್ಲಿದ್ದು ಅದನ್ನು ನಗರದ ಹೊರವಲಯದಲ್ಲಿ (ಜೇವರ್ಗಿ ರಸ್ತೆ) ನೂತನ ಕಟ್ಟಡಕ್ಕೆ ಸ್ಥಳಾಂತರಿಸಿ, ಆ ಪ್ರದೇಶದಲ್ಲಿ ನಗರದ ಸೂಪರ್ ಮಾರ್ಕೆಟ್ ಅಭಿವೃದ್ಧಿಗೊಳಿಸಲು ಯೋಜಿಸಲಾಯಿತು. ೧೯೭೬ರಲ್ಲಿ ಅಂದಾಜು ಮಾಡಿದಂತೆ, ೧೯೮೧ರಲ್ಲಿ ಕೈಗಾರಿಕಾ ಕ್ಷೇತ್ರಗಳಲ್ಲಿ ದುಡಿಯುವವರ ಸಂಖ್ಯೆ ೧೫,೦೦೦ ಇರಬಹುದೆಂದೂ, ಇವರಿಗಾಗಿ ಒಟ್ಟು ೫೬೨ ಎಕರೆ ಜಮೀನನ್ನು ಹೊಸ ಯೋಜನೆಯಲ್ಲಿ ಕಾದಿರಿಸಲಾಗಿತ್ತು. ಸರಕಾರಿ ಮತ್ತು ಸರಕಾರೇತರ ಕಛೇರಿ ಮತ್ತು ಶೈಕ್ಷಣಿಕ ಸಂಸ್ಥೆಗಳಿಗಾಗಿ ೩೪೧ ಎಕರೆ ಜಮೀನನ್ನು ಬಳಸಲು ಯೋಜಿಸಲಾಗಿದ್ದಿತು. ನಗರದ ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗಿಬರುವ ಅನುಕೂಲತೆಗಾಗಿ ಸುತ್ತು ರಸ್ತೆ (ರಿಂಗ್ ರೋಡ್) ಒಂದನ್ನು ರಚಿಸಲು ಯೋಜಿಸಲಾಗಿದ್ದಿತು.

ಇತ್ತೀಚಿನ ಎರಡು ಮೂರು ದಶಕಗಳ ಜನಗಣತಿಯಂತೆ, ೧೯೮೧ ರಿಂದ ೧೯೯೧ರ ದಶಕದಲ್ಲಿ ಜನಸಂಖ್ಯೆ ಹಿಂದಿನ ದಶಕಕ್ಕಿಂತ ಶೇ ೫೦ ರಷ್ಟು ಹೆಚ್ಚಿದೆ. ಇದರಿಂದ ಹೆಚ್ಚು ವಿಸ್ತಾರವಾಗುತ್ತಿರುವ ಗುಲಬರ್ಗಾ ಪಟ್ಟಣವನ್ನು ಮಾದರಿಯಾಗಿ ಬೆಳೆಯುವಂತೆ ಮಾಡುವ ಪ್ರಯತ್ನದಲ್ಲಿ ಸರ್ಕಾರವು ಗುಲಬರ್ಗಾ ನಗರ ಯೋಜನಾ ಪ್ರಾಧಿಕಾರವನ್ನು ರಚಿಸಿತು. ನಂತರ ಈ ಯೋಜನಾ ಪ್ರಾಧಿಕಾರದಿಂದ ತಯಾರಿಸುವ ಯೋಜನಾ ನಕ್ಷೆಯನ್ನು ಅಳವಡಿಸಲು ಕರ್ನಾಟಕ ನಗರಾಭಿವೃದ್ಧಿ ಮಂಡಳಿಗಳ ಕಾಯ್ದೆ ೧೯೭೬ರಂತೆ "ಗುಲಬರ್ಗಾ ನಗರಾಭಿವೃದ್ಧಿ ಮಂಡಳಿ"ಯನ್ನು ರಚಿಸಲಾಯಿತು.

ಈ ಯೋಜನಾ ಪ್ರಾಧಿಕಾರವು ೧೯೯೬ರ ಅಂತ್ಯದಲ್ಲಿ ೭೭೧ ಎಕರೆ ಪ್ರದೇಶವನ್ನು ನಗರದ ವಿವಿಧ ಸ್ಥಳಗಳಲ್ಲಿ ಸ್ವಾಧೀನ ಪಡಸಿಕೊಂಡಿದೆ. ೬೬೦ ಎಕರೆ ಪ್ರದೇಶದಲ್ಲಿ ವಸತಿ ಯೋಜನೆಗಳನ್ನು ಕೈಗೆತ್ತಿಕೊಂಡು ಒಟ್ಟು ೮,೮೪೮ ನಿವೇಶನಗಳನ್ನು ರಚಿಸಿ ೭,೧೫೨ ನಿವೇಶನಗಳನ್ನು ಸಾರ್ವಜನಿಕರಿಗೆ ವಿತರಿಸಲಾಗಿದೆ.

ಈ ಪ್ರಾಧಿಕಾರವು ೧೩ ವಸತಿ ಅಭಿವೃದ್ಧಿ ಯೋಜನೆಗಳಾದ, ರಸ್ತೆ ನಿರ್ಮಾಣ, ಅಡಿಗಾಲುವೆ ನಿರ್ಮಾಣ, ಭಾಗಶಃ ಚರಂಡಿ ನಿರ್ಮಾಣ, ಭಾಗಶಃ ಯೋಜನೆಗಳಿಗೆ ವಿದ್ಯುತ್ ಹಾಗೂ ಬೀದಿ ದೀಪಗಳು ಅಳವಡಣೆ, ನೀರು ಸರಬರಾಜು ವ್ಯವಸ್ಥೆ ಮತ್ತು ಭೂ ಪರಿಹಾರ ಧನ ಮೊದಲಾದುವು ಇವುಗಳಿಗಾಗಿ ರೂ. ೮.೨೯ ಕೋಟಿ ಖರ್ಚು ಮಾಡಿದೆ.

ಗುಲಬರ್ಗಾ ಯೋಜನಾ ಕ್ಷೇತ್ರಕ್ಕೆ ವ್ಯಾಪಕ ಅಭಿವೃದ್ಧಿ ಯೋಜನೆಯನ್ನು ೨೦೦೧ನೇ ಸಾಲಿಗೆ ಆಗಬಹುದಾದ ೪.೫ ಲಕ್ಷ ಜನಸಂಖ್ಯೆ ಅಂದಾಜಿಗೆ ತಯಾರಿಸಿದ್ದು, ಇದಕ್ಕೆ ಸರ್ಕಾರದ ಒಪ್ಪಿಗೆ ಪಡೆಯಲಾಗಿದೆ. ಈ ಯೋಜನೆಯಂತೆ ಈ ಕೆಳಕಂಡ ಹಳ್ಳಿಗಳು ನಗರ ಯೋಜನಾ ಕ್ಷೇತ್ರದಲ್ಲಿ ಬರುವವು.

೧. ಬ್ರಹ್ಮಪುರ ೨. ಕಷನೂರು ೩. ನಿಜಾಮಪೂರ ೪. ರಾಜಾಪುರ ೫. ದದ್ದಾಪುರ ೬. ಧರಿಯಾಪೂರ ೭. ವಕ್ಕಲಗೇರಾ ೮. ನಾಗನಹಳ್ಳಿ ೯. ಉದನೂರ ೧೦. ಬಿದ್ದಾಪೂರ ೧೧. ಮಾದರಸನಹಳ್ಳಿ ೧೨. ಕೋಟನೂರ ೧೩. ಜಾಫರಾಬಾದ್ ೧೪. ಹೀರಾಪೂರ ೧೫. ಮಾಳೇವಾಡಿ ೧೬. ಪಲ್ಲಾಪೂರ ೧೭. ಶೇಖರೋಜಾ ೧೮. ತಾಜ್ ಸುಲ್ತಾನಪೂರ ೧೯. ಬದೇಪೂರ

ಈಗಾಗಲೇ ನಗರ ಯೋಜನಾ ವ್ಯಾಪ್ತಿಗೆ ಇರುವ ಹಳ್ಳಿಗಳೆಂದರೆ (೧೯೮೯ರಲ್ಲಿ ಸೇರಿದುದು) ೧. ಕುಸನೂರು ೨. ಕಾಳಗನೂರ ೩. ಅಜಾದಪೂರ ೪. ಹಾಗರಗಿ ೫. ಮಾಲಗತ್ತಿ ೬. ಉಪಳಾಂವ ೭. ಕೆಸರಟಗಿ ೮. ಬೇಲೂರ ೯. ಸಿಂದಗಿ ೧೦. ಬಬಲಾದಿ ೧೧. ಸಿರಸಗಿ ೧೨. ಸಿತನೂರ ೧೩. ನಂದಿಕೂರ

ಇದರಿಂದ ಯೋಜನಾ ಪ್ರದೇಶವು ೨೫೩ ಚದರ ಕಿ. ಮೀ. ವಿಸ್ತೀರ್ಣ ಹೊಂದಿದೆ. ಪ್ರಾಧಿಕಾರವು ಪ್ರವಾಸಿಗರ ಸೌಕರ್ಯಕ್ಕಾಗಿ ತಂಪಾದ ಕುಡಿಯುವ ನೀರಿನ ೫ ಕೇಂದ್ರಗಳನ್ನು ನಿರ್ವಹಿಸಲು ಯೋಜಿಸಿ ಇವುಗಳಲ್ಲಿ ಸೂಪರ್‌ಮಾರ್ಕೆಟ್ ಕೇಂದ್ರ ಬಸ್ ನಿಲ್ದಾಣ ಹಾಗೂ ಮಹಾನಗರ ಸಭೆಯ ಉದ್ಯಾನವನದಲ್ಲಿ ಈಗಾಗಲೇ ನೀರಿನ ಕೇಂದ್ರಗಳನ್ನು ನಿರ್ಮಿಸಲಾಗಿದೆ.

ವಾಹನ ಸಂಚಾರವನ್ನು ವ್ಯವಸ್ಥಿತಗೊಳಿಸಲು ಬೆಂಗಳೂರಿನಲ್ಲಿರುವ ಮಾದರಿಯಲ್ಲಿ ಹೈದ್ರಾಬಾದ್ ಆಳಂದ್ ರಸ್ತೆಗೆ ಕೂಡಿಸುವ ವರ್ತುಲ ರಸ್ತೆಗೆ ಹೊಂದಿಕೊಂಡಿರುವ ಸುಮಾರು ೨೫ ಎಕರೆ ಪ್ರದೇಶದಲ್ಲಿ ಸುಮಾರು ೪ ಕೋಟಿ ರೂ. ವೆಚ್ಚದಲ್ಲಿ "ಟ್ರಕ್ ಟರ್ಮಿನಸ್" ನ್ನು ನಿರ್ಮಿಸುವ ಉದ್ದೇಶವನ್ನು ಹೊಂದಲಾಗಿದೆ.

ನೀರಿನ ಪೂರೈಕೆ ಬಗ್ಗೆ (ಅಧ್ಯಾಯ ೧೨ ನೋಡುವುದು)

**ಚಿಂಚೋಳಿ ವಿಸ್ತರಣಾ ಯೋಜನೆ**

ಚಿಂಚೋಳಿ ನಗರದ ಒಂದು ದೊಡ್ಡ ಬಡಾವಣೆಯಾದ ಚಂದಾಪುರ ನಗರ ಯೋಜನೆಯನ್ನೂ ಕಾರ್ಯಗತಗೊಳಿಸಲಾಗಿತ್ತು. ಚಿಂಚೋಳಿಯ ಸುತ್ತಮುತ್ತಲೂ ನದಿನಾಲೆಗಳಿರುವುದರಿಂದ ನಗರವನ್ನು ಊರಿಗೆ ಹೊಂದಿಕೊಂಡು ವಿಸ್ತರಿಸುವುದು ಕಷ್ಟಸಾಧ್ಯವಾದ ಯೋಜನೆಯಾಗಿದ್ದಿತು. ಅಂತೆಯೇ ಚಿಂಚೋಳಿ ಪಕ್ಕದಲ್ಲಿದ್ದ ಚಿಕ್ಕಹಳ್ಳಿ ಚಂದಾಪುರವನ್ನು ಚೊಕ್ಕಟವಾದ ಪಟ್ಟಣವನ್ನಾಗಿ ಅಭಿವೃದ್ಧಿಪಡಿಸಬೇಕೆಂದು ೩೧೦ ಎಕರೆ ಜಮೀನಿನ ಮೇಲೆ ಸಕಲ ಸೌಕರ್ಯಗಳನ್ನೊಳಗೊಂಡ ಆಧುನಿಕ ಪದ್ಧತಿಯ ಪಟ್ಟಣದ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಒಟ್ಟು ೯೭ ಎಕರೆ ಜಮೀನಿನ ಮೇಲೆ ಜನರ ವಾಸಕ್ಕಾಗಿ ಮನೆಗಳನ್ನೂ, ೧೯.೫ ಎಕರೆ ಜಮೀನಿನ ಮೇಲೆ ವ್ಯವಹಾರಿಕ ಕಟ್ಟಡಗಳನ್ನೂ, ೬೯ ಎಕರೆ ಪ್ರದೇಶದಲ್ಲಿ ಇತರೆ ಅಧಿಕೃತ ಕಟ್ಟಡಗಳನ್ನೂ, ೧೮.೫ ಎಕರೆ ಪ್ರದೇಶದಲ್ಲಿ ಕೈಗಾರಿಕಾ ಕಟ್ಟಡಗಳನ್ನೂ ರಚಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು.

**ಎತ್ತು ಮತ್ತು ಎತ್ತಿನಗಾಡಿಗಳು**

ಎತ್ತುಗಳು ಹಾಗೂ ಎತ್ತಿನ ಗಾಡಿಗಳು ಶಕ್ತಿಯನ್ನೊದಗಿಸುವುದು ಮತ್ತು ಮೋಟಾರು ವಾಹನಗಳು ಚಲಿಸಲಾಗದ ಗ್ರಾಮೀಣ ಪ್ರದೇಶದಲ್ಲಿ ಸಾರಿಗೆ ವ್ಯವಸ್ಥೆಯನ್ನು ಒದಗಿಸುವುದು. ಇವೆರಡರ ಜೊತೆಗೆ, ಗ್ರಾಮೀಣ ಆರ್ಥಿಕ ಪರಿಸ್ಥಿತಿಗೆ ಗಣನೀಯ ಕೊಡುಗೆಯನ್ನು ನೀಡಿವೆ. ಈ ಜಿಲ್ಲೆಯಲ್ಲಿ ಎತ್ತುಗಳು ಹಾಗೂ ಗಾಡಿಗಳು ಕೃಷಿ ಆಧಾರಿತ ಕೈಗಾರಿಕೆಗೆ ಒತ್ತುಕೊಡುವ ಜಾನುವಾರು ಶಕ್ತಿಯ ಪ್ರಮುಖ ಮೂಲವಾಗಿದೆ. ಆದುದರಿಂದ ಈ ಕಾರ್ಯಕ್ರಮಕ್ಕೆ ಸರ್ಕಾರದ ಕಾರ್ಯಕ್ರಮಗಳ ಮೂಲಕ ಆರ್ಥಿಕ ಸಹಾಯವನ್ನು ಹೆಚ್ಚಾಗಿ ಒದಗಿಸಲಾಗುತ್ತಿದೆ.

ನಬಾರ್ಡ್ ವರದಿಯಂತೆ ೧೯೯೨-೯೩ರಲ್ಲಿನ ಕ್ಷೇತ್ರವಾರು-ಚಟುವಟಿಕೆವಾರು ಸಾಧನೆಯನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

**ಕೋಷ್ಟಕ ೮.೨೬**

**(೧೯೯೨-೯೩)**

| ಕ್ರಮ ಸಂಖ್ಯೆ | ಚಟುವಟಿಕೆ | ಗುರಿ ಭೌತಿಕ | ಗುರಿ ಆರ್ಥಿಕ (ಲಕ್ಷ ರೂ.ಗಳಲ್ಲಿ) | ಸಾಧನೆ ಭೌತಿಕ | ಸಾಧನೆ ಆರ್ಥಿಕ | ಶೇ. |
|---|---|---|---|---|---|---|
| ೧. | ಎತ್ತುಗಳು | ೨,೨೨೦ | ೭೨.೧೦ | ೭೮೯ | ೧೮.೭೫ | ೨೬.೦೦ |
| ೨. | ಎತ್ತಿನ ಗಾಡಿಗಳು | ೧,೭೧೨ | ೭೨.೦೯ | ೭೮೯ | ೩೩.೮೬ | ೩೩.೮೬ |
| | ಒಟ್ಟು | ೩,೯೩೨ | ೧೪೪.೧೯ | ೧೫೭೮ | ೫೨.೬೨ | ೩೬.೪೯ |

೧೯೯೩-೯೪ ಹಾಗೂ ನಂತರದ ವರ್ಷಗಳಲ್ಲಿ ಆಂತರಿಕ ಸಾಧನ ಸೌಲಭ್ಯಗಳಲ್ಲಿ ಮತ್ತು ಈ ಚಟುವಟಿಕೆಯನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ರಮಗಳಲ್ಲಿ ಗಣನೀಯವಾದ ಬದಲಾವಣೆ ಆಗಲಿಲ್ಲ.

## ಪಡಿತರ ಪದ್ಧತಿ

ಪಡಿತರ ಪದ್ಧತಿಯನ್ನು ಗುಲಬರ್ಗಾ ಜಿಲ್ಲೆಯಲ್ಲಿ ಬಹಳ ಹಿಂದೆಯೇ ಜಾರಿಗೆ ತರಲಾಗಿತ್ತು. ೧೯೯೧ರ ಹೊತ್ತಿಗೆ ರೂ. ೬೪೦೦ಕ್ಕಿಂತ ಹೆಚ್ಚಿಗೆ ವಾರ್ಷಿಕ ಆದಾಯವಿರುವ ಕುಟುಂಬಗಳಿಗೆ ಕೇಸರಿ ಕಾರ್ಡುಗಳನ್ನು ನೀಡುವ ಕ್ರಮ ಕೈಗೊಳ್ಳಲಾಗಿತ್ತು ಮತ್ತು ರೂ. ೬೪೦೦ಕ್ಕಿಂತಲೂ ಕಡಿಮೆ ಆದಾಯವಿರುವ ಅರ್ಹ ಫಲಾನುಭವಿಗಳನ್ನು ಗುರುತಿಸಿದ್ದು, ೩,೨೫,೦೭೮ ಅರ್ಹ ಫಲಾನುಭವಿಗಳಿಗೆ ತ್ರಿವರ್ಣ ಪಡಿತರ ಚೀಟಿಗಳನ್ನು ನೀಡಲಾಗಿತ್ತು. ೧೯೯೩ರಲ್ಲಿ ಪುನರ್ ಸಮೀಕ್ಷೆಯ ನಂತರ ಒಟ್ಟು, ೧,೨೧,೦೩೩ ತ್ರಿವರ್ಣ ಕಾರ್ಡುಗಳು ಹೆಚ್ಚಾಗಿವೆ. ಜಿಲ್ಲೆಯಲ್ಲಿ ಒಟ್ಟು ೩೨ ಘೋಷಿತ ಕೊಳಚೆ ಪ್ರದೇಶಗಳಲ್ಲಿಯೂ ತ್ರಿವರ್ಣ ಪಡಿತರ ಚೀಟಿಗಳು ನೀಡುವ ಕ್ರಮ ಕೈಗೊಂಡು ೨೯ ಪಟ್ಟಣ ಕೊಳಚೆ ಪ್ರದೇಶಗಳಲ್ಲಿ ೩೭೮೨ ಫಲಾನುಭವಿಗಳಿಗೆ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಿಸಲಾಗಿತ್ತು.

ಪ್ರತಿ ತ್ರಿವರ್ಣ ಕಾರ್ಡುದಾರರಿಗೆ ಒಟ್ಟು ೧೦ ಕೆಜಿ ಅಕ್ಕಿ ೭ ಕೆಜಿ ಗೋಧಿ, ೩ ಕೆಜಿ ಆಹಾರ ಧಾನ್ಯಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಯಿತು. ಡಿ.ಪಿ.ಎ.ಪಿ. ಪ್ರದೇಶಗಳಲ್ಲಿ ಅಕ್ಕಿ ಮತ್ತು ಗೋಧಿಯೆಂದರೆ ತ್ರಿವರ್ಣ ಮತ್ತು ಕೇಸರಿ ಕಾರ್ಡುದಾರರಿಗೆ ಕ್ರಮವಾಗಿ ಈ ರೀತಿ ಇದ್ದಿತು. ರೂ. ೪.೪೫ (ಅಕ್ಕಿ), ರೂ. ೨.೯೫ (ಗೋಧಿ), ರೂ. ೬.೪೫ (ಅ) ರೂ. ೩.೯೫ (ಗೋಧಿ) ಮತ್ತು ಡಿ.ಪಿ.ಎ.ಪಿ.ಯೇತರ ಪ್ರದೇಶ (ಜೇವರ್ಗಿ ಮತ್ತು ಚಿಂಚೋಳಿ)ಗಳಲ್ಲಿ ಬೆಲೆ ರೂ. ೪.೪೫(ಅಕ್ಕಿ), ೨.೯೫(ಗೋಧಿ), ರೂ. ೭.೦೫ (ಅಕ್ಕಿ), ರೂ. ೪.೪೫(ಗೋಧಿ). ಜಿಲ್ಲೆಯಲ್ಲಿ ೧೦ ತಾಲೂಕುಗಳಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿನ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಪದಾರ್ಥಗಳನ್ನು ಸರಬರಾಜು ಮಾಡಲು ಪ್ರತಿ ತಾಲೂಕಿಗೆ ಒಂದು ಸಗಟು ಮಳಿಗೆ ಹೊಂದಿದ್ದು, ಶಹಾಪೂರ ತಾಲೂಕಿನಲ್ಲಿ ಟಿ.ಎ.ಪಿ.ಸಿ.ಎಂ.ಎಸ್.ರವರು ಸಗಟು ಮಳಿಗೆ ನಡೆಸುತ್ತಿದ್ದು, ಉಳಿದ ೯ ತಾಲೂಕಿನಲ್ಲಿ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು, ಗುಲಬರ್ಗಾ ಮಳಿಗೆಗಳನ್ನು ನಡೆಸುತ್ತಿದ್ದಾರೆ. ಜಿಲ್ಲೆಯಲ್ಲಿ ಒಟ್ಟು ಸುಮಾರು ೧೫೦೦ ನ್ಯಾಯಬೆಲೆ ಅಂಗಡಿಗಳು ಇವೆ. ೧೯೯೩-೯೪ನೇ ಸಾಲಿನಲ್ಲಿ ಮಾರ್ಚ್ ಅಂತ್ಯದವರೆಗೆ ಗ್ರಾಮಾಂತರ, ಪಟ್ಟಣ ಹಾಗೂ ಪಡಿತರ ಪ್ರದೇಶದ ಜನತೆಗೆ ಹಂಚಿಕೆ ಮಾಡಿರುವ ಧಾನ್ಯಗಳ ವಿವರ - ಅಕ್ಕಿ - ೪,೯೨,೯೦೦ ಕೆಜಿ, ಗೋಧಿ - ೧,೭೪,,೪೩೦ ಕೆಜಿ, ಸಕ್ಕರೆ - ೧,೧೩,೪೮೦ ಕೆಜಿ.

## ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ

ರಾಜ್ಯ ಪುನರ್ವಿಂಗಡಣೆಯ ನಂತರ ಹೈದರಾಬಾದ್ ಸಂಸ್ಥಾನದಿಂದ ವಿಲೀನಗೊಂಡ ಕನ್ನಡ ಪ್ರದೇಶಗಳಾದ ಬೀದರ್, ಗುಲಬರ್ಗಾ, ರಾಯಚೂರು ಮತ್ತು ಮದ್ರಾಸ್ ಪ್ರೆಸಿಡೆನ್ಸಿಯಿಂದ ವಿಲೀನಗೊಂಡ ಬಳ್ಳಾರಿ ಜಿಲ್ಲೆಗಳನ್ನು ಸಂಯುಕ್ತವಾಗಿ ಹೈದರಾಬಾದ್ ಕರ್ನಾಟಕ ಎಂದು ಕರೆಯಲಾಗುತ್ತಿದೆ. ಈ ಪ್ರದೇಶವು ರಾಜ್ಯದಲ್ಲಿ ಅತಿ ಹಿಂದುಳಿದ ಪ್ರದೇಶವೆನಿಸಿತ್ತು. ಶಾಶ್ವತ ಬರಗಾಲ, ಅಂತರ್ಜಲ ಸಂಪನ್ಮೂಲ ಉಪಯೋಗಿಸದಿರುವುದು, ಕಡಿಮೆ ಅರಣ್ಯ ಪ್ರದೇಶ ಮತ್ತು ನಾಗರೀಕ ಸೌಲಭ್ಯಗಳ ಕೊರತೆ, ಕೈಗಾರಿಕೆಗಳ ಕೊರತೆ ಈ ಪ್ರದೇಶದ ಹಿನ್ನಡೆಗೆ ಕಾರಣಗಳಾಗಿದ್ದವು. ಈ ಪ್ರದೇಶದಲ್ಲಿ ಪ್ರಮುಖವಾದ ಗುಲಬರ್ಗಾ ಒಂದು ಜಿಲ್ಲಾ ಕೇಂದ್ರವಾಗಿದೆ. ಯಾವುದೇ ಒಂದು ಪ್ರದೇಶ ಅಭಿವೃದ್ಧಿಯಲ್ಲಿ ಹಿಂದುಳಿದರೆ, ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಕುಂಠಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯ ಸಾಮಾಜಿಕ, ಆರ್ಥಿಕ ಮತ್ತು ಇತರ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿ ಆಧರಿಸಿ ಅವುಗಳನ್ನು ಮಾಪಕ ಮಾಡುವ ಪಟ್ಟಿಯೊಂದನ್ನು ೧೯೬೦-೬೧ರಲ್ಲಿ ತಯಾರಿಸಿತು. ಈ ಶ್ರೇಣಿಯ ಪಟ್ಟಿಯಲ್ಲಿ ಗುಲಬರ್ಗಾ ೧೯ನೇ ಸ್ಥಾನವನ್ನು ಪಡೆದಿದ್ದಿತು. ಅಲ್ಲದೆ ೧೯೭೭-೭೮ರ ಅಂದಾಜಿನಂತೆ ರಾಜ್ಯದ ಸರಾಸರಿ ತಲಾ ಆದಾಯವು ೧೧೩೨ ರೂ. ಇದ್ದರೆ, ಗುಲಬರ್ಗಾ ಜಿಲ್ಲೆಯ ತಲಾ ಆದಾಯವು ೭೪೯ ರೂ. ಇದ್ದಿತು. ಇದರೊಂದಿಗೆ ಬಳ್ಳಾರಿ, ರಾಯಚೂರು, ಬೀದರ್ ಜಿಲ್ಲೆಗಳೂ ಹಿಂದುಳಿದ ಜಿಲ್ಲೆಗಳಾಗಿದ್ದವು.

ಈ ಬಗೆಯ ಪ್ರಾದೇಶಿಕ ಅಸಮತೋಲನ ಹೋಗಲಾಡಿಸುವ, ತನ್ಮೂಲಕ ರಾಜ್ಯವನ್ನು ಪ್ರಗತಿಪಥಕ್ಕೆ ಕೊಂಡೊಯ್ಯುವ ಸಲುವಾಗಿ ಈ ನಾಲ್ಕು ಜಿಲ್ಲೆಗಳಿಗೆ ಹಮ್ಮಿಕ್ಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಸಮಗ್ರ ವರದಿಯನ್ನು ತಯಾರಿಸುವುದಕ್ಕಾಗಿ

## ಕೋಷ್ಟಕ ೮.೨೨

### ೧೯೯೦-೯೧ರಿಂದ ೧೯೯೫-೯೬ರವರೆಗೆ ಜಿಲ್ಲೆಯಲ್ಲಿದ್ದ ನ್ಯಾಯಬೆಲೆ ಅಂಗಡಿಗಳು ಹಾಗೂ ಪಡಿತರ ಚೀಟಿಗಳ ಸಂಖ್ಯೆಯನ್ನು ಇಲ್ಲಿ ಕೊಡಲಾಗಿದೆ.

| ತಾಲೂಕು | ೧೯೯೦-೯೧ | | | ೧೯೯೧-೯೨ | | | ೧೯೯೨-೯೩ | | | ೧೯೯೪-೯೫ | | |
|---|---|---|---|---|---|---|---|---|---|---|---|---|
| | ನ್ಯಾಯಬೆಲೆ ಅಂಗಡಿಗಳು | ಹಸಿರುಕಾರ್ಡು ದಾರರ ಸಂಖ್ಯೆ | ಕೇಸರಿಕಾಡು ದಾರರ ಸಂಖ್ಯೆ | ನ್ಯಾಯಬೆಲೆ ಅಂಗಡಿಗಳು | ಹಸಿರುಕಾರ್ಡು ದಾರರ ಸಂಖ್ಯೆ | ಕೇಸರಿಕಾರ್ಡು ದಾರರ ಸಂಖ್ಯೆ | ನ್ಯಾಯಬೆಲೆ ಅಂಗಡಿಗಳು | ಹಸಿರುಕಾರ್ಡು ದಾರರ ಸಂಖ್ಯೆ | ಕೇಸರಿಕಾರ್ಡು ದಾರರ ಸಂಖ್ಯೆ | ನ್ಯಾಯಬೆಲೆ ಅಂಗಡಿಗಳು | ಹಸಿರುಕಾರ್ಡು ದಾರರ ಸಂಖ್ಯೆ | ಕೇಸರಿಕಾರ್ಡು ದಾರರ ಸಂಖ್ಯೆ |
| ಅಫಜಲ್‌ಪುರ | ೫೦ | ೧೫,೮೫೯ | ೧೪,೦೦೯ | ೮೦ | ೧೫,೮೬೫ | ೧೩,೯೬೩ | ೮೯+೩ | ೨೫,೮೮೮ | ೧೦,೨೮೯ | ೯೨ | ೨೩,೦೦೦ | ೧೨,೦೦೦ |
| ಆಳಂದ | ೮೦+೧೫ | ೨೨,೯೭೨ | ೧೯,೨೦೦ | ೮೫+೧೫ | ೨೩,೧೯೬ | ೧೯,೨೦೦ | ೯೮+೧೫ | ೪೦,೭೨೦ | ೧೨,೭೨೫ | ೧೩೩ | ೪೦,೦೦೦ | ೧೪,೦೦೦ |
| ಚಿಂಚೋಳಿ | ೬೯ | ೨೨,೯೫೬ | ೧೨,೨೨೦ | ೭೪ | ೨೨,೮೪೯ | ೧೨,೧೪೭ | ೭೯ | ೩೪,೦೬೪ | ೯,೦೭೨ | ೯೦ | ೩೨,೦೦೦ | ೯,೦೦೦ |
| ಚಿತ್ತಾಪುರ | ೮೭+೪೪ | ೧೯,೧೨೩ | ೧೯,೦೬೫ | ೯೩+೪೪ | ೧೯,೧೮೨ | ೧೯,೦೧೬ | ೧೨೦+೪೪ | ೩೩,೮೫೦ | ೧೨,೨೨೦ | ೧೭೯ | ೩೩,೦೦೦ | ೧೫,೦೦೦ |
| ಗುಲಬರ್ಗಾ | ೯೯+೧೦೭ | ೨೨,೫೧೪ | ೧೫,೯೯೩ | ೧೦೭+೧೦೮ | ೨೨,೬೭೨ | ೧೫,೭೯೨ | ೧೧೭+೧೧೪ | ೩೫,೯೬೫ | ೧೩,೫೧೩ | ೨೩೫ | ೩೭,೦೦೦ | ೧೫,೦೦೦ |
| ಜೇವರ್ಗಿ | ೭೪ | ೨೦,೪೨೬ | ೧೩,೨೩೪ | ೯೨ | ೨೦,೬೧೭ | ೧೩,೨೩೪ | ೧೦೯ | ೩೬,೨೫೪ | ೧೦,೮೩೬ | ೧೧೫ | ೩೧,೦೦೦ | ೧೧,೦೦೦ |
| ಸೇಡಂ | ೪೦+೧೦ | ೧೪,೩೮೬ | ೮,೨೧೯ | ೪೦+೧೦ | ೧೫,೯೩೪ | ೮,೨೧೯ | ೪೮+೧೦ | ೨೨,೩೫೩ | ೮,೦೪೭ | ೭೬ | ೨೩,೦೦೦ | ೭,೦೦೦ |
| ಶಹಾಪುರ | ೬೭+೧೪ | ೧೮,೮೦೦ | ೧೫,೯೬೪ | ೬೮+೧೬ | ೧೮,೭೮೮ | ೧೫,೬೦೮೮ | ೧೦೯+೧೬ | ೩೧,೧೫೦ | ೧೫,೨೦೩ | ೧೦೬ | ೨೮,೦೦೦ | ೧೫,೦೦೦ |
| ಸುರಪುರ | ೭೨+೭ | ೨೦,೭೭೯ | ೧೫,೧೮೮ | ೭೮+೩ | ೨೦,೧೩೧ | ೧೫,೧೫೨ | ೯೩+೪ | ೩೦,೧೪೭ | ೧೩,೬೬೯ | ೧೦೮ | ೩೯,೦೦೦ | ೧೬,೦೦೦ |
| ಯಾದಗಿರಿ | ೬೭+೨೩ | ೨೫,೨೩೫ | ೧೩,೧೯೪ | ೭೬+೨೩ | ೨೭,೧೩೧ | ೧೩,೧೬೫ | ೧೦೪+೨೪ | ೩೪,೬೮೮ | ೧೧,೦೨೪ | ೧೨೫ | ೩೬,೦೦೦ | ೧೪,೦೦೦ |
| ಮೊತ್ತ | ೭೦೫+೨೨೦ | ೨,೦೪,೦೬೦ | ೧,೪೬,೭೧೩ | ೨೧೯ | ೨,೦೮,೦೧೩ | ೧,೪೯,೫೬೬ | ೯೯೬+೨೨೨ | ೩,೨೫,೨೭೮ | ೧,೧೬,೬೯೮ | ೧,೨೫೯ | ೩,೧೨,೦೦೦ | ೧,೨೮,೦೦೦ |

## ಕೋಷ್ಟಕ ೮.೨೮

### ಆಗಸ್ಟ್ ೯೫ರಲ್ಲಿದ್ದಂತೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯವತಿಯಿಂದ ಆಗಿರುವ ಪ್ರಗತಿ (ಎ)

| ಕ್ರಮ ಸಂಖ್ಯೆ | ಘಟಕ | ಅನುಷ್ಠಾನ ಗೊಳಿಸುವ ಇಲಾಖೆ | ಪೂರ್ಣಗೊಳಿಸುವ ಕಾಮಗಾರಿಗಳು | ಅಂದಾಜು ವೆಚ್ಚ | ೧೯೯೫ರಲ್ಲಿ ಆದ ವೆಚ್ಚ | ಪ್ರಾರಂಭವಾದಾಗಿನಿಂದ ಆದ ವೆಚ್ಚ |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| | | (ಶಾಸಕರಲ್ಲದ - ಕಾಮಗಾರಿ) (ವೆಚ್ಚ ಲಕ್ಷ ರೂ.ಗಳಲ್ಲಿ) | | | | |
| ೧. | ರಸ್ತೆಗಳು ಸೇತುವೆಗಳು | ಲೋಕೋಪಯೋಗಿ ಜಿಲ್ಲಾ ಪರಿಷತ್ | ೧೨ | ೩೦೦೫.೯೩ | ೧೩೨.೨೬ | ೨೬೭೮.೪೮ |
| ೨. | ವಿದ್ಯೆ | ಲೋಕೋಪಯೋಗಿ ಮತ್ತು ಭೂಸೇನಾ ಮಂಡಳಿ | ೯ | ೪೯೦.೧೦ | ೨೭.೨೪ | ೨೭೮.೯೩ |
| | | | ೩೦೬ | ೩೩೨.೪೬ | ೧.೬೩ | ೩೧೮.೧೧ |
| ೩. | ಆರೋಗ್ಯ | ಲೋಕೋಪಯೋಗಿ | ೪ | ೩೮.೧೭ | ೩.೨೭ | ೩೮.೯೬ |
| | | ಭೂಸೇನಾ ಮಂಡಳಿ | ೧೨ | ೫೦೯.೮೭ | ೫೦.೬೭ | ೪೯೯.೧೮ |
| | | ಕ.ನೀ.ಸ ಮಂಡಳಿ | -- | ೧೧.೯೨ | -- | ೩.೦೦ |
| | | ಜಿ. ಪ. | ೬ | ೧೦೯.೧೨ | ೦.೦೫ | ೧೮.೨೮ |
| ೪. | ವಿಶ್ವವಿದ್ಯಾಲಯ | ಗುಲಬರ್ಗಾ ವಿಶ್ವವಿದ್ಯಾಲಯ | ೭ | ೬೮೧.೦೦ | ೩೧.೦೯ | ೫೦೦.೩೯ |
| ೫. | ಸಣ್ಣ ನೀರಾವರಿ | ಸಣ್ಣ ನೀರಾವರಿ ಇಲಾಖೆ | ೧೮ | ೧೫೮೩.೯೯ | ೧.೫೯ | ೪೮೭.೭೦ |
| ೬. | ಭಾರಿ ಮತ್ತು ಮಧ್ಯಮ ನೀರಾವರಿ | -- | ೨ | ೬೩.೩೩ | -- | ೬೨.೫೨ |
| ೭. | ಸಹಕಾರ | -- | ೧ | ೨೫.೦೦ | -- | ೨೫,೦೦ |
| ೮. | ಯುವಜನ ಸೇವೆ | -- | -- | ೩೦.೦೦ | -- | -- |
| ೯. | ಕ. ವಿ. ಮಂಡಳಿ | ಕ. ವಿ. ಮಂಡಳಿ | ೨೦೧ | ೩೬೦.೨೩ | ೫.೧೯ | ೨೨೩.೫೧ |
| ೧೦. | ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | ಕ. ನೀ. ಸಂ. ಒ. ಚ. ಮಂಡಳಿ | ೪ | ೧.೭೬ | ೧೭.೯೫ | ೧೪೬೯.೦೦ |
| | | ಜಿಲ್ಲಾ ಪರಿಷತ್ | ೪೯ | ೦.೦೨ | ೨.೮೦ | ೧೧೬.೨೨ |
| ೧೧. | ಸಮಾಜ ಕಲ್ಯಾಣ | -- | ೧ | ೫.೦೦ | | ೫.೦೦ |
| ೧೨. | ಮಂಡಳಿಯ ಕಾರ್ಯಾಲಯ | | -- | -- | ೮೪.೩ | ೧೫೪.೪೦ |
| | ಒಟ್ಟು | | ೬೬೮ | ೧೪೯೭೦.೮೦ | ೩೪೩.೦೫ | ೭೬೫೪.೫೮ |

## ಕೋಷ್ಟಕ ೮.೨೯

## ಆಗಸ್ಟ್ ೯೫ರಲ್ಲಿದ್ದಂತೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯವತಿಯಿಂದ ಆಗಿರುವ ಪ್ರಗತಿ (ಬಿ)

| ಕ್ರಮ ಸಂಖ್ಯೆ | ಘಟಕ | ಅನುಷ್ಠಾನ ಗೊಳಿಸುವ ಇಲಾಖೆ | ಪೂರ್ಣಗೊಳಿಸುವ ಕಾಮಗಾರಿಗಳು | ಅಂದಾಜು ವೆಚ್ಚ | ೧೯೯೫ರಲ್ಲಿ ಆದ ವೆಚ್ಚ | ಪ್ರಾರಂಭವಾದಾಗಿನಿಂದ ಆದ ವೆಚ್ಚ |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| | | (ಶಾಸಕರ - ಕಾಮಗಾರಿ) (ಕ್ಷೇತ್ರದ - ಕಾಮಗಾರಿಗಳು) | | | | |
| ೧. | ರಸ್ತೆಗಳು ಮತ್ತು ಸೇತುವೆಗಳು | ಲೋಕೋಪಯೋಗಿ | ೧೪ | ೨೪೩.೫೬ | ೩.೧೫ | ೧೦೨.೪೧ |
| | | ಜಿಲ್ಲಾ ಪರಿಷತ್ | ೧೭೯ | ೧೮೪೬.೯೨ | ೬೨.೫೯ | ೧೩೬೬.೮೭ |
| ೨. | ಇತರೆ | ಲೋಕೋಪಯೋಗಿ | ೨ | ೮.೩೩ | ೦.೯೬ | ೭.೮೦ |
| | ಕಟ್ಟಡಗಳು | ಜಿಲ್ಲಾ ಪಂಚಾಯತ್ | ೧೦೭ | ೫೧೭.೯೪ | ೯.೩೦ | ೩೮೩.೫೭ |
| ೩. | ನೀರು ಸರಬರಾಜು | ಜಿಲ್ಲಾ ಪಂಚಾಯತ್ | ೪೫ | ೧೩೮.೩೨ | ೭.೨೯ | ೧೧೯.೧೫ |
| ೪. | ಸಣ್ಣ ನೀರಾವರಿ | ಜಿಲ್ಲಾ ಪಂಚಾಯತ್ | ೨೧ | ೧೦೩.೬೩ | ೩.೨೬ | ೧೦೨.೪೬ |
| ೫. | ಸಣ್ಣ ನೀರಾವರಿ | ಸಣ್ಣ ನೀರಾವರಿ ಇಲಾಖೆ | ೧೮ | ೧೫೮೩.೯೯ | ೧.೫೯ | ೪೮೭.೭೦ |
| ೬. | ಚರಂಡಿ | ಜಿಲ್ಲಾ ಪಂಚಾಯತ್ | -- | ೫೯.೬೦ | -- | -- |
| | ಒಟ್ಟು | | ೩೬೮ | ೨೯೧೮.೩೦ | ೮೬.೫೫ | ೨೦೮೨.೨೬ |
| | ಜಿಲ್ಲೆಯ ಒಟ್ಟು (ಎ ಮತ್ತು ಬಿ) | | ೧೦೩೬ | ೧೭೮೯೯.೧೦ | ೪೨೯.೬೦ | ೯೭೩೬.೮೪ |

ಆಧಾರ : ಹೈದರಾಬಾದ್, ಕರ್ನಾಟಕ ಡೆವೆಲಪ್‌ಮೆಂಟ್ ಬೋರ್ಡು

ಸರ್ಕಾರ ೧೯೮೦ರಲ್ಲಿ ಒಂದು ಸಮಿತಿಯನ್ನು ರಚಿಸಿತ್ತು. ಈ ಸಮಿತಿಯು ಹತ್ತು ವರ್ಷಗಳ ಕಾಲಮಿತಿಯಲ್ಲಿ ೩೫೦ ಕೋಟಿ ರೂ. ವೆಚ್ಚದಲ್ಲಿ ಸರ್ವತೋಮುಖ ಅಭಿವೃದ್ಧಿ ಸಾಧಿಸುವ ಸಮಗ್ರ ವರದಿಯೊಂದನ್ನು ನೀಡಿತು. ಈ ಹಣವನ್ನು ಆರೋಗ್ಯ, ಶಿಕ್ಷಣ, ರಸ್ತೆ ಕಾಮಗಾರಿ, ಕೃಷಿ, ಉದ್ಯಮ, ಸಣ್ಣ ನೀರಾವರಿ, ಗ್ರಾಮೀಣ ಅಭಿವೃದ್ಧಿ ಮತ್ತು ಗ್ರಾಮೀಣ ನೀರು ಸರಬರಾಜು ಯೋಜನೆಗಳು, ನಗರ ಪ್ರದೇಶದಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳು, ಆಸ್ಪತ್ರೆ ಕಟ್ಟಡಗಳು, ಸಹಕಾರ ವಲಯ ಮತ್ತು ತಾಂಡಾ ಹಾಗೂ ಹರಿಜನ ಬಸ್ತಿ, ವಿದ್ಯುದೀಕರಣ ಹಾಗೂ ಮತ್ತಿತರ ಆಯ್ದ ಕೆಲವು ಮಹತ್ವದ ಕ್ಷೇತ್ರಗಳಲ್ಲಿ ತೊಡಗಿಸಬೇಕೆಂದು ಸಮಿತಿ ಶಿಫಾರಸು ಮಾಡಿತ್ತು. ಈ ಉದ್ದೇಶ ಸಾಧನೆಗಾಗಿ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸುವಂತೆ ಸೂಚಿಸಿತ್ತು.

ಈ ವರದಿಯ ಹಿನ್ನೆಲೆಯಲ್ಲಿ ೧೯೯೦ರ ಮೇ ತಿಂಗಳಲ್ಲಿ ಸರ್ಕಾರ ಒಂದು "ಉನ್ನತಾಧಿಕಾರ ಸಮಿತಿ" ರಚಿಸಿತು. ಈ ಸಮಿತಿಯು ಹೈದರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿಯ ಬಗ್ಗೆ ಯೋಜನೆಗಳನ್ನು ಸಿದ್ಧಪಡಿಸಿ, ಅನುದಾನ ಮಂಜೂರು ಮಾಡುವ, ಆಡಳಿತಾತ್ಮಕ ಮಂಜೂರಾತಿ ನೀಡುವ ಅಂತಿಮ ಅಧಿಕಾರ ಹೊಂದಿತ್ತು.

ನಂತರ ಯೋಜನಾ ಆಯೋಗದ ವಿಶೇಷ ತಂಡ ನಡೆಸಿದ ಅಧ್ಯಯನದ ವರದಿಯ ಸಲಹೆಯಂತೆ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ರಚನೆ ಮಾಡುವ ನಾಂದಿಯಾಯಿತು. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕಾಯಿದೆ ೧೯೯೧ರಲ್ಲಿ ರಚನೆಯಾಗಿ ದಿನಾಂಕ ೧೦.೩.೧೯೯೨ರಲ್ಲಿ ಮಂಡಳಿ ಕಾರ್ಯರೂಪಕ್ಕೆ ಬಂದಿದೆ.

ಈ ಮಂಡಳಿಯು ಗುಲಬರ್ಗಾ ಜಿಲ್ಲೆಯ ವಿವಿಧ ವಲಯಗಳಲ್ಲಿ ಕೈಗೊಂಡ ಕಾರ್ಯಕ್ರಮಗಳು

### ೧. ರಸ್ತೆ ಮತ್ತು ಸೇತುವೆಗಳು

ರಾಜ್ಯದ ಒಟ್ಟು ರಸ್ತೆಯ ಉದ್ದ ೧೯೯೩-೯೪ರಲ್ಲಿ ೧,೩೧,೬೫೫ ಕಿ.ಮೀ. ಇದ್ದರೆ ಹೈದರಾಬಾದ್-ಕರ್ನಾಟಕದ ಪ್ರದೇಶದಲ್ಲಿನ ರಸ್ತೆಯ ಉದ್ದ ೨೦,೩೮೭ ಕಿ.ಮೀ. ಆಗಿದ್ದಿತು. ರಾಜ್ಯದ ಎಲ್ಲಾ ಜಿಲ್ಲೆಗಳನ್ನು ರಸ್ತೆಯ ಉದ್ದಕ್ಕನುಗುಣವಾಗಿ ಗಣನೆಗೆ ತೆಗೆದುಕೊಂಡು ಹೋಲಿಸಿದಾಗ ಗುಲಬರ್ಗಾ ಜಿಲ್ಲೆ ೧೮ನೇ ಸ್ಥಾನವನ್ನು ಹೊಂದಿತ್ತು. ರಾಜ್ಯದ ಸರಾಸರಿ ರಸ್ತೆ ಉದ್ದಳತೆಗೆ ಹೈದರಾಬಾದ್-ಕರ್ನಾಟಕ ಪ್ರದೇಶದ ರಸ್ತೆಗಳ ಉದ್ದವನ್ನು ಹೆಚ್ಚಿಸಿ, ನೆರವಾಗಿಸಲು ಹೊಸ ರಸ್ತೆಗಳನ್ನು ನಿರ್ಮಾಣ ಮಾಡುವುದು ಹಾಗೂ ಇರುವ ರಸ್ತೆಗಳನ್ನು ಸುಧಾರಿಸುವುದು ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಲಾಗಿದೆ. ೧೯೯೪-೯೫ರ ಅಂತ್ಯಕ್ಕೆ ಗುಲಬರ್ಗಾ ಜಿಲ್ಲೆಯಲ್ಲಿ ೧೩೮೭.೪೬ ಕಿ.ಮೀ. ಉದ್ದದ ರಸ್ತೆಯನ್ನು (೩೬೬ ರಸ್ತೆಗಳು) ನಿರ್ಮಿಸಲು ೩೩.೧೨ ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

**ಸಣ್ಣ ನೀರಾವರಿ** :- ೧೯೯೪-೯೫ರ ಅಂತ್ಯದವರೆಗೆ ಜಿಲ್ಲೆಯಲ್ಲಿ ೪೫ ಕಾಮಗಾರಿಗಳಿಗೆ ೫.೮೪ ಕೋಟಿ ರೂ. ಖರ್ಚಾಗಿದೆ. ೧೯೯೫-೯೬ನೇ ಸಾಲಿಗಾಗಿ ಈ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿ, ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ೯೨೩.೮೮ ಲಕ್ಷ ಹಣ ನಿಗದಿಪಡಿಸಲಾಗಿದೆ.

**ಶಿಕ್ಷಣ** :- ಜಿಲ್ಲೆಯಲ್ಲಿ ೩೮೬ ಕಾಮಗಾರಿಗಳಿಗಾಗಿ ೪.೪೦ ಕೋಟಿ ರೂ. ಖರ್ಚು ಮಾಡಲಾಗಿದೆ.

**ಆರೋಗ್ಯ** :- ಜಿಲ್ಲೆಯ ೧೪ ಕಾಮಗಾರಿಗಳಿಗಾಗಿ ೪.೩೩ ಕೋಟಿ ರೂ. ಖರ್ಚು ಮಾಡಲಾಗಿದೆ.

### ವಿದ್ಯುದೀಕರಣ

ಪ್ರಮುಖವಾಗಿ ತಾಂಡಾ ಹಾಗೂ ಬಸ್ತಿಗಳಿಗೆ ವಿದ್ಯುದೀಕರಣ ಮಾಡಲಾಗಿದೆ. ಕರ್ನಾಟಕ ವಿದ್ಯುತ್ ಮಂಡಳಿಯು ವಿದ್ಯುದೀಕರಣಗೊಳಿಸಲು ೫ ಪಟ್ಟಿಗಳನ್ನು ಮಾಡಿ, ಮಾರ್ಚ್ ೧೯೯೫ರವರೆಗೆ ಸಾಧಿಸಿದ ಪ್ರಗತಿಯನ್ನು ಈ ಮುಂದೆ ಕೊಡಲಾಗಿದೆ.

೧. ೧ನೇ ಪಟ್ಟಿಯಲ್ಲಿ ೩೧, ೨ನೇ ಪಟ್ಟಿಯಲ್ಲಿ ೩೦, ೩ನೇ ಪಟ್ಟಿಯಲ್ಲಿ ೪೯, ೪ನೇ ಪಟ್ಟಿಯಲ್ಲಿ ೪೯, ೫ನೇ ಪಟ್ಟಿಯಲ್ಲಿ ೩೯ ಗ್ರಾಮಗಳು.

## ನೀರು ಸರಬರಾಜು ಮತ್ತು ಒಳಚರಂಡಿ

ಜಿಲ್ಲೆಯಲ್ಲಿ ೪ ಕಾಮಗಾರಿಗಳಿಗೆ ರೂ. ೯.೬೮ ಕೋಟಿ ರೂ. ಖರ್ಚು ಮಾಡಲಾಗಿದೆ.

## ಗ್ರಾಮೀಣ ಅಭಿವೃದ್ಧಿ ಕಾಮಗಾರಿಗಳು

ಈ ಕಾರ್ಯಕ್ರಮದ ಅನ್ವಯ ಕಾಮಗಾರಿಗಳು ಮತ್ತು ಖರ್ಚು ಮಾಡಿದ ಹಣದ ವಿವರ ಹೀಗಿದೆ.

| | | |
|---|---|---|
| ಗ್ರಾಮೀಣ ಕುಡಿಯುವ ನೀರಿನ ಯೋಜನೆ | - | ೧೩೯ ಕಾಮಗಾರಿ |
| | | ೨.೪೩ ಕೋಟಿ ರೂ. |
| ಯುವಜನ ಸೇವೆ | - | ೨೯ ಕಾಮಗಾರಿಗಳು |
| | | ೦.೧೫ ಕೋಟಿ ರೂ. |
| ಇತರೆ | - | ೧೬೯ ಕಾಮಗಾರಿ |
| | | ೫.೯೯ ಕೋಟಿ ರೂ. |

ಈ ಕಾರ್ಯಕ್ರಮಗಳಿಗೆ ೧೯೯೦-೯೧ ರಿಂದ ೧೯೯೫-೯೬ರವರೆಗೆ ನಿಗದಿಪಡಿಸಿದ ಅನುದಾನ ರೂ. ೧೪೦.೯೪ ಕೋಟಿ. [ಉಳಿದ ಪಟ್ಟಿಗಳನ್ನು ಮುಂದೆ ಕೊಡಲಾಗಿದೆ.]

## ಜವಾಹರ ರೋಜಗಾರ್ ಯೋಜನೆ

ಕೇಂದ್ರ ಸರ್ಕಾರ ಪ್ರಾಯೋಜಿತ ಈ ಕಾರ್ಯಕ್ರಮವನ್ನು ೧೯೮೯ನೇ ಏಪ್ರಿಲ್‌ನಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯ ಪ್ರಮುಖ ಉದ್ದೇಶವೇನೆಂದರೆ ಗ್ರಾಮೀಣ ಯುವಜನರಿಗೆ ನೇರವಾಗಿ ಮತ್ತು ಅವಿರತವಾಗಿ ಉದ್ಯೋಗಾವಕಾಶಗಳನ್ನು ಉಂಟು ಮಾಡುವುದು. ಈ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದೂ ಆಗಿದೆ. ಒಟ್ಟು ವೆಚ್ಚವನ್ನು ೮೦:೨೦ ಪ್ರಮಾಣದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭರಿಸುತ್ತವೆ. ಈ ಯೋಜನೆಯನ್ವಯ ಜೀತದಿಂದ ಬಿಡುಗಡೆ ಮಾಡಲ್ಪಟ್ಟ ಜೀತ ಕಾರ್ಮಿಕರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುಂಪಿಗೆ ಸೇರಿದ ಜನಗಳಿಗೆ ಪ್ರಾಶಸ್ತ್ಯ ಕೊಡಲಾಗುವುದು. ಮತ್ತು ಶೇ. ೩೦ರಷ್ಟು ಮಹಿಳೆಯರಿಗೆ ಮೀಸಲಾಗಿಡಲಾಗುವುದು. ಆಹಾರ ಧಾನ್ಯಗಳನ್ನು ಪ್ರತಿ ಮಾನವ ದಿನಕ್ಕೆ ೨ ಕಿಲೋ.ನಂತೆ ವಿತರಣೆ ಮಾಡಲಾಗುತ್ತದೆ. ಮತ್ತು ಈ ಯೋಜನೆ ಅನ್ವಯ ನೇಮಕಗೊಂಡ ಕಾರ್ಮಿಕರಿಗೆ ದಿನಕ್ಕೆ ಕನಿಷ್ಟ ೧೬ ರೂ. ವೇತನ ಕೊಡಲಾಗುತ್ತದೆ. ಈ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯಿತಿಗಳು ಮತ್ತು ಗ್ರಾಮ ಪಂಚಾಯಿತಿಗಳು ಅನುಷ್ಠಾನಗೊಳಿಸುತ್ತವೆ.

## ಜಿಲ್ಲೆಯಲ್ಲಿನ ಮೂಲಭೂತ ಸೌಕರ್ಯಗಳು (೧೯೯೩-೯೪ರಲ್ಲಿದ್ದಂತೆ)

ಜಿಲ್ಲೆಯಲ್ಲಿ ವಿದ್ಯುತ್ ಉತ್ಪಾದನಾ ಯೋಜನೆಗಳಾಗಲೀ ಅಥವಾ ಇಂಧನಗಳನ್ನು ಬಳಸಿ ವಿದ್ಯುತ್ ತಯಾರಿಸುವ ಯೋಜನೆಗಳಾಗಲಿ ಇರುವುದಿಲ್ಲ. ಆದುದರಿಂದ ರಾಜ್ಯದ ವಿದ್ಯುತ್ ಜಾಲದ ಮುಖಾಂತರ ಜಿಲ್ಲೆಗೆ ವಿದ್ಯುತ್ತನ್ನು ಪೂರೈಸಲಾಗುತ್ತದೆ. ಒಟ್ಟು ೧೪೩೬ ಗ್ರಾಮಗಳಿಗೆ (ಉಪ ಗ್ರಾಮಗಳೂ ಸೇರಿ) ಹಾಗೂ ೨೬,೦೮೯ ಐ.ಪಿ. ಸೆಟ್ಟುಗಳಿಗೆ ವಿದ್ಯುತ್ ಪೂರೈಸಲಾಗುತ್ತಿದೆ.

ಜಿಲ್ಲೆಯಲ್ಲಿ ೧೯೯೭ ರ ಹೊತ್ತಿಗೆ ೧೪೪ ವಾಣಿಜ್ಯ ಬ್ಯಾಂಕುಗಳು ಹಾಗೂ ೭೫ ಗ್ರಾಮೀಣ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿದ್ದವು. ಇವು ೨೦೦ ಕೋಟಿ ರೂ.ಗಳನ್ನು ಸಾಲವಾಗಿ ಕೊಟ್ಟಿದ್ದವು. ಠೇವಣಿ ಸಾಲದ ಅನುಪಾತ ೬೬ ಆಗಿದ್ದಿತು. ಇವಲ್ಲದೆ ೧೬ ಸಹಕಾರ ಬ್ಯಾಂಕುಗಳು, ೧೦ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿದ್ದವು. ಇದರಲ್ಲಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ೯೯೧.೯೨ ಲಕ್ಷ ರೂ. ಸಾಲ ವಿತರಣೆ ಮಾಡಿದ್ದವು.

ಜಿಲ್ಲೆಯಲ್ಲಿ ೧೧೭೭ ಸಹಕಾರ ಸಂಘಗಳಲ್ಲಿ ೨.೯೫ ಲಕ್ಷ ಸದಸ್ಯರಿದ್ದು, ಒಟ್ಟು ಸಹಕಾರಿ ಸಂಘಗಳಲ್ಲಿ ೨೩೨ ಕೃಷಿ ಸಾಲ ನೀಡುವ ಸಹಕಾರ ಸಂಘಗಳಿದ್ದವು.

೧೯೯೧-೯೨ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ೬೬೯೨ ಕಿ.ಮೀ. ಉದ್ದದ ರಸ್ತೆ ಇದ್ದು, ಇದರಲ್ಲಿ ೭೯೭ ಕಿ.ಮೀ. ರಾಜ್ಯ ಹೆದ್ದಾರಿ, ೯೧೫ ಕಿ.ಮೀ. ಜಿಲ್ಲೆ ಮುಖ್ಯರಸ್ತೆ, ೮೯ ಕಿ.ಮೀ. ಇತರ ಜಿಲ್ಲಾ ರಸ್ತೆ, ೨೪೪೩ ಕಿ.ಮೀ. ಗ್ರಾಮಾಂತರ ರಸ್ತೆ, ೧೪೫೪ ಕಿ.ಮೀ. ಟಿ.ಡಿ.ಬಿ. ರಸ್ತೆ, ೫ ಕಿ.ಮೀ. ಅರಣ್ಯ ರಸ್ತೆ, ೯೩೦ ಕಿ.ಮೀ. ನೀರಾವರಿ ರಸ್ತೆ, ೫೭ ಕಿ.ಮೀ. ಮುನಿಸಿಪಾಲಿಟಿ ರಸ್ತೆ, ೨ ಕಿ.ಮೀ. ಪಂಚಾಯತ್ ರಸ್ತೆಗಳಿದ್ದವು. ಇದಲ್ಲದೆ ೨೦೭ ಕಿ.ಮೀ. ಬ್ರಾಡ್‌ಗೇಜ್ ರೈಲ್ವೆ ಮಾರ್ಗವಿದೆ ಹಾಗೂ ೨೩ ರೈಲ್ವೆ ನಿಲ್ದಾಣಗಳಿವೆ.

೧೯೯೩-೯೪ರಲ್ಲಿದ್ದಂತೆ ಜಿಲ್ಲೆಯಲ್ಲಿನ ತಾಲೂಕುವಾರು ವಿದ್ಯುಚ್ಛಕ್ತಿ ಒದಗಿಸಲ್ಪಟ್ಟ ಹೊಸ ಗ್ರಾಮಗಳು ಮತ್ತು ನೀರಾವರಿ ಪಂಪುಸೆಟ್ಟುಗಳು (ಆವರಣದಲ್ಲಿ ಕೊಟ್ಟಿರುವುದು ಒಟ್ಟು ಪಂಪ್‌ಸೆಟ್ಟುಗಳ ಸಂಖ್ಯೆ.)

| | | |
|---|---|---|
| ಅಫಜಲ್‌ಪುರ | - | ೦೮ (೫೯೮೩) ಪಂಪ್‌ಸೆಟ್ಟುಗಳು |
| ಆಳಂದ | - | ೨೯ (೭೩೩೯) |
| ಚಿಂಚೋಳಿ | - | ೨೩ (೨೧೩೮) |
| ಚಿತ್ತಾಪುರ | - | ೨೨ (೧೧೮೧) |
| ಗುಲಬರ್ಗಾ | - | ೨೨ (೫೬೬೧) |
| ಜೇವರ್ಗಿ | - | ೦೫ (೧೩೩೨) |
| ಸೇಡಂ | - | ೦೬ (೯೫೬) |
| ಶಹಾಪುರ | - | ೦೬ (೯೩೭) |
| ಸುರಪುರ | - | ೧೦ (೧೬೩೬) |
| ಯಾದಗಿರ | - | ೧೧ (೧೧೬೭) |
| ಜಿಲ್ಲೆಯ ಮೊತ್ತ. | - | ೧೪೨ (೨೮೩೯೦) |

**ಕೋಷ್ಟಕ ೮.೩೦**

೧೯೬೦-೬೧ರಿಂದ ೧೯೯೦-೯೧ರವರೆಗೆ ಜಿಲ್ಲೆಯಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ಸೂಚಿಸುವ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ.

| ಕ್ರಮ ಸಂಖ್ಯೆ | ವಿಷಯ | ಮಾನ (ಯೂನಿಟ್) | ೧೯೬೦-೬೧ | ೧೯೭೦-೭೧ | ೧೯೮೦-೮೧ | ೧೯೯೦-೯೧ |
|---|---|---|---|---|---|---|
| ೧. | ಜನಸಾಂದ್ರತೆ | ಸಂಖ್ಯೆ | ೮೬ | ೧೦೭ | ೧೨೮ | ೧೫೯ |
| ೨. | ಒಟ್ಟು ಜನಸಂಖ್ಯೆಯಲ್ಲಿ ಕೆಲಸಗಾರು | ಶೇಕಡಾ | ೪೭.೩ | ೩೪.೯ | ೪೫.೩ | ೩೬.೦ |
| ೩. | ಒಟ್ಟು ಕೆಲಸಗಾರರಲ್ಲಿ ವ್ಯವಸಾಯದಲ್ಲಿ ತೊಡಗಿದವರು | " | ೪೫.೫ | ಲವಿ | ೨೮.೬೧ | ೪೪.೦೦ |
| ೪. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಅರಣ್ಯ ಪ್ರದೇಶ | " | ೨೪.೦ | ೪.೪ | ೨.೮೯ | ೪.೨೨ |
| ೫. | ಒಟ್ಟು ಭೌಗೋಳಿಕ ಪ್ರದೇಶ ದಲ್ಲಿ ಬಿತ್ತನೆ ಪ್ರದೇಶ | " | ೯೯.೮೦ | ೯೬.೫ | ೯೨.೯ | ೮೭.೮ |
| ೬. | ತಲಾ ಬಿತ್ತನೆಯಾದ ಪ್ರದೇಶ | ಶೇಕಡಾ | ಲವಿ | ೦.೭೧ | ೦.೬೦ | ೦.೭೧ |

| | | | | | | |
|---|---|---|---|---|---|---|
| ೭. | ನಿವ್ವಳ ಬಿತ್ತನೆ ಪ್ರದೇಶದಲ್ಲಿ ನಿವ್ವಳ ನೀರಾವರಿಯಾದ ಪ್ರದೇಶ | ಶೇಕಡಾ | ೧.೩ | ೧.೮ | ೨.೩ | ೧೪.೦೬ |
| ೮. | ಒಟ್ಟು ಬಿತ್ತನೆ ಪ್ರದೇಶದಲ್ಲಿ ಅಧಿಕ ಇಳುವರಿ ತಳಿಗಳ ಪ್ರದೇಶ | ಶೇಕಡಾ | ಲವಿ | ೧.೨ | ೩.೪ | ೫೪.೬ |
| ೯. | ಒಟ್ಟು ಬಿತ್ತನೆ ಪ್ರದೇಶದಲ್ಲಿ | | | | | |
| | ಅ) ಏಕದಳ ಧಾನ್ಯಗಳ ಪ್ರದೇಶ | " | ೬೬ | ೪೨.೬ | ೪೫.೫ | ೩೯.೫ |
| | ಬ) ದ್ವಿದಳ ಧಾನ್ಯಗಳ ಪ್ರದೇಶ | " | ೧೪ | ೨೧.೮ | ೨೪.೬ | ೩೩.೪ |
| | ಕ) ಎಣ್ಣೆಕಾಳುಗಳ ಪ್ರದೇಶ | " | ೧೪ | ೨೨.೫ | ೧೭.೦ | ೨೮.೬ |
| | ಬ) ಹತ್ತಿ ಪ್ರದೇಶ | " | ೩ | ೧೦.೨೨ | ೯.೭೫ | ೦.೩೮ |
| ೧೦. | ರಸಾಯನಿಕ ಗೊಬ್ಬರ ಬಳಕೆ | ಟನ್ನು | ೪೯೫ | ಲವಿ | ೫೯೭೯ | ೩೨,೨೦೦ |
| ೧೧. | ಜೋಳದ ಉತ್ಪತ್ತಿ ಎಕರೆಗೆ | ಕೆ.ಜಿ. | ೩೩೬ | ೫೭೦ | ೭೩೧ | ೪೭೮ |
| ೧೨. | ತೊಗರಿ ಉತ್ಪತ್ತಿ " | " | ೫೧೪ | ೪೭೫ | ೨೫೬ | ೩೯೬ |
| ೧೩. | ಶೇಂಗಾ ಉತ್ಪತ್ತಿ " | " | ೫೦೪ | ೮೫೭ | ೩೫೦ | ೮೩೬ |
| ೧೪. | ಸಜ್ಜೆ ಉತ್ಪತ್ತಿ " | " | ೧೯೩ | ೭೬೯ | ೪೬೩ | ೬೩೬ |
| ೧೫. | ಗೋಧಿ ಉತ್ಪತ್ತಿ | ಎಕರೆಗೆ | ೧೯೦ | ೬೭೫ | ೫೫೭ | ೬೮೯ |
| ೧೬. | ಕುಸುಬೆ " | " | ಲವಿ | ೧೬೨ | ೭೯೯ | ೬೩೮ |
| ೧೭, | ಸೂರ್ಯಕಾಂತಿ | " | ಲವಿ | ಲವಿ | ೪೪೭ | ೨೮೬ |
| ೧೮. | ಗ್ರಾಮಗಳ ವಿದ್ಯುದೀಕರಣ | ಶೇಕಡಾ | -- | ೩೫.೪ | ೫೬.೯ | ೯೯.೫ |
| ೧೯. | ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ | ಸಂಖ್ಯೆ | -- | ೨೬.೭೮ | ೭೨೩೯ | ೨೩,೭೩೧ |
| ೨೦. | ತಲಾ ಉಪಯೋಗಿಸುವ ವಿದ್ಯುಚ್ಛಕ್ತಿ | ಕಿ.ವ್ಯಾ. | -- | -- | ೭೮ | ೧೮೨ |
| ೨೧. | ಕೈಗಾರಿಕಾ ವಲಯದಲ್ಲಿ ವಿದ್ಯುಚ್ಛಕ್ತಿ ಉಪಯೋಗ | ಶೇ. | -- | -- | ೮೫.೭೦ | ೬೪.೦೦ |
| ೨೨. | ಗೃಹಬಳಕೆಗೆ | ಶೇ. | -- | -- | ೪.೭ | ೧೧.೦ |
| ೨೩. | ವ್ಯವಸಾಯಕ್ಕಾಗಿ | ಶೇ. | -- | -- | ೬.೭ | ೧೯.೦ |
| ೨೪. | ಇತರೆ ವಲಯಗಳಿಗೆ | ಶೇ. | -- | -- | ೩.೬ | ೬.೦ |
| ೨೫. | ಒಂದು ಲಕ್ಷ ಜನಸಂಖ್ಯೆಗೆ ಬ್ಯಾಂಕುಗಳು | ಸಂಖ್ಯೆ | -- | ೪.೮ | ೫.೨ | ೬.೫೦ |
| ೨೬. | ೧ ಲಕ್ಷ ಜನಸಂಖ್ಯೆಗೆ ಬ್ಯಾಂಕ್ ಠೇವಣಿ | ಕೋಟಿ ರೂ. | -- | ಲವಿ | ಲವಿ | ೯.೮೦ |

| | | | | | | |
|---|---|---|---|---|---|---|
| ೨೭. | ೧ ಲಕ್ಷ ಜನಸಂಖ್ಯೆಗೆ ರಸ್ತೆಯ ಉದ್ದಳತೆ | ಕಿ.ಮೀ. | ೮೫.೫ | ೧೫೪.೫ | ೨೧೨.೧ | ೨೪೯ |
| ೨೮. | ೧೦೦ ಚ.ಕಿ.ಮೀ. ಪ್ರದೇಶಕ್ಕೆ ರಸ್ತೆಯ ಉದ್ದ | ಕಿ.ಮೀ. | ೭.೪ | ೧೬.೬ | ೨೭.೨ | ೪೧.೩ |
| ೨೯. | ೧ ಲಕ್ಷ ಜನಸಂಖ್ಯೆಗೆ ದುರವಾಣಿ | ಸಂಖ್ಯೆ | -- | ೭೮ | ೧.೨೨ | ೧೪೪ |
| ೩೦. | ೧ ಲಕ್ಷ ಜನಸಂಖ್ಯೆಗೆ ಅಂಚೆ ಕಛೇರಿ | ಸಂಖ್ಯೆ | -- | ೩೧ | ೨೯ | ೨೩ |
| ೩೧. | ತಲಾ ಆದಾಯ (ಚಾಲ್ತಿ ಬೆಲೆಗಳಲ್ಲಿ) (೧೯೯೧-೯೨ ಸಾಲಿಗೆ ಸಂಬಂಧಪಟ್ಟು) | ರೂ. | -- | ೫೯೯ | ೧೩೮೫ | ೪೭೩೨ |
| ೩೨. | ತಲಾ ಆದಾಯ (ಸ್ಥಿರ ಬೆಲೆಗಳಲ್ಲಿ) | -- | -- | ೫೯೯ | ೧೩೮೫ | ೧೭೯೪ |
| ೩೩. | ಸಾಕ್ಷರತೆ (ಗಂಡಸರು) | ಶೇ. | ೨೪.೬ | ೨೮.೭ | ೩೬.೪ | ೫೨.೦೮ |
| | ಹೆಂಗಸರು | ಶೇ. | ೫.೩ | ೮.೬ | ೧೩.೩ | ೨೪.೪೯ |
| | ಒಟ್ಟು | ಶೇ. | ೧೫ | ೧೮.೭ | ೨೪.೯ | ೩೮.೫೪ |
| ೩೪. | ಒಂದು ಲಕ್ಷ ಜನಸಂಖ್ಯೆಗೆ ನ್ಯಾಯ ಬೆಲೆ ಅಂಗಡಿಗಳು | ಸಂಖ್ಯೆ | -- | -- | ೩೬ | ೪೪ |
| ೩೫. | ಚಿತ್ರಮಂದಿರಗಳು ಮತ್ತು ಜನಸಂಖ್ಯೆ ಅನುಪಾತ | ನೂರು ಸಂಖ್ಯೆಗಳಲ್ಲಿ | ೧೨೭೨ | ೧೨೪೩ | ೧೦೯೨ | ೯೬೦ |
| ೩೬. | ಆರೋಗ್ಯ ಸಂಸ್ಥೆ ಮತ್ತು ಜನಸಂಖ್ಯೆ ಅನುಪಾತ | " | ೪೨೪ | ೨೬೪ | ೨೪೧ | ೧೮೫ |
| ೩೭. | ೧ ಲಕ್ಷ ಜನಸಂಖ್ಯೆಯಲ್ಲಿ ಕೆಲಸಕ್ಕಾಗಿ ನೊಂದಾಯಿಸಿದ ಅಭ್ಯರ್ಥಿಗಳು | ಸಂಖ್ಯೆ | -- | -- | -- | ೨೨೧೬ |
| ೩೮. | ೧ ಲಕ್ಷ ಜನಸಂಖ್ಯೆಗೆ ಮೋಟಾರು ವಾಹನಗಳು | ಸಂಖ್ಯೆ | - | ೧೭೪ | ೪೩೩ | ೧೫೮೭ |

**ಆಧಾರ** - ಜಿಲ್ಲಾ ಸಂಖ್ಯೆ ಸಂಗ್ರಹಣಾಧಿಕಾರಿ, ಗುಲಬರ್ಗಾ

## ಕೋಷ್ಟಕ ೮.೩೧

## ಗುಲಬರ್ಗಾ ಜಿಲ್ಲೆಯಲ್ಲಿ ಕೆಲವು ಸಾಮಾಜಿಕ ಆರ್ಥಿಕ ಸೂಚ್ಯಂಕಗಳು

| ವಿವರ | ೧೯೭೦-೭೧ | ೧೯೭೫-೭೬ | ೧೯೮೦-೮೧ | ೧೯೮೫-೮೬ | ೧೯೯೦-೯೧ | ೧೯೯೧-೯೨ |
|---|---|---|---|---|---|---|
| ೧. ಒಟ್ಟು ಭೌಗೋಳಿಕ ಕ್ಷೇತ್ರದಲ್ಲಿ ಅರಣ್ಯ ಪ್ರದೇಶದ ಕ್ಷೇತ್ರದ ಶೇಕಡಾ | ೪.೪೫ | ೪.೩೭ | ೪.೩೨ | ೪.೧೧ | ೪.೨೩ | ೪.೨೩ |
| ೨. ಒಟ್ಟು ಭೋಗೋಳಿಕ ಕ್ಷೇತ್ರದ ಕೃಷಿಯೇತರ ಉಪಯೋಗಕ್ಕಾಗಿ ಇರುವ ಪ್ರದೇಶದ ಶೇಕಡಾ | ೨.೯೧ | ೨.೯೮ | ೨.೮೯ | ೩.೨೨ | ೩.೩೭ | ೩.೩೮ |
| ೩. ಒಟ್ಟು ಭೌಗೋಳಿಕ ಕ್ಷೇತ್ರದ ಸಾಗುವಳಿ ಮಾಡದಿರುವ ಮತ್ತು ಬೀಳು ಭೂಮಿಯ ಶೇ. | ೫.೧೨ | ೪.೬೨ | ೪.೨೯ | ೩.೯೫ | ೩.೯೫ | ೩.೯೫ |
| ೪. ಒಟ್ಟು ಭೌಗೋಳಿಕ ಶಾಶ್ವತ ಗೋಮಾಳ ಮತ್ತು ಇತರ ಹುಲ್ಲುಗಾವಲು ಪ್ರದೇಶದ ಶೇಕಡಾ | ೩.೯೬ | ೩.೨೨ | ೨.೯೪ | ೨.೫೫ | ೨.೫೩ | ೨.೫೩ |
| ೫. ಒಟ್ಟು ಭೌಗೋಲಿಕ ಕ್ಷೇತ್ರದ ಮರಗಳು, ಹಣ್ಣು ಬೆಳೆಯುವ ಪ್ರದೇಶದ ಶೇಕಡಾ | ೦.೧೮ | ೦.೦೭ | ೦.೦೮ | ೦.೦೭ | ೦.೧೦ | ೦.೧೦ |
| ೬. ಒಟ್ಟು ಭೋಗೋಳಿಕ ಕ್ಷೇತ್ರದ ಸಾಗುವಳಿ ಮಾಡದಿರುವ ಇತರ ಬೀಳು ಭೂಮಿಯ ಶೇ. | ೧.೩೮ | ೧.೦೭ | ೦.೯೧ | ೦.೯೮ | ೦.೭೪ | ೦.೭೪ |
| ೭. ಒಟ್ಟು ಭೌಗೋಳಿಕ ಕ್ಷೇತ್ರದ ಬಿತ್ತನೆಯಾದ ನಿವ್ವಳ ಪ್ರದೇಶದ ಶೇ. | ೭೫.೩೬ | ೭೩.೨೨ | ೭೩.೧೭ | ೭೭.೯೯ | ೭೧.೯೪ | ೭೧.೫೫ |
| ೮. ಒಟ್ಟು ಸಾಗುವಳಿ ಮಾಡಬಹುದಾದ ಕ್ಷೇತ್ರದ ನಿವ್ವಳ ಬಿತ್ತನೆಯಾದ ಪ್ರದೇಶದ ಶೇಕಡಾ | ೯೦.೩೮ | ೮೬.೪೦ | ೮೫.೭೦ | ೯೦.೫೭ | ೮೩.೮೨ | ೮೩.೩೭ |

| | | | | | | |
|---|---|---|---|---|---|---|
| ೯. ನಿವ್ವಳ ಬಿತ್ತನೆಯಾದ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆ ಯಾದ ಪ್ರದೇಶದ ಶೇ. | ೩.೬೬ | ೫.೬೬ | ೭.೬೨ | ೬.೩೩ | ೧೨.೮೫ | ೧೪.೦೩ |
| ೧೦. ನಿವ್ವಳ ಬಿತ್ತನೆಯಾದ ಕ್ಷೇತ್ರದಲ್ಲಿ ನೀರಾವರಿ ಪ್ರದೇಶದ ಶೇಕಡಾ | ೧.೭ | ೨.೫ | ೨.೩ | ೩.೩. | ೧೧.೪ | ೧೪.೧ |
| ೧೧ ಒಟ್ಟು ನೀರಾವರಿ ಪ್ರದೇಶ ದಲ್ಲಿ ಕಾಲುವೆಗಳಿಂದ ನೀರಾವರಿಯಾದ ಪ್ರದೇಶದ ಶೇ. | ೩.೩೨ | ೯.೪೦ | ೧೧.೩೦ | ೩೯.೩೭ | ೬೧.೭೩ | ೬೫.೧೧ |

**ಕೋಷ್ಟಕ ೮.೩೩**

**ಗುಲಬರ್ಗಾ ಜಿಲ್ಲೆಯಲ್ಲಿ ಇಂದಿರಾ ಆವಾಸ್ ಯೋಜನೆಯಲ್ಲಿ ಭೌತಿಕ ಮತ್ತು ಆರ್ಥಿಕ ಪ್ರಗತಿಯ ವಿವರ**
**(೧೯೯೨-೯೩ ರಿಂದ ೧೯೯೫-೯೬)**

ತಾಲೂಕಿನ ವಿವರ

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಮುಕ್ತಾಯಗೊಂಡ ಒಟ್ಟು ಮನೆಗಳು | ಬಿಡುಗಡೆ ಮಾಡಲಾದ ಹಣ | ಖರ್ಚಾದ ಹಣ (ಲ.ರೂ.ಗಳಲ್ಲಿ) |
|---|---|---|---|---|
| ೧. | ಅಫಜಲ್‌ಪುರ | ೪೦ | ೫.೫೦೪ | ೫.೫೦೪ |
| ೨. | ಆಳಂದ | ೪೦ | ೫.೫೦೪ | ೫.೫೦೪ |
| ೩. | ಚಿಂಚೋಳಿ | ೩೮ | ೫.೧೩೨ | ೫.೧೩೨ |
| ೪. | ಚಿತ್ತಾಪುರ | ೩೮ | ೫.೧೩೨ | ೫.೧೩೨ |
| ೫. | ಗುಲಬರ್ಗಾ | ೪೦ | ೫.೫೦೪ | ೫.೫೦೪ |
| ೬. | ಜೇವರ್ಗಿ | ೪೦ | ೫.೫೦೪ | ೫.೫೦೪ |
| ೭. | ಸೇಡಂ | ೩೯ | ೫.೨೫೯ | ೫.೨೫೯ |
| ೮. | ಶಹಾಪೂರ | ೪೦ | ೫.೫೦೪ | ೫.೫೦೪ |
| ೯. | ಸುರಪುರ | ೪೦ | ೫.೫೦೪ | ೫.೫೦೪ |
| ೧೦. | ಯಾದಗಿರಿ | ೪೦ | ೫.೫೦೪ | ೫.೫೦೪ |
| | ಒಟ್ಟು | ೩೯೫ | ೫೩.೩೫೧ | ೫೨.೯೬೦ |

## ಕೋಷ್ಟಕ ೮.೩೨

### ಗುಲ್ಬರ್ಗಾ ಜಿಲ್ಲೆಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಗುರಿ ಹಾಗೂ ಸಾಧನೆ (೧೯೯೪-೯೫ನೇ ಸಾಲು)

| ಕ್ರ.ಸಂ. | ಕಾರ್ಯಕ್ರಮದ ಹೆಸರು | ಭೌತಿಕ ಘಟಕ | ವಾರ್ಷಿಕ ಗುರಿ | | ಸಂಚಿತ ಸಾಧನೆ | | ಪ್ರತಿಶತ | |
|---|---|---|---|---|---|---|---|---|
| | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೧. | ಐ.ಆರ್.ಡಿ.ಪಿ. | ಸಂಖ್ಯೆ ಲಕ್ಷ ರೂ. | ೭೩೪೬ | ೩೬೭.೩ | ೭೧೪೬ | ೨೭೩.೩೫೪ | ೯೭.೨ | ೭೪.೪ |
| ೨. | ಜವಾಹರ್ ರೋಜಗಾರ್ ಯೋಜನೆ | ಘಟಕ | ೧೬.೪೭೩ | | ೧೩.೪೨೧ | | ೮೧.೫ | ೮೧.೫ |
| | | ಲಕ್ಷ ರೂ.ಗಳಲ್ಲಿ | | ೭೧೩.೮೮೨ | | ೫೮೧.೫೯೩ | | -- |
| ೩. | ಇಂದಿರಾ ಅವಾಸ್ ಯೋಜನೆ | ಮನೆಗಳ ಸಂಖ್ಯೆ | ೧೦೧೯ | | ೧೧೦೫ | | ೧೦೮ | ೯೯.೭ |
| | | ಲಕ್ಷ ರೂ. | | ೧೪೯.೪೨೦ | | ೧೪೯.೦೨೨ | | |
| ೪. | ದಶಲಕ್ಷ ಬಾವಿ ಯೋಜನೆ | ಲಕ್ಷ ಮಾನವ ದಿನಗಳು | ೧೦.೭೦೨ | | ೧೦.೨೬೬ | | ೯೫.೯ | ೯೫.೯ |
| | | ಲಕ್ಷ ರೂ. | | ೪೬೩.೭೭೦ | | ೪೪೪.೮೯೧ | | |
| ೫. | ಉದ್ಯೋಗ ಭರವಸೆ ಯೋಜನೆ | ಲಕ್ಷ ಮಾನವ ದಿನಗಳು | ೧೭.೪ | | ೧೬.೬೨೪ | | ೯೫.೫ | ೯೪.೬ |
| | | ಲಕ್ಷ ರೂ. | | ೭೬೧.೨೫೦ | | ೭೨೦.೪೦೭ | | |
| ೬. | ಡಿ. ಪಿ. ಎ. ಪಿ. | ಲಕ್ಷ ಮಾನವ ದಿನಗಳು | ೫.೦೦೫ | | ೩.೬೮೩ | | ೭೩.೦ | |
| | | ಲಕ್ಷ ರೂ. | | ೨೪೧.೦೦೦ | | ೧೫೦.೫೨೬ | | ೬೨.೫ |
| ೭. | ಜೈವಿಕ ಅನಿಲ ಯೋಜನೆ | ಸಂಖ್ಯೆ | ೨೯೨ | | ೩೭೨ | | ೧೨೭.೪ | |
| | | ಲಕ್ಷ ರೂ. | | ೨೧.೦೦ | | ೨೩.೪೭೯ | | ೧೦೭.೧ |
| ೮. | ಗ್ರಾಮೀಣ ಇಂಧನ ಕಾರ್ಯಕ್ರಮ | ಸಂಖ್ಯೆ | ೧೬೫೪ | | ೧೬೫೪ | | ೧೦೦ | |
| | | ಲಕ್ಷರೂ. | | ೪.೦೦೦ | | ೩.೮೧೦ | | ೯೫.೨ |
| ೯. | ಟ್ರೈಸಂ | ಸಂಖ್ಯೆ | ೧೦೪೦ | | ೧೨೧೦ | | ೧೧೬.೦ | |
| | | ಲಕ್ಷರೂ. | | ೫೨.೯೦೯ | | ೪೯.೨೦೩ | | ೯೨.೯ |
| ೧೦. | ಡ್ವಾಕ್ರಾ | ಸಂಖ್ಯೆ | ೧೦ | | ೧೦ | | ೧೦೦ | |
| | | ಲಕ್ಷ ರೂ. | | ೧.೫೨೦ | | ೧.೫೨೦ | | ೧೦೦ |

## ಕೋಷ್ಟಕ ೮.೩೪

## ಗುಲಬರ್ಗಾ ಜಿಲ್ಲೆಯಲ್ಲಿ ಮಾರ್ಚ್ ೧೯೯೫ರವರೆಗೆ ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ಪ್ರಗತಿ

(ತಾಲೂಕುವಾರು)

(ರೂ. ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ತಾಲೂಕು | ಭೌತಿಕ ಒಟ್ಟು ಪೂರ್ಣಗೊಳ್ಳಬೇಕಾಗಿರುವ ಬಾವಿಗಳು | ೧೯೯೪-೯೫ನೇ ಸಾಲಿನಲ್ಲಿ ಪೂರ್ಣಗೊಂಡ ಬಾವಿಗಳು | ೧.೪.೯೪ರಲ್ಲಿ ಬಾವಿಗಾಗಿ ಇದ್ದ ಹಣ | ಆರ್ಥಿಕ 94-95ನೇ ಸಾಲಿನಲ್ಲಿ ಆದ ಒಟ್ಟು ಖರ್ಚು | ಬಾಕಿ ಉಳಿದ ಹಣ |
|---|---|---|---|---|---|---|
| ೧. | ಅಫಜಲ್‌ಪುರ | ೧೫೯ | ೬೬ | ೧೭.೫೫೪ | ೧೫.೨೦೦ | ೨.೩೫೪ |
| ೨. | ಆಳಂದ | ೧೮೧ | ೩೨ | ೨೧.೫೪೦ | ೧೮.೪೬೪ | ೩.೦೭೬ |
| ೩. | ಚಿಂಚೋಳಿ | ೩೬೭ | ೦೫ | ೨೪.೮೨೨ | ೫.೧೭೪ | ೧೯.೬೪೮ |
| ೪. | ಚಿತ್ತಾಪುರ | ೨೫೪ | ೨೯ | ೧೫.೭೩೦ | ೮.೩೦೬ | ೭.೪೨೪ |
| ೫. | ಗುಲಬರ್ಗಾ | ೨೮೩ | ೦೩ | ೨೬.೭೩೪ | ೭.೩೨೦ | ೧೯೪೨೩ |
| ೬. | ಜೇವರ್ಗಿ | ೩೬೪ | ೧೩೭ | ೧೯.೬೨೧ | ೧೩.೧೨೧ | ೬.೫೦೦ |
| ೭. | ಸೇಡಂ | ೧೧೯ | ೫ | ೧೩.೪೧೭ | ೫.೯೧೫ | ೭.೫೦೨ |
| ೮. | ಶಹಾಪುರ | ೧೦೯ | ೬ | ೮.೭೮೭ | ೩.೨೮೮ | ೫.೪೯೯ |
| ೯. | ಸುರಪುರ | ೯೭ | ೧೯ | ೭.೨೭೩ | ೬.೦೬೬ | ೧.೨೦೭ |
| ೧೦. | ಯಾದಗಿರಿ | ೨೫೮ | ೧೬ | ೨೯.೪೪೮ | ೪.೭೦೬ | ೨೪.೭೪೨ |
| ೧೧. | ಸಹಾಯಕ ನಿರ್ದೇಶಕರು ಭೂ.ಸೇ.ಸಂ. ಎಸ್.ಆರ್.ವಿ.ಪಿ. ಗುಲಬರ್ಗಾ | -- | -- | ೧೧.೫೦೦ | ೧೧.೫೦೦ | -- |
| ೧೨. | ಉಪ ನಿರ್ದೇಶಕರು ಭೂ.ಸೇ.ಸಂ. ಗುಲಬರ್ಗಾ | ೧೩೭೦ | ೧೩೭೦ | ೩೪೫.೯೯೪ | ೩೪೫.೮೩೧ | ೦೦.೧೬೩ |
| | ಮೊತ್ತ | ೨೧೯೧ +೧೩೭೦ | ೩೧೮ +೧೩೭೦ | ೫೪೨.೪೨೯ | ೪೪೪.೮೯೧ | ೧೧೯.೮೯೨ |

(ಆಧಾರ : ಜಿಲ್ಲಾ ಪಂಚಾಯತ್ ಗುಲಬರ್ಗಾ)

## ಕೋಷ್ಟಕ ೮.೩೫

### ಗುಲಬರ್ಗಾ ಜಿಲ್ಲೆಯಲ್ಲಿ ಉದ್ಯೋಗ ಭರವಸೆ ಯೋಜನೆಯಲ್ಲಿ ಮಾರ್ಚ್ ೧೯೯೫ರ ವರೆಗಿನ ಪ್ರಗತಿ

| ಕ್ರಮ ಸಂಖ್ಯೆ | ಅನುಷ್ಠಾನಾಧಿಕಾರಿಗಳ ಹೆಸರು | ಪ್ರಾಜೆಕ್ಟ್ ಪ್ರಕಾರ ತೆಗೆದುಕೊಂಡ ಕೆಲಸಗಳು | ನಿಗದಿ ಪಡಿಸಿದ | ಒಟ್ಟು ಖರ್ಚು ಮಾಡಿದ ಹಣ | ಶಿಲ್ಕು | ಒಟ್ಟು ಮುಗಿದ ಕಾಮಗಾರಿಗಳು | ಶಿಲ್ಕು ಕಾಮಗಾರಿಗಳು |
|---|---|---|---|---|---|---|---|
| | | | | (ಲಕ್ಷ ರೂ.) | | | |
| ೧. | ಕೃಷಿ ಉಪ ನಿರ್ದೇಶಕರು (ಭೂ. ಸಂ) ಗುಲಬರ್ಗಾ | ೨೧೪ | ೬೦.೦೦ | ೬೦.೦೦ | -- | ೨೧೪ | -- |
| ೨. | ಉಪ ಸಂರಕ್ಷಣಾಧಿಕಾರಿಗಳು (ಸಾ.ಅ.) ಗುಲಬರ್ಗಾ | ೨೧೯ | ೪೦.೦೦ | ೪೦.೦೦ | -- | ೧೮೬ | ೩೩ |
| ೩. | ಕಾ.ನಿ.ಅ. ಜಿ.ಪಂ.ಇಂ.ವಿಭಾಗ ಗುಲಬರ್ಗಾ | ೪೫ | ೬೦.೦೦ | ೪೪.೮೦ | ೧೫.೨೦ | ೨೫ | ೨೦ |
| ೪. | ಯಾದಗಿರಿ | ೫೯ | ೮೦.೦೦ | ೬೬.೦೫೪ | -- | ೪೪ | ೧೫ |
| ೫. | ಕ್ಷೇತ್ರಾಭಿವೃದ್ಧಿ ಅಧಿಕಾರಿ ಅಫಜಲ್‌ಪುರ | ೧೨ | ೭.೨೦ | ೪.೯೮೭ | ೨.೨೧೩ | ೩ | ೯ |
| ೬. | ಕ್ಷೇತ್ರಾಭಿವೃದ್ಧಿ, ಅಧಿಕಾರಿ ಆಳಂದ | ೧೨ | ೭.೨೦ | ೪.೧೫೭ | ೩.೦೪೩ | ೨ | ೧೦ |
| ೭. | " ಚಿತ್ತಾಪುರ | ೧೩ | ೭.೮೦ | ೬.೫೭೬ | ೧.೨೨೪ | ೧೦ | ೩ |
| ೮. | " ಗುಲಬರ್ಗಾ | ೧೩ | ೭.೬೦ | ೫.೩೬ | ೨.೨೪ | ೩ | ೧೦ |
| ೯. | " ಸೇಡಂ | ೧೩ | ೭.೬೦ | ೬.೩೨ | ೧.೨೭೬ | ೫ | ೮ |
| ೧೦. | " ಶಹಾಪುರ | ೧೨ | ೭.೨೦ | ೨.೨೦ | ೫.೦೦ | -- | ೧೨ |
| ೧೧. | " ಸುರಪುರ | ೧೩ | ೭.೮೦ | ೩.೯೫೮ | ೩.೮೪೨ | ೯ | ೪ |
| ೧೨. | " ಯಾದಗಿರಿ | ೧೩ | ೭.೬೦ | ೭.೦೬೦ | ೦.೫೪೦ | ೧೧ | ೨ |
| | ಒಟ್ಟು | ೬೩೮ | ೩೦೦.೦೦ | ೨೫೧.೪೭೬ | ೪೮.೫೨೪ | ೫೧೨ | ೧೨೬ |

(ಆಧಾರ : ಜಿಲ್ಲಾ ಪಂಚಾಯತ್ - ಗುಲಬರ್ಗಾ)

## ಕೋಷ್ಟಕ ೮.೩೬

### ೧೯೯೪-೯೫ನೇ ಸಾಲಿನಲ್ಲಿ ಜವಾಹರ ರೋಜಗಾರ್ ಯೋಜನೆಯಡಿಯಲ್ಲಿ ಪ್ರಗತಿಯ ವರದಿ

| ಗ್ರಾಮ ತಾಲೂಕುಗಳು | ಪಂಚಾಯತಿಗಳು | ಒಟ್ಟು ನಿಗದಿಪಡಿಸಿದ ಹಣ ಲಕ್ಷ ರೂ. | ಖರ್ಚಾದ ಹಣ ಲಕ್ಷ ರೂ. | ಮುಗಿದ ಕಾಮಗಾರಿಗಳು ಸಂಖ್ಯೆ |
|---|---|---|---|---|
| ಅಫಜಲ್‌ಪುರ | ೨೩ | ೪೫ | ೪೪ | ೮೧ |
| ಆಳಂದ | ೩೮ | ೯೬ | ೪೭ | ೭೫ |
| ಚಿಂಚೋಳಿ | ೩೨ | ೮೦ | ೬೭ | ೧೧೮ |
| ಚಿತ್ತಾಪುರ | ೩೬ | ೮೦ | ೬೬ | ೨೩೮ |
| ಗುಲಬರ್ಗಾ | ೩೮ | ೮೪ | ೬೬ | ೧೪೦ |
| ಜೇವರ್ಗಿ | ೩೪ | ೬೦ | ೪೩ | ೧೧೨ |
| ಸೇಡಂ | ೨೩ | ೪೭ | ೩೬ | ೧೬೧ |
| ಶಹಾಪುರ | ೩೬ | ೭೨ | ೬೦ | ೧೭೦ |
| ಸುರಪುರ | ೪೧ | ೮೪ | ೮೨ | ೧೫೦ |
| ಯಾದಗಿರಿ | ೩೯ | ೭೬ | ೭೧ | ೩೦೯ |
| ಒಟ್ಟು | ೩೪೦ | ೭೨೪ | ೫೮೨ | ೧೫೫೪ |

**ಕೋಷ್ಟಕ ೮.೩೭**

**ಇಂದಿರಾ ಆವಾಜ್ ಯೋಜನೆಯಲ್ಲಿ ೧೯೯೧-೯೨ ರಿಂದ ೧೯೯೪-೯೫ರ ವರೆಗೆ**

ಗುಲಬರ್ಗಾ ಜಿಲ್ಲೆಯಲ್ಲಿ ಭೌತಿಕ ಮತ್ತು ಆರ್ಥಿಕ ಪ್ರಗತಿ (ರೂ. ಲಕ್ಷಗಳಲ್ಲಿ)

| ತಾಲೂಕು | ೧೯೯೧-೯೨ | | ೧೯೯೨-೯೩ | | ೧೯೯೩-೯೪ | | ೧೯೯೪-೯೫ | |
|---|---|---|---|---|---|---|---|---|
| | ಕಟ್ಟಲ್ಪಟ್ಟ ಮನೆಗಳು | ಖರ್ಚಾದ ಹಣ | ಕಟ್ಟಲ್ಪಟ್ಟ ಮನೆಗಳು | ಖರ್ಚಾದ ಹಣ | ಕಟ್ಟಲ್ಪಟ್ಟ ಮನೆಗಳು | ಖರ್ಚಾದ ಹಣ | ಕಟ್ಟಲ್ಪಟ್ಟ ಮನೆಗಳು | ಖರ್ಚಾದ ಹಣ |
| ಅಫ್ಜಲಪುರ | ೪೧ | ೫.೫೪೯ | ೪೦ | ೫.೪೦೪ | ೮೯ | ೧೨.೫೭೮ | ೩೬ | ೧೦.೧೮೬ |
| ಆಳಂದ | ೪೧ | ೫.೫೪೯ | ೪೦ | ೫.೪೦೪ | ೧೧೪ | ೧೫.೬೮೦ | ೪೦ | ೬.೩೦೧ |
| ಚಿಂಚೋಳಿ | ೩೯ | ೫.೧೬೦ | ೩೮ | ೪.೭೪೧ | ೯೧ | ೭.೭೬೬ | ೯೨ | ೪.೬೬೨ |
| ಚಿತ್ತಾಪುರ | ೪೦ | ೪.೯೪೪ | ೩೮ | ೫.೧೩೨ | ೫೩ | ೧೦.೮೨೧ | ೨೬ | ೨.೭೪೦ |
| ಗುಲಬರ್ಗಾ | ೪೧ | ೫.೫೪೯ | ೪೦ | ೫.೪೦೪ | ೮೮ | ೧೦.೪೨೧ | ೨೬ | ೫.೮೯೩ |
| ಜೇವರ್ಗಿ | ೪೧ | ೫.೫೪೯ | ೪೦ | ೫.೪೦೪ | ೯೦ | ೧೨.೭೨೭ | ೨೬ | ೫.೮೯೩ |
| ಸೇಡಂ | ೪೦ | ೫.೪೨೨ | ೩೯ | ೫.೨೫೯ | ೯೩ | ೮.೯೯೬ | ೭೦ | ೯.೫೧೬ |
| ಶಹಾಪುರ | ೪೦ | ೫.೪೨೨ | ೪೦ | ೫.೪೦೪ | ೯೩ | ೧೨.೭೧೭ | ೫೪ | ೧೧.೦೮೮ |
| ಸುರಪುರ | ೪೦ | ೫.೫೪೯ | ೪೦ | ೫.೪೦೪ | ೭೦ | ೧೨.೭೧೩ | ೭೬ | ೯.೪೮೨ |
| ಯಾದಗಿರಿ | ೪೧ | ೫.೫೪೯ | ೪೦ | ೫.೪೦೪ | ೯೪ | ೧೧.೮೬೨ | ೭೮ | ೮.೮೧೫ |
| ಒಟ್ಟು | ೪೦೪ | ೫೪.೧೧೫ | ೩೯೫ | ೫೨.೯೬ | ೮೭೫ | ೧೧೬.೩೨೧ | ೫೪೬ | ೭೮.೯೨೭ |

ಆಧಾರ : ಜಿಲ್ಲಾ ಪಂಚಾಯತ್ - ಗುಲಬರ್ಗಾ

## ಕೋಷ್ಟಕ ೮.೩೮

## ೧೯೯೫-೯೬ನೇ ಸಾಲಿನಲ್ಲಿ ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ಕೆಲವು ವಿವರಗಳು

ತಾಲೂಕುವಾರು

| ತಾಲೂಕು | ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ | ಪ್ರಯೋಜನ ಪಡೆದವರ ಸಂಖ್ಯೆ ನೂರುಬಾವಿ ಯೋಜನೆ | ಟೈಸಂ | ಜವಹರ್ ರೋಜ್‌ಗಾರ್ ಯೋಜನೆ ಸೃಷ್ಟಿಸಲಾದ ಮಾನವ ದಿನಗಳು | ನೀಡಿದ ಮನೆ ನಿವೇಶನಗಳು | ಜನವಸತಿ ಕಾರ್ಯಕ್ರಮದಲ್ಲಿ ಕಟ್ಟಲ್ಪಟ್ಟ ಮನೆಗಳು |
|---|---|---|---|---|---|---|
| ಅಫಜಲ್‌ಪುರ | ೨೯೦ | ೫೬ | ೬೨ | ೨.೭೫೮ | ೪೯೦ | ೨೪೧ |
| ಆಳಂದ | ೮೧೩ | ೫೩ | ೭೦ | ೫.೦೩೪ | ೧೩೪೮ | ೫೦೯ |
| ಚಿಂಚೋಳಿ | ೫೯೬ | ೮೨ | ೭೫ | ೩.೮೮೬ | ೫೪೩ | ೧೯೨ |
| ಚಿತ್ತಾಪುರ | ೩೯೨ | ೨೦ | ೭೧ | ೩.೯೯೭ | -- | ೧೪೮ |
| ಗುಲಬರ್ಗಾ | ೭೯೮ | ೩೪ | ೮೦ | ೩.೫೫೨ | ೨೩೫ | ೫೬೨ |
| ಜೇವರ್ಗಿ | ೬೩೯ | ೨೪ | ೬೫ | ೩.೬೨೦ | ೪೬೬ | ೩೨೭ |
| ಸೇಡಂ | ೪೪೭ | ೩೮ | ೬೫ | ೨.೬೦೩ | ೭೩೪ | ೨೮೫ |
| ಶಹಾಪುರ | ೭೮೫ | ೧೯ | ೬೮ | ೩.೬೨೬ | ೮೨೫ | ೪೦೮ |
| ಸುರಪುರ | ೫೬೯ | ೨೮ | ೬೬ | ೩.೪೦೯ | ೨೨೩ | ೩೮೩ |
| ಯಾದಗಿರಿ | ೬೭೩ | ೧೫ | ೭೦ | ೩.೪೨೦ | ೮೧ | ೧೫೫ |
| ಮೊತ್ತ | ೬೦೧೨ | ೩೬೯ | ೬೯೨ | ೩೫.೮೮೫ | ೪೯೪೫ | ೪೨೧೦ |

(ಆಧಾರ : ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ)